ಸಂಪುಟ: 06 ಸಂಚಿಕೆ: 205 ಪುಟಗಳು: 08 ಶನಿವಾರ 10 ಅಕ್ಟೋಬರ್ 2026 www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 + 91 8035621249 ₹5

# ಉದಯ ವಾಹಿನಿ

UV
ಸರ್ವ ಸಮಾನತೆಯ
ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಈ ಜಗತ್ತಿನಲ್ಲಿ ಯಾರೂ ಯಾರನ್ನು ತಿದ್ದಲು ಸಾಧ್ಯವಿಲ್ಲ. ಒಂದು ವೇಳೆ ನಾವು ಯಾರನ್ನಾದರು ತಿದ್ದುತ್ತೇವೆ ಎಂದುಕೊಂಡರೆ ಅದು ನಮ್ಮ ಮೂರ್ಖತನ, ನಮ್ಮನ್ನು ನೋಡಿ ಬೇರೆಯವರು ತಿದ್ದಿಕೊಳ್ಳುವಂತೆ ನಾವು ಬದುಕಬೇಕು ಅಷ್ಟೇ,

# ಅರಳಿದ ಕಮಲ ಹೊಸ ಬಲ

**ಇನ್ನು ಹುಮಾಯೂನ್ ಕಬೀರ್ ಅವರ ಪಕ್ಷ ಆಮ್ ಜನತಾ ಉನ್ನಯನ್ ಅಂದರೆ ಎಜೆಯುಪಿ ಪಕ್ಷದಿಂದ ಅವರ ಪುತ್ರ ಗುಲಾಮ್ ನಹಿ ಆಜಾದ್ ಸ್ಪರ್ಧಿಸಿದ್ದು, ಎರಡನೇ ಸ್ಥಾನ ಪಡೆದ್ರು. ಕಾಂಗ್ರೆಸ್ ಅಭ್ಯರ್ಥಿ ಅಬುಲ್ಲಾಹಿಲ್ ಕಾಫಿ ಮೂರನೇ ಸ್ಥಾನ ಪಡೆದ್ರು. ಮಾಜಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ತೃಣಮೂಲ ಕಾಂಗ್ರೆಸ್ ನಾಲ್ಕನೇ ಸ್ಥಾನದಲ್ಲಿದೆ, ಸಿಪಿಎಂ ಐದನೇ ಸ್ಥಾನದಲ್ಲಿದೆ, ಡೆಮಾಕ್ರಟಿಕ್ ತೃಣಮೂಲ ಆರನೇ ಸ್ಥಾನದಲ್ಲಿದೆ.ಅತ್ತ ಮಾಜಿ ಸಿಎಂ ಮಮತಾ ಬ್ಯಾನರ್ಜಿ ಪ್ರತಿನಿಧಿಸುತ್ತಿದ್ದ, ಹಾಲಿ ಸಿಎಂ ಸುವೇಂದು ಅಧಿಕಾರಿ ಅವರಿಂದ ತೆರವಾದ ನಂದಿಗ್ರಾಮ ಕ್ಷೇತ್ರದಲ್ಲಿಯೂ ಬಿಜೆಪಿ ಗೆದ್ದು ಬೀಗಿದೆ. ನಂದಿಗ್ರಾಮ್‌ನಲ್ಲಿ ಬಿಜೆಪಿ ಅಭ್ಯರ್ಥಿ ಹಾಸಿರಾಣಿ ರಥ್ ಬರೋಬ್ಬರಿ 1 ಲಕ್ಷ 22 ಸಾವಿರಕ್ಕೂ ಹೆಚ್ಚು ಮತಗಳಿಂದ ಗೆದ್ದಿದ್ದಾರೆ. ಬಿಜೆಪಿ ಅಭ್ಯರ್ಥಿ ಹಾಸಿರಾಣಿ ಅವರು ಖುದ್ದು ಸಿಎಂ ಸುವೇಂದು ಅಧಿಕಾರಿ ಅವರ ದಾಖಲೆ ಮುರಿದಿದ್ದಾರೆ. ಇನ್ನು ನಂದಿಗ್ರಾಮದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮಿಲನ್ ಪ್ರಧಾನ್ ಎರಡನೇ ಸ್ಥಾನ ಪಡೆದ್ರು. ಸಿಪಿಎಂನ ಶಾಂತಿಗೋಪಾಲ್ ಗಿರಿ ಮೂರನೇ ಸ್ಥಾನದಲ್ಲಿದ್ದಾರೆ. ಋತಬ್ರತ-ತೃಣಮೂಲ ಅಭ್ಯರ್ಥಿ ಎಹ್ತೆಸ್ಮುಲ್ ಹಕ್ ಕೇವಲ 853 ಮತಗಳನ್ನು ಪಡೆದಿದ್ದಾರೆ. ಬಿಜೆಪಿ ಭರ್ಜರಿ ಗೆಲುವಿನ ಬಳಿಕ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ್ರು. ಪಶ್ಚಿಮ ಬಂಗಾಳದಲ್ಲಿ ಮೇ 9, 2026 ರಂದು ಬಿಜೆಪಿ ಸರ್ಕಾರ ರಚನೆಯಾದ ನಂತರ, ಮರುಚುನಾವಣೆಗಳು ನಡೆದವು, ಜನರು ದಾಖಲೆಯ ಮತಗಳಿಂದ ಗೆದ್ದರು. ಇನ್ನೂ ಎರಡು ಕೇಂದ್ರಗಳಲ್ಲಿ ಉಪಚುನಾವಣೆಗಳು ನಡೆದವು. ನಾನು ನಂದಿಗ್ರಾಮದಲ್ಲಿ ದಾಖಲೆಯ ಮತಗಳೊಂದಿಗೆ ಗೆದ್ದಿದ್ದೇನೆ, ಹಿಂದಿನ ಎಲ್ಲಾ ದಾಖಲೆಗಳನ್ನು ಮುರಿದಿದ್ದೇನೆ ಮತ್ತು ನನ್ನ ಅತ್ಯುನ್ನತ ದಾಖಲೆಯಾದ 82,000 ಅನ್ನು ಮುರಿದಿದ್ದೇನೆ. ಹಸಿರಾಣಿ ರಥ ಗೆದ್ದಿದ್ದಾರೆ. ನಂದಿಗ್ರಾಮದ 60 ಅಲ್ಪಸಂಖ್ಯಾತ ಬೂತ್‌ಗಳಲ್ಲಿ ನಾವು ಮುನ್ನಡೆ ಸಾಧಿಸಿದ್ದೇವೆ, ಅವರು ಸರ್ಕಾರದ ಅಭಿವೃದ್ಧಿಯಲ್ಲಿ ಸೇರಿಕೊಂಡಿದ್ದಾರೆ ಎಂದು ಮುಖ್ಯಮಂತ್ರಿ ಹೇಳಿದರು.**

• ಉದಯವಾಹಿನಿ, ನವದೆಹಲಿ

ಲೋಕಸಭೆ ಮತ್ತು ವಿಧಾನಸಭಾ ಉಪಚುನಾವಣೆಗಳಲ್ಲಿ ಬಿಜೆಪಿ ಸಾಧಿಸಿದ ಭರ್ಜರಿ ಗೆಲುವಿಗೆ ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಮತದಾರರಿಗೆ ಧನ್ಯವಾದ ಸಲ್ಲಿಸಿದ್ದಾರೆ. ಅಸ್ಸಾಂನ ನಗಾಂವ್ ಲೋಕಸಭಾ ಕ್ಷೇತ್ರ ಹಾಗೂ ಪಶ್ಚಿಮ ಬಂಗಾಳದ ನಂದಿಗ್ರಾಮ ಮತ್ತು ರೇಜಿನಗರ ವಿಧಾನಸಭಾ ಕ್ಷೇತ್ರಗಳ ಫಲಿತಾಂಶಗಳು ಜನರು ಬಿಜೆಪಿ- ಎನ್‌ಡಿಎ ಸರ್ಕಾರದ ಉತ್ತಮ ಆಡಳಿತದೊಂದಿಗೆ ದೀರ್ಘವಾದ ಸಂಪರ್ಕ ಹೊಂದಿದ್ದಾರೆ ಎಂಬುದನ್ನು ಮತ್ತೊಮ್ಮೆ ಸಾಬೀತುಪಡಿಸಿವೆ ಎಂದು ಅವರು ಹೇಳಿದ್ದಾರೆ.

ಜನರ ನಿರಂತರ ಆಶೀರ್ವಾದಕ್ಕೆ ನನ್ನ ಕೃತಜ್ಞತೆಗಳು! ಅಸ್ಸಾಂನ ನಗಾಂವ್ ಲೋಕಸಭಾ ಕ್ಷೇತ್ರ ಹಾಗೂ ಪಶ್ಚಿಮ ಬಂಗಾಳದ ನಂದಿಗ್ರಾಮ ಮತ್ತು ರೇಜಿನಗರ ವಿಧಾನಸಭಾ ಕ್ಷೇತ್ರಗಳ ಫಲಿತಾಂಶಗಳು ಜನರು ಬಿಜೆಪಿ-ಎನ್‌ಡಿಎ ಮೈತ್ರಿಕೂಟದ ಉತ್ತಮ ಆಡಳಿತದೊಂದಿಗೆ ದೀರ್ಘವಾದ ಸಂಪರ್ಕವನ್ನು ಹೊಂದಿದ್ದಾರೆ ಎಂಬುದನ್ನು ಮತ್ತೊಮ್ಮೆ ತೋರಿಸುತ್ತವೆ. ವಿಜೇತ ಬಿಜೆಪಿ ಅಭ್ಯರ್ಥಿಗಳನ್ನು ನಾನು ಅಭಿನಂದಿಸುತ್ತೇನೆ ಮತ್ತು ನಮ್ಮ ಪಕ್ಷದ ಕಾರ್ಯಕರ್ತರ ಶ್ರಮವನ್ನು ಶ್ಲಾಘಿಸುತ್ತೇನೆ. ಪುದುಚೇರಿಯ ತಟ್ಟಂಚಾವಡಿಯಲ್ಲಿ ಗೆಲುವು ಸಾಧಿಸಿದ ನಮ್ಮ ಮೌಲ್ಯಯುತ ಎನ್‌ಡಿಎ ಪಾಲುದಾರ ಪಕ್ಷವಾದ ಎಐಎನ್ ಆರ್‌ಸಿ ಅನ್ನು ಕೂಡ ನಾನು ಅಭಿನಂದಿಸುತ್ತೇನೆ. ಜನರ ಕಲ್ಯಾಣಕ್ಕಾಗಿ ಮತ್ತು ಉಜ್ವಲ ಹಾಗೂ ಸಮೃದ್ಧ ಭವಿಷ್ಯಕ್ಕಾಗಿ ಅವರ ಆಕಾಂಕ್ಷೆಗಳನ್ನು ಈಡೇರಿಸಲು ನಾವು ನಿರಂತರವಾಗಿ ಶ್ರಮಿಸುತ್ತಿದ್ದು, ಈ ಜನಾದೇಶವು ನಮಗೆ ಹೆಚ್ಚಿನ ಬಲವನ್ನು ನೀಡುತ್ತದೆ ಎಂದು ಅವರು ತಿಳಿಸಿದ್ದಾರೆ.

ಪಶ್ಚಿಮ ಬಂಗಾಳದ ಮುರ್ಷಿದಾಬಾದ್ ಜಿಲ್ಲೆಯ ರೇಜಿನಗರ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ 75,816 ಮತಗಳ ಅಂತರದಿಂದ ಜಯ ಗಳಿಸುವ ಮೂಲಕ ಮುಸ್ಲಿಂ ಪ್ರಾಬಲ್ಯದ ಕ್ಷೇತ್ರದಲ್ಲಿ ಐತಿಹಾಸಿಕ ಸಾಧನೆ ಮಾಡಿದೆ. ಚುನಾವಣಾ ಆಯೋಗ ಪ್ರಕಟಿಸಿದ ಫಲಿತಾಂಶಗಳ ಪ್ರಕಾರ, ಬಿಜೆಪಿ ಅಭ್ಯರ್ಥಿ ಶಂಖರವ್ ಸರ್ಕಾರ್ ಅವರು 1,29,914 ಮತಗಳನ್ನು ಪಡೆದು, ತಮ್ಮ ಹತ್ತಿರದ ಎದುರಾಳಿ ಆಮ್ ಜನತಾ ಉನ್ನಯನ್ ಪಾರ್ಟಿಯ ಅಭ್ಯರ್ಥಿ ಗೋಲಂ ನಬಿ ಆಜಾದ್ ಅವರನ್ನು ಸೋಲಿಸಿದ್ದಾರೆ. ಬಿಜೆಪಿಯು ಶೇ. 63.14 ಮತಗಳನ್ನು ಪಡೆದುಕೊಂಡರೆ, ಆಜಾದ್ ಅವರು ಶೇ. 26.29 ಮತಗಳನ್ನು ಗಳಿಸಿದರು.

ಈ ವಾರದ ಆರಂಭದಲ್ಲಿ ಉಪಚುನಾವಣೆ ನಡೆದ ನಂದಿಗ್ರಾಮ ಕ್ಷೇತ್ರವನ್ನು ಉಳಿಸಿಕೊಳ್ಳುವಲ್ಲಿ ಬಿಜೆಪಿ ವಿಜಯ ದಾಖಲಿಸಿದೆ. ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅವರ ಮಾಜಿ ಸಹಾಯಕ ಚಂದ್ರನಾಥ್ ರಥ್ ತಾಯಿಯಾದ ಬಿಜೆಪಿಯ ಹಾಸಿ ರಾಣಿ ರಥ್ ಅವರು ತಮ್ಮ ಹತ್ತಿರದ ಎದುರಾಳಿ ಕಾಂಗ್ರೆಸ್ ನಾಯಕ ಮಿಲನ್ ಪ್ರಧಾನ್ ಅವರನ್ನು 1,22,753 ಮತಗಳ ಅಂತರದಿಂದ ಸೋಲಿಸಿದರು.

ಪಶ್ಚಿಮ ಬಂಗಾಳದ ನಂದಿಗ್ರಾಮದ ವಿಧಾನಸಭಾ ಉಪಚುನಾವಣಾ ಫಲಿತಾಂಶ ಪ್ರಕಟವಾಗಿದೆ. ಬಿಜೆಪಿ ಅಭ್ಯರ್ಥಿ ಹಾಸಿ ರಾಣಿ ರಥ್ ಅವರು ಕಾಂಗ್ರೆಸ್ ಅಭ್ಯರ್ಥಿ ಮಿಲನ್ ಪ್ರಧಾನ್ ವಿರುದ್ಧ 1,22,753 ಭಾರೀ ಮತಗಳ ಅಂತರದಿಂದ ಭರ್ಜರಿ ಜಯಗಳಿಸಿದ್ದಾರೆ. ಚುನಾವಣಾ ಆಯೋಗ ಹಂಚಿಕೊಂಡಿರುವ ಇತ್ತೀಚಿನ ಅಂಕಿಅಂಶಗಳ ಪ್ರಕಾರ, ವಿದ್ಯುನ್ಮಾನ ಮತಯಂತ್ರಗಳ ಹಲವು ಸುತ್ತುಗಳ ಎಣಿಕೆಯ ನಂತರ ಈ ಫಲಿತಾಂಶ ಹೊರಬಿದ್ದಿದೆ.

ಪಶ್ಚಿಮ ಬಂಗಾಳದ ರಾಜಕೀಯವಾಗಿ ಅತ್ಯಂತ ಪ್ರಮುಖವಾದ ನಂದಿಗ್ರಾಮ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಹಾಸಿ ರಾಣಿ ರಥ್ ಆರಂಭದಿಂದಲೇ ಭಾರಿ ಮುನ್ನಡೆ ಸಾಧಿಸಿ, ಅಂತಿಮವಾಗಿ 1,22,753 ಮತಗಳ ಅಂತರದಿಂದ ಜಯಭೇರಿ ಬಾರಿಸಿದರು. ಈ ಗೆಲುವನ್ನು ಬಿಜೆಪಿ ಕಾರ್ಯಕರ್ತರು ಸಂಭ್ರಮಿಸುತ್ತಿದ್ದಾರೆ.

**1** ತಮಿಳುನಾಡಿನ ಮಧುರಾಂತಕಂ ಮತ್ತು ಧಾರಾಪುರಂ ಉಪಚುನಾವಣೆ ಫಲಿತಾಂಶ ಪ್ರಕಟ.

**2** ತಮಿಳುನಾಡು ಉಪಚುನಾವಣೆಯಲ್ಲಿ ಆಡಳಿತಾರೂಢ ಟಿವಿಕೆ ಪಕ್ಷಕ್ಕೆ ಭರ್ಜರಿ ಜಯ.

**3** ಮತದಾರರಿಗೆ ಆಮಿಷ ತೋರಿಸಿ ಸಿಎಂ ವಿಜಯ್ ಜಯ ಸಾಧಿಸಿದ್ದಾರೆ ಎಂದ ಡಿಎಂಕೆ.








17 ಸುತ್ತಿನ ಮತ ಎಣಿಕೆ ಪೂರ್ಣಗೊಂಡ ಬಳಿಕ ಬಿಜೆಪಿ ಅಭ್ಯರ್ಥಿ ಹಸಿರಾಣಿ ರಾಥ್ ಅವರು 1,22,753 ಮತಗಳ ಭರ್ಜರಿ ಮುನ್ನಡೆ ಸಾಧಿಸಿದ್ದರು. ರಾಥ್ ಅವರು ಒಟ್ಟು 1,64,427 ಮತಗಳನ್ನ ಪಡೆದುಕೊಂಡಿದ್ದಾರೆ.

ಕೈ ಅಭ್ಯರ್ಥಿ ಮಿಲನ್ ಪ್ರಧಾನ್ 41,674 ಮತಗಳನ್ನ ಪಡೆದು ಹೀನಾಯ ಸೋಲು ಕಂಡಿದ್ದಾರೆ ಎಂದು ಚುನಾವಣಾ ಆಯೋಗದ ಅಂಕಿ-ಅಂಶ ಬಹಿರಂಗಪಡಿಸಿದೆ.

ಭಾರತೀಯ ಚುನಾವಣಾ ಆಯೋಗ ಹಂಚಿಕೊಂಡಿರುವ ಮಾಹಿತಿಯ ಪ್ರಕಾರ, ರಾಥ್ 1,64,427 ಮತಗಳನ್ನು ಪಡೆದರೆ, ಪ್ರಧಾನ್ 41,674 ಮತಗಳನ್ನು ಗಳಿಸಿದರು. ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ ನಾಯಕ ಶಾಂತಿ ಗೋಪಾಲ್ ಗಿರಿ 5,779 ಮತಗಳನ್ನ ಮತ್ತು ಆಲ್ ಇಂಡಿಯಾ ಸೆಕ್ಯುಲರ್ ಫ್ರಂಟ್ ನಾಯಕ ಅಲಿ ಮೊಹಮ್ಮದ್ ಸಬ್ಬೆ ಮಿರಾಜ್ ಖಾನ್ 1,607 ಮತಗಳನ್ನು ಪಡೆದರು.

## 1.22 ಲಕ್ಷಕ್ಕೂ ಅಧಿಕ ಮತಗಳ ಅಂತರದ ಗೆಲುವು

ಬಂಗಾಳದ ಮುರ್ಷಿದಾಬಾದ್ ಜಿಲ್ಲೆಯಲ್ಲಿರುವ ರೆಜಿನಗರವು ಬಹರಾಂಪುರ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ. ಇಲ್ಲಿ ಒಟ್ಟು 2,57,657 ನೋಂದಾಯಿತ ಮತದಾರರಿದ್ದಾರೆ. ಕ್ಷೇತ್ರದ ಸುಮಾರು ಶೇ.70ರಷ್ಟು ಮತದಾರರು ಮುಸ್ಲಿಮರಾಗಿದ್ದಾರೆ. ಹೀಗಾಗಿ ಬಿಜೆಪಿ, ಟಿಎಂಸಿ, ಕಾಂಗ್ರೆಸ್ ಮತ್ತು ವಿವಿಧ ಪ್ರಾದೇಶಿಕ ರಾಜಕೀಯ ಸಂಘಟನೆಗಳ ನಡುವಿನ ಸ್ಪರ್ಧೆಯ ಹಿನ್ನೆಲೆ ಈ ಫಲಿತಾಂಶ ಹೆಚ್ಚಿನ ಮಹತ್ವ ಪಡೆದುಕೊಂಡಿದೆ.ಹಿಂದಿನ ವಿಧಾನಸಭಾ ಚುನಾವಣೆಯಲ್ಲಿ ಮಾಜಿ ಟಿಎಂಸಿ ನಾಯಕ ಹುಮಾಯೂನ್ ಕಬೀರ್ ಬಿಜೆಪಿ ಅಭ್ಯರ್ಥಿ ಬಾಪನ್ ಘೋಷ್ ಅವರನ್ನು 58,000ಕ್ಕೂ ಹೆಚ್ಚು ಮತಗಳ ಅಂತರದಿಂದ ಸೋಲಿಸಿ ರೆಜಿನಗರ ಕ್ಷೇತ್ರದಲ್ಲಿ ಗೆಲುವು ಸಾಧಿಸಿದ್ದರು.

ಕಬೀರ್ ಅವರು ನೌದಾ ಕ್ಷೇತ್ರದಲ್ಲೂ ಗೆಲುವು ಸಾಧಿಸಿದ್ದರು. ಬಳಿಕ ಕಬೀರ್ ನೌದಾ ಕ್ಷೇತ್ರ ಉಳಿಸಿಕೊಂಡು, ರೆಜಿನಗರಕ್ಕೆ ರಾಜೀನಾಮೆ ನೀಡಿದರು. ಹೀಗಾಗಿ ತೆರವಾಗಿದ್ದ ಸ್ಥಾನಕ್ಕೆ ಉಪಚುನಾವಣೆ ನಡೆದಿತ್ತು.ರೆಜಿನಗರ ವಿಧಾನಸಭಾ ಕ್ಷೇತ್ರದ ಉಪಚುನಾವಣೆಗೆ ಅಕ್ಟೋಬರ್ 6ರಂದು ಮತದಾನ ನಡೆದಿತ್ತು. ಶೇ.78.42 ರಷ್ಟು ಮತದಾನ ದಾಖಲಾಗಿತ್ತು.

## ಮುಸ್ಲಿಂ ಪ್ರಾಬಲ್ಯ ಕ್ಷೇತ್ರ ಬಿಜೆಪಿ ತೆಕ್ಕೆಗೆ

## ಮಹಾನ್ ಜನಶಕ್ತಿಯ ಕೋಟೆ

### ತಮಿಳುನಾಡಿನ ಜನರಿಗಾಗಿ ನಾವು ಯಾವಾಗಲೂ ಸಂಪೂರ್ಣ ಸಮರ್ಪಣೆ

ಮುಂದುವರೆದು ತಮಿಳುನಾಡು ಭ್ರಷ್ಟ ಶಕ್ತಿಗಳ ಕೋಟೆಯಲ್ಲ. ಬದಲಾಗಿ, ಇದು ಮಹಾನ್ ಜನಶಕ್ತಿಯ ಕೋಟೆಯಾಗಿದೆ. ಜನರ ಹೃದಯದಲ್ಲಿ ಅಳಿಸಲಾಗದ ಸ್ಥಾನವನ್ನು ಪಡೆದಿರುವ, ಪ್ರೀತಿಯ ಮತ್ತು ಶುದ್ಧ ಶಕ್ತಿಯ ಕೋಟೆಯಾಗಿದೆ.

ತಮಿಳುನಾಡಿನ ಉಪಚುನಾವಣೆಗಳ ಇತಿಹಾಸದಲ್ಲಿ, ಹಣದ ಬಲದ ಸೂತ್ರವನ್ನು ಹಿಂದೆಂದಿಗಿಂತಲೂ ಬಲವಾಗಿ ಛಿದ್ರಗೊಳಿಸಿ ಪುಡಿಗಟ್ಟಿದ ಗೆಲುವು ಇದಾಗಿದೆ ಎಂದು ಜೋಸೆಫ್ ವಿಜಯ್ ಪ್ರತಿಪಾದಿಸಿದ್ದಾರೆ. ಡಿಎಂಕೆ ಹೆಸರನ್ನು ನೇರವಾಗಿ ಪ್ರಸ್ತಾಪಿಸದೆ ವಾಗ್ದಾಳಿ ನಡೆಸಿರುವ ವಿಜಯ್, ಮಹಿಳೆಯರನ್ನು ಗುರಿಯಾಗಿಸಿಕೊಂಡು ನಡೆಸಿದ ಅವಹೇಳನಕಾರಿ ಭಾಷಣವನ್ನು ಮತದಾರರು ತಿರಸ್ಕರಿಸಿರುವುದನ್ನೇ ಫಲಿತಾಂಶಗಳು ಪ್ರತಿಬಿಂಬಿಸಿವೆ ಎಂದು ಹೇಳಿದ್ದಾರೆ.

ತಮಿಳುನಾಡಿನ ಪ್ರತಿಪಕ್ಷ ನಾಯಕ ಉದಯನಿಧಿ ಸ್ಟಾಲಿನ್ ಅವರ ತ್ರಿಶಾ ಕುರಿತ ಅವಹೇಳನಕಾರಿ ಹೇಳಿಕೆ ಬಗ್ಗೆ ಟಿವಿಕೆ ಮುಖ್ಯಸ್ಥರು ಪರೋಕ್ಷವಾಗಿ ಪ್ರಸ್ತಾಪಿಸಿದ್ದಾರೆ.

ನಾವು ಯಾವಾಗಲೂ ಜನರೊಂದಿಗೆ ನಿಲ್ಲುತ್ತೇವೆ. ನಾವು ಜನರೊಂದಿಗೆ ಅವಿನಾಭಾವ ಸಂಬಂಧದೊಂದಿಗೆ ಒಂದಾಗಿ, ಸ್ವತಃ ಜನರಂತೆಯೇ ಇರುತ್ತೇವೆ. ಅದು ಕೇವಲ ನಮ್ಮ ಕರ್ತವ್ಯವಲ್ಲ, ಅದು ಜನರಿಗೆ ನಾವು ಸಲ್ಲಿಸಬೇಕಾದ ಕೃತಜ್ಞತೆಯ ಋಣವಾಗಿದೆ. ನಮ್ಮ ತಮಿಳುನಾಡಿನ ಜನರಿಗಾಗಿ ನಾವು ಯಾವಾಗಲೂ ಸಂಪೂರ್ಣ ಸಮರ್ಪಣೆ ಮತ್ತು ನಿಷ್ಠೆಯಿಂದ ಅವಿರತವಾಗಿ ಶ್ರಮಿಸುತ್ತೇವೆ ಎಂಬುದು ನೂರಕ್ಕೆ ನೂರರಷ್ಟು ಖಚಿತ ಎಂದು ಮುಖ್ಯಮಂತ್ರಿ ವಿಜಯ್ ಭರವಸೆ ನೀಡಿದ್ದಾರೆ.



## ನಂದಿಗ್ರಾಮ ಉಪಚುನಾವಣೆಯಲ್ಲಿ ಮತ್ತೆ ಬಿಜೆಪಿಗೆ ಐತಿಹಾಸಿಕ ಜಯ

## ಫಲಿಸದ ಕಾಂಗ್ರೆಸ್-ಟಿಎಂಸಿ ತಂತ್ರಗಾರಿಕೆ

## ಜನರ ಹೃದಯದಲ್ಲಿ ಅಳಿಸಲಾಗದ ಸ್ಥಾನ





## ಜನರು ಈ ಹಿಂದಿನಿಂದಲೂ ಗುಳೇ ಹೋಗುತ್ತಿದ್ರು ಅಂತ ಹೇಳಿದ್ದೇನೆ, ಅದನ್ನೇ ವಿವಾದ ಮಾಡಿದ್ರೆ ಹೇಗೆ: ಡಿಸಿಎಂ ಪರಮೇಶ್ವರ್

• ಉದಯವಾಹಿನಿ, ಬೆಂಗಳೂರು

ಜನರು ಹಿಂದೆಯಿಂದಲೂ ಗುಳೆ ಹೋಗುತ್ತಿದ್ರು, ಅದನ್ನೇ ಹೇಳಿದ್ದೇನೆ, ಅದನ್ನೇ ವಿವಾದ ಮಾಡಿದ್ರೆ ಹೇಗೆ ಎಂದು ಡಿಸಿಎಂ ಜಿ.ಪರಮೇಶ್ವರ್ ಸ್ಪಷ್ಟನೆ ನೀಡಿದ್ದಾರೆ. ಸದಾಶಿವನಗರ ನಿವಾಸದ ಬಳಿ ಮಾತನಾಡಿದ ಅವರು, ಗುಳೆ ಹೋಗೋದು ಸಾಂಪ್ರದಾಯಿಕವಾಗಿದೆ ಎಂಬ ತಮ್ಮ ಹೇಳಿಕೆಗೆ ಸ್ಪಷ್ಟನೆ ನೀಡುತ್ತಾ, ಕಾಫಿ ತೋಟಕ್ಕೆ ಕೆಲಸಕ್ಕೆ ಪ್ರತೀ ವರ್ಷ ಹೋಗ್ತಾರೆ. ತಾಂಡಾಗಳ ಜನ ಕಾಫಿ ತೋಟಕ್ಕೆ ಹೋಗಲು ಕಾಂಟ್ರ್ಯಾಕ್ಟ್ ಮಾಡಿಕೊಳ್ಳುತ್ತಾರೆ. ಕಾಂಟ್ರ್ಯಾಕ್ಟ್ ಮುಗಿದ ಮೇಲೆ ವಾಪಸ್ ಹೋಗ್ತಾರೆ. ಜನರು ಹಿಂದೆಯಿಂದಲೂ ಗುಳೇ ಹೋಗುತ್ತಿದ್ರು, ಅದನ್ನೇ ಹೇಳಿದ್ದೇನೆ, ಅದನ್ನೇ ವಿವಾದ ಮಾಡಿದ್ದಾರೆ ಎಂದು ಸಮರ್ಥಿಸಿಕೊಂಡರು. ಬರ ವಿಚಾರವಾಗಿ ಸರ್ವಪಕ್ಷದ ನಿಯೋಗ ಕರೆದೊಯ್ಯುವ ವಿಚಾರವಾಗಿ ಪ್ರತಿಕ್ರಿಯಿಸುತ್ತಾ, ಈವರೆಗೆ 217 ತಾಲ್ಲೂಕುಗಳು ಬರ ಅಂತ ಘೋಷಣೆ ಮಾಡಿದ್ದೇವೆ. ಉಳಿದ 23 ತಾಲ್ಲೂಕುಗಳಲ್ಲಿ ಸ್ಥಳ ಪರಿಶೀಲನೆ ಮಾಡ್ತಿದ್ದೇವೆ. ಇನ್ನೂ 8-10 ತಾಲ್ಲೂಕುಗಳು ಬರ ಮಾನದಂಡದ ಅಡಿ ಬರಬಹುದು. ಪರಿಶೀಲನಾ ವರದಿ ಬಂದ ಮೇಲೆ ಅಂತಿಮ ಮೆಮರೊಂಡಮ್ ಸಿದ್ಧ ಮಾಡುತ್ತೇವೆ ಎಂದರು. ಅದಾದ ಬಳಿಕ ಸಿಎಂ ಸರ್ವಪಕ್ಷದ ನಿಯೋಗ ತೆಗೆದುಕೊಂಡು ಹೋಗಬೇಕು ಅಂತ ಇದ್ದಾರೆ. ಬಿಜೆಪಿಯವರು ನಿಯೋಗದ ಜತೆ ಬರಲ್ಲ ಅಂತಿದ್ದಾರೆ. ಅವರಿಗೆ ನಾವು ಇನ್ನೊಮ್ಮೆ ಕೇಳುತ್ತೇವೆ. ಇಲ್ಲದಿದ್ದರೆ ನಾವೇ ಹೋಗಿ ಮನವಿ ಕೊಟ್ಟು ಬರುತ್ತೇವೆ. ನಾವೇ ಹೋಗಿ ವರದಿ ಸಮೇತ ಮನವಿ ಕೊಡ್ತೇವೆ, ಕಾಟಾಚಾರಕ್ಕೆ ಇಲ್ಲಿಂದಲೇ ಕಳುಹಿಸಿ ಕೊಡಬಾರದು ಎಂದು ತಿಳಿಸಿದರು.

## ಬಾಯಿ ಚಪಲಕ್ಕೆ ಏನಾದ್ರೂ ಹೇಳೋದು ಸರಿಯಲ್ಲ? ಗಣಿಗ ರವಿಗೆ ವಿಜಯೇಂದ್ರ ಟಾಂಗ್

• ಉದಯವಾಹಿನಿ, ಬೆಂಗಳೂರು

ಬಾಯಿ ಚಪಲಕ್ಕೆ ಏನಾದ್ರೂ ಹೇಳೋದು ಸರಿಯಲ್ಲ ಎಂದು ಶಾಸಕ ಗಣಿಗ ರವಿ ಹೇಳಿಕೆಗೆ ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ಟಾಂಗ್ ಕೊಟ್ಟಿದ್ದಾರೆ. ಜಿಲ್ಲೆಯಲ್ಲಿ ಮಾಧ್ಯಮದವರೊಂದಿಗೆ ಸ್ಟಿಂಗ್ ಆಪರೇಷನ್‌ಗೆ ಸುಪಾರಿ ನೀಡಿದ್ದಾರೆ ಎಂಬ ಶಾಸಕ ಗಣಿಗ ರವಿ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಬಾಯಿ ಚಪಲಕ್ಕೆ ಏನಾದ್ರೂ ಹೇಳೋದು ಸರಿಯಲ್ಲ.

ಚಪಲಕ್ಕಾಗಿ ಹೇಳಿಕೆ ಕೊಡೋದು ಸರಿಯಲ್ಲ. ಅದು ಪಕ್ಷಕ್ಕೂ ಹಾಗೂ ಅವರಿಗೂ ಒಳ್ಳೆಯದಲ್ಲ ಎಂದಿದ್ದಾರೆ. ಇದು ಮೂರ್ಖತನದ ಹೇಳಿಕೆ. ಜವಾಬ್ದಾರಿಯುತ ಸ್ಥಾನದಲ್ಲಿರುವವ ಶಾಸಕರು ಇಂತಹ ಆರೋಪ ಮಾಡಬಾರದು. ಪುರಾವೆಗಳಿದ್ದರೆ ಬಿಡುಗಡೆ ಮಾಡಲಿ. ರಾಜ್ಯದಲ್ಲಿ ಸ್ಟಿಂಗ್ ಆಪರೇಷನ್ ಮಾಡುವ ಪಿತಾಮಹ ಯಾರು ಎಂದು ಕಾಂಗ್ರೆಸ್ ಪಕ್ಷದ ಶಾಸಕರಿಗೆ ಗೊತ್ತಿದೆ. ಇಂತಹ ಹೇಳಿಕೆ ಕೊಟ್ಟು ಸರ್ಕಾರದ ವೈಫಲ್ಯ ಮುಚ್ಚಿಕೊಳ್ಳಲು ಯತ್ನ ಮಾಡ್ತಿದ್ದಾರೆ ಎಂದು ಕಿಡಿಕಾರಿದ್ದಾರೆ.

ಇದರಲ್ಲಿ ಯಾವುದು ಸತ್ಯಾಂಶ ಇಲ್ಲ. ಅಧಿಕಾರಕ್ಕಾಗಿ ಸ್ಟಿಂಗ್ ಆಪರೇಷನ್ ಮಾಡೋದು. ಸ್ಟಿಂಗ್ ಆಪರೇಷನ್ ಮಾಡಿಯೇ ಅಧಿಕಾರ ತೆಗೆದುಕೊಳ್ತಿದ್ದಾರೆ ಎನ್ನುವ ಚರ್ಚೆ ಇದೆ ಎಂದು ಹೇಳುವ ಮೂಲಕ ಸಿಎಂ ಡಿಕೆಶಿಗೆ ಪರೋಕ್ಷವಾಗಿ ಟಾಂಗ್ ಕೊಟ್ಟಿದ್ದಾರೆ.

## ಸಿಡಿಆರ್ ರಿಪೋರ್ಟ್‌ನಿಂದ ಸಿಕ್ಕಿಬಿದ್ದ ಸದಸ್ಯೆ ಗೀತಾ

• ಉದಯವಾಹಿನಿ, ಬೆಂಗಳೂರು

ಪಶು ವೈದ್ಯಕೀಯ ನೇಮಕಾತಿ ಪರೀಕ್ಷೆ ಹಗರಣದಲ್ಲಿ ಆರೋಪಿಯಾಗಿರುವ ಕೆಪಿಎಸ್‌ಸಿ ಸದಸ್ಯೆ ಗೀತಾ ಸಿಕ್ಕಿಬಿದ್ದ ರಹಸ್ಯ ಬಯಲಾಗಿದೆ.

ಸಿಡಿಆರ್ ರಿಪೋರ್ಟ್ ಮತ್ತು ಕೆಂಪು ಬಣ್ಣದ ಕಾರಿನಿಂದ ಗೀತಾ ಸಿಕ್ಕಿಬಿದ್ದಿರೋದು ತನಿಖೆ ವೇಳೆ ಬೆಳಕಿಗೆ ಬಂದಿದೆ. ನಂದೀಶ್ ಎಂಬ ಅಭ್ಯರ್ಥಿಯ ಹೇಳಿಕೆ ದಾಖಲು ವೇಳೆ ಇಡಿಗೆ ಸಾಕ್ಷ್ಯ ಸಿಕ್ಕಿತ್ತು. ಪರೀಕ್ಷೆ ಅಪ್ಲಿಕೇಷನ್ ಹಾಕಿದ ಬಳಿಕ ಮಧ್ಯವರ್ತಿಗಳು ಅಭ್ಯರ್ಥಿಗಳನ್ನ ಸಂಪರ್ಕ ಮಾಡಿದ್ರು. ಈ ವೇಳೆ ಅಭ್ಯರ್ಥಿ ನಂದೀಶ್‌ನನ್ನೂ ಮಧ್ಯವರ್ತಿಗಳು ಸಂಪರ್ಕಿಸಿದ್ದರು. ಆಗ ನಂದೀಶ್ ಹಣ ಕೊಟ್ಟು ಕೆಲಸ ಗಿಟ್ಟಿಸಿಕೊಳ್ಳಲು ಒಲ್ಲೆ ಎಂದಿದ್ದರಂತೆ. ಬಳಿಕ ಕೆಪಿಎಸ್‌ಸಿ ಸದಸ್ಯೆ ಗೀತಾ ಸಂಪರ್ಕ ಆಗಿತ್ತು ಎಂದು ನಂದೀಶ್ ಬಾಯ್ಬಿಟ್ಟಿದ್ದ. ಆತನ ಕಾಲ್ ರೆಕಾರ್ಡ್ ಡೀಟೆಲ್ಸ್ ತೆಗೆದಾಗ ಗೀತಾ ಬಲೆಗೆ ಸಿಕ್ಕಿಬಿದ್ದಿರುವುದಾಗಿ ತಿಳಿದುಬಂದಿದೆ.

ರಾಜ್‌ಮಹಲ್ ಬಳಿ ಜಾಗವೊಂದರಲ್ಲಿ ಗೀತಾ ನಂದೀಶ್‌ನನ್ನ ಭೇಟಿ ಮಾಡಿದ್ದರು. ಹಣ ಪಡೆಯಲು ಕೆಂಪು ಬಣ್ಣದ ಕಾರಿನಲ್ಲಿ ಬಂದಿದ್ದರು

## ಶಾಸಕರ ಭವನಕ್ಕೆ ಉಪಸಭಾಪತಿ ಉಮಾಶ್ರೀ ದಿಢೀರ್

• ಉದಯವಾಹಿನಿ, ಬೆಂಗಳೂರು

ಶಾಸಕರ ಭವನದಲ್ಲಿ ವಾಸ್ತವ್ಯವಿರುವ ಶಾಸಕರುಗಳ ಶಾಂತಿ ಮತ್ತು ಪ್ರಶಾಂತ ವಾತಾವರಣಕ್ಕೆ ಧಕ್ಕೆಯಾಗಬಾರದು, ವೈದ್ಯಕೀಯ ಸೇವೆ ಇನ್ನಿತರ ಸೌಲಭ್ಯಗಳ ಬಗ್ಗೆ ಗಮನಹರಿಸುವಂತೆ ಕರ್ನಾಟಕ ವಿಧಾನ ಪರಿಷತ್ತಿನ ಉಪಸಭಾಪತಿಗಳು ಹಾಗೂ ಪರಿಷತ್ತಿನ ವಸತಿ ಸಮಿತಿಯ ಅಧ್ಯಕ್ಷರಾದ ಡಾ. ಉಮಾಶ್ರೀ ಅವರು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಶಾಸಕರ ಭವನದ ಸಮ್ಮೇಳನ ಸಭಾಂಗಣದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ವಸತಿ ಸಮಿತಿಯ ಸಭೆ ನಡೆಸಿದ ಬಳಿಕ ಸಮಿತಿಯ ಸದಸ್ಯರೊಂದಿಗೆ ಶಾಸಕರ ಭವನಕ್ಕೆ ದಿಢೀರ್ ಭೇಟಿ ಮಾಡಿದ ಉಪಸಭಾಪತಿಗಳು, ಶಾಸಕರ ಭವನದ ಕೊಠಡಿಗಳು, ಕಾರಿಡಾರ್‌ಗಳು ಹಾಗೂ ಆವರಣದ ಸ್ವಚ್ಛತೆಗೆ ಮೊದಲ ಆದ್ಯತೆ ನೀಡಬೇಕು. ಕುಡಿಯುವ ನೀರು, ವಿದ್ಯುತ್ ಮತ್ತು ಪೀಠೋಪಕರಣಗಳ ವ್ಯವಸ್ಥೆ ಸಮರ್ಪಕವಾಗಿರಬೇಕು. ಹೆಲ್ತ್ ಕ್ಲಬ್‌ಗೆ ಭೇಟಿ ನೀಡಿ, ಶಾಸಕರುಗಳಿಗೆ ಯಾವುದೇ ತೊಂದರೆಯಾಗದಂತೆ ಕ್ರಮವಹಿಸಬೇಕು ಎಂದು ಹೇಳಿದರು.

# ರಾಜ್ಯದ ಅಗಾಧ ವಿದ್ಯುತ್ ಬೇಡಿಕೆ ಪೂರೈಸಲು ಇಂಧನ ಇಲಾಖೆ ತೀವ್ರ ಕಸರತ್ತು; ಕೊರತೆ ಸರಿದೂಗಿಸಲು ಡೇ ಟೈಂ ಬೈಯಿಂಗ್ ಮೊರೆ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಮಳೆ ಕೊರತೆ, ತೀವ್ರ ಬರಗಾಲದ ಹಿನ್ನೆಲೆ ತಾಪಮಾನ ಗರಿಷ್ಠ ಮಟ್ಟಕ್ಕೆ ಏರಿಕೆ ಕಂಡಿದ್ದು, ಇತ್ತ ವಿದ್ಯುತ್ ಬೇಡಿಕೆಯಲ್ಲೆ ಭಾರಿ ಏರಿಕೆ ಕಂಡಿದೆ. ಬೇಡಿಕೆಗೆ ಅನುಗುಣವಾಗಿ ವಿದ್ಯುತ್ ಪೂರೈಕೆಗೆ ಹರಸಾಹಸ ಪಡುತ್ತಿರುವ ಇಂಧನ ಇಲಾಖೆ, ಕೊರತೆ ನೀಗಿಸಲು ಡೇ ಟೈಂ ವಿದ್ಯುತ್ ಖರೀದಿಯ ಮೊರೆ ಹೋಗಿದೆ. ಇನ್ನು ಅನ್ಯ ರಾಜ್ಯಗಳಿಂದ ವಿನಿಮಯ ಒಪ್ಪಂದಡಿ ಪಡೆದಿದ್ದ ವಿದ್ಯುತ್ ಅನ್ನು ಪೂರ್ಣ ವಾಪಸ್ ಮಾಡಿರುವ ರಾಜ್ಯಕ್ಕೆ ಸದ್ಯ ನಿತ್ಯ 1000 ಎಂ.ಯು. ಲಭ್ಯವಾಗುತ್ತಿರುವುದು ಸ್ವಲ್ಪ ಮಟ್ಟಿಗೆ ನಿಟ್ಟುಸಿರುವ ಬಿಡುವಂತೆ ಮಾಡಿದೆ. ರಾಜ್ಯ ಈ ಬಾರಿ ತೀವ್ರ ಬರಗಾಲದ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಮಳೆಯ ಕೊರತೆಯಿಂದ ಬಿಸಿಲ ತಾಪ ತಾರಕ್ಕೇರಿದೆ. ಮಳೆಗಾಲದ ಅವಧಿಯಲ್ಲೇ ಈ ಬಾರಿ ರಾಜ್ಯ ಬೇಸಿಗೆಯಲ್ಲಿರುವಂತೆ ಗರಿಷ್ಠ ತಾಪಮಾನ ಎದುರಿಸುವಂತಾಗಿದೆ. ಇದರಿಂದ ರಾಜ್ಯದ ವಿದ್ಯುತ್ ಬೇಡಿಕೆ ತಾರಕಕ್ಕೇರಿದೆ. ಸಾಮಾನ್ಯವಾಗಿ ಮಳೆಗಾಲದ ಅವಧಿಯಲ್ಲಿ ವಿದ್ಯುತ್ ಬೇಡಿಕೆ ಕಡಿಮೆ ಇರುತ್ತದೆ. ಆದರೆ, ಈ ಬಾರಿ ಮಳೆಯ ಕೊರತೆ ಹಿನ್ನೆಲೆ ತಾಪಮಾನ ಬೇಸಿಗೆ ಅವಧಿಯಲ್ಲಿರುವಂತೆ ಗರಿಷ್ಠ ಮಟ್ಟಕ್ಕೆ ಏರಿಕೆ ಕಾಣುತ್ತಿದೆ. ಇದರಿಂದ ಈ ಬಾರಿ ಮಳೆಗಾಲದ ಅವಧಿಯಲ್ಲೇ ವಿದ್ಯುತ್ ಬೇಡಿಕೆ ಪ್ರಮಾಣ ದಾಖಲೆ ಮಟ್ಟಕ್ಕೆ ಏರಿಕೆ ಕಂಡಿದೆ.ಇಷ್ಟು ಅಗಾಧ ಪ್ರಮಾಣದ ವಿದ್ಯುತ್ ಬೇಡಿಕೆ ರಾಜ್ಯ ಸರ್ಕಾರಕ್ಕೆ ತಲೆ ನೋವಾಗಿ ಪರಿಣಮಿಸಿದೆ. ಬೇಡಿಕೆಗೆ ಅನುಗುಣವಾಗಿ ವಿದ್ಯುತ್ ಪೂರೈಕೆ ಕಷ್ಟಸಾಧ್ಯವಾಗುತ್ತಿದೆ. ಹಾಗಾಗಿ ವಿದ್ಯುತ್ ವ್ಯತ್ಯಯ, ವಿದ್ಯುತ್ ಕಡಿತಗಳು ಹೆಚ್ಚಾಗುತ್ತಿದೆ. ಗ್ರಾಮೀಣ ಭಾಗದಲ್ಲಿ ವಿದ್ಯುತ್ ವ್ಯತ್ಯಯದ ಪ್ರಮಾಣ ಹೆಚ್ಚಳವಾಗಿದೆ. ಈ ವಿದ್ಯುತ್ ಬೇಡಿಕೆಯನ್ನು ಈಡೇರಿಸಲು ಇಂಧನ ಇಲಾಖೆ ನಾನ ಕಸರತ್ತು ನಡೆಸುತ್ತಿದೆ. ಬೇಡಿಕೆಗೆ ಅನುಗುಣವಾಗಿ ವಿದ್ಯುತ್ ಪೂರೈಕೆ ಕಷ್ಟಸಾಧ್ಯವಾಗುತ್ತಿದ್ದು, ನವೆಂಬರ್ ಮಧ್ಯಭಾಗದ ಬಳಿಕ ವಿದ್ಯುತ್ ಬೇಡಿಕೆ ಇಳಿಕೆಯಾಗುವ ನಿರೀಕ್ಷೆಯಲ್ಲಿದೆ. ಇಂಧನ ಇಲಾಖೆ ನೀಡಿದ ಮಾಹಿತಿ ಪ್ರಕಾರ ಸೆಪ್ಟೆಂಬರ್ ತಿಂಗಳಲ್ಲಿ ರಾಜ್ಯದಲ್ಲಿ ಒಟ್ಟು 7,576 ಮೆ.ವಾ. ವಿದ್ಯುತ್ ಬಳಸುವ ಅಂದಾಜು ಮಾಡಲಾಗಿತ್ತು. ಆದರೆ, ಸೆಪ್ಟೆಂಬರ್ ತಿಂಗಳಲ್ಲಿ ವಿದ್ಯುತ್ ಬೇಡಿಕೆ ತಾರಕಕ್ಕೇರಿದ್ದು, ಅಂದಾಜು ಮೀರಿ ಒಟ್ಟು ಸುಮಾರು 9,671 ಮೆ.ವಾ. ವಿದ್ಯುತ್ ಬಳಕೆ ಮಾಡಲಾಗಿದೆ. ಅಂದಾಜು ಮೀರಿ 2,095 ಮೆ.ವಾ. ಹೆಚ್ಚಿಗೆ ವಿದ್ಯುತ್ ಬಳಕೆ ಮಾಡಲಾಗಿದೆ. ಅಂದರೆ ನಿತ್ಯ ಸರಾಸರಿ 322 ಎಂ.ಯು. ರಂತೆ ವಿದ್ಯುತ್ ಬಳಕೆ ಮಾಡಲಾಗಿದೆ. ಪ್ರಸಕ್ತ ಅಕ್ಟೋಬರ್ ತಿಂಗಳಲ್ಲಿ ಒಟ್ಟು 7,137 ಮೆ.ವಾ. ವಿದ್ಯುತ್ ಬಳಸುವ ಅಂದಾಜು ಮಾಡಲಾಗಿದೆ. ಆದರೆ, ಈ ಪೈಕಿ ಈಗಾಗಲೇ ಈವರೆಗೆ ಒಟ್ಟು 2,135 ಮೆ.ವಾ.ವರೆಗೆ ವಿದ್ಯುತ್ ಬಳಕೆ ಮಾಡಲಾಗಿದೆ. ಅಂದರೆ ದಿನನಿತ್ಯ ಸರಾಸರಿ 305 ಎ.ಯು. ವಿದ್ಯುತ್ ಬಳಕೆ ಮಾಡಲಾಗಿದೆ. ಬೇಡಿಕೆ ಇದೇ ರೀತಿ ಹೆಚ್ಚಾದರೆ ಅಕ್ಟೋಬರ್ ತಿಂಗಳಲ್ಲೂ ಅಂದಾಜು ಮೀರಿ ವಿದ್ಯುತ್ ಬಳಕೆಯಾಗಲಿದೆ. **ಕೊರತೆ ಸರಿದೂಗಿಸಲು ಡೇ ಟೈಂ ಖರೀದಿ ಮೊರೆ:** ಸದ್ಯ ಇಂಧನ ಇಲಾಖೆ ರಾಜ್ಯದ ವಿದ್ಯುತ್ ಬೇಡಿಕೆ ಮತ್ತು ಪೂರೈಕೆಯ ಅಂತರವನ್ನು ಸರಿದೂಗಿಸಲು ನಾನಾ ಕಸರತ್ತು ನಡೆಸುತ್ತಿದೆ. ಸದ್ಯ ವಿದ್ಯುತ್ ಕೊರತೆ ನೀಗಿಸಲು ಡೇ ಟೈಂ ಖರೀದಿ ಮೊರೆ ಹೋಗುತ್ತಿದೆ. ಸೆಪ್ಟೆಂಬರ್ ನಿಂದ ಇಂಧನ ಇಲಾಖೆ ಗಣನೀಯ ಏರಿಕೆಯಾದ ವಿದ್ಯುತ್ ಬೇಡಿಕೆಯನ್ನು ಪೂರೈಸಲು ಡೇ ಟೈಂ ಖರೀದಿಯನ್ನು ನಡೆಸುತ್ತಿದೆ. ಅದರಂತೆ ಇಂಧನ ಇಲಾಖೆ ಮುಕ್ತ ಮಾರುಕಟ್ಟೆಯಲ್ಲಿ ಬಿಡ್ ಮಾಡಿ ಹಗಲು ಹೊತ್ತಿನಲ್ಲಿ ಕಡಿಮೆ ದರದಲ್ಲಿ ಲಭ್ಯ ವಿದ್ಯುತ್ ಖರೀದಿ ಮಾಡಲಾಗುತ್ತಿದೆ ಎಂದು ಇಂಧನ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ. ದಿನ ನಿತ್ಯ ವಿದ್ಯುತ್ ಬೇಡಿಕೆ ಹಾಗೂ ಉತ್ಪಾದನೆ ಮೇಲೆ ನಿಗಾ ಇಟ್ಟಿರುವ ಇಂಧನ ಇಲಾಖೆ, ಬೇಡಿಕೆ - ಪೂರೈಕೆ ನಡುವಿನ ಕೊರತೆ ಸರಿದೂಗಿಸಲು ಈ ಡೇ ಟೈಂ ಖರೀದಿಯ ಮೊರೆ ಹೋಗುತ್ತಿದೆ. ಆದರೆ, ಇತರ ರಾಜ್ಯಗಳಿಂದಲೂ ವಿದ್ಯುತ್ ಬೇಡಿಕೆ ಹೆಚ್ಚಿರುವುದರಿಂದ ಮುಕ್ತ ಮಾರುಕಟ್ಟೆಯಲ್ಲೂ ವಿದ್ಯುತ್ ಲಭ್ಯತೆ ಕಡಿಮೆ ಇದೆ. ಇಂಧನ ಇಲಾಖೆ ಖರೀದಿಗೆ ಉದ್ದೇಶಿಸುವಷ್ಟು ವಿದ್ಯುತ್ ಮುಕ್ತ ಮಾರುಕಟ್ಟೆಯಲ್ಲಿ ಲಭ್ಯವಾಗುತ್ತಿಲ್ಲ. ಡೇ ಟೈಂ ಖರೀದಿ ಬಿಡ್ಡಿಂಗ್ ವೇಳೆ ಉದ್ದೇಶಿತ ವಿದ್ಯುತ್ ಗಿಂತ ಅತ್ಯಲ್ಪ ವಿದ್ಯುತ್ ಮಾತ್ರ ಖರೀದಿಸಲು ಸಾಧ್ಯವಾಗುತ್ತದೆ ಎಂದು ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ. **ವರದಾನವಾದ ಎರಡು ಮೂಲಗಳ ವಿದ್ಯುತ್ ಲಭ್ಯತೆ:** ಕಳೆದ ಬೇಸಿಗೆಯಲ್ಲಿ ಅನ್ಯ ರಾಜ್ಯಗಳಿಂದ ವಿನಿಮಯ ಆಧಾರದ ಮೇಲೆ ಪಡೆದಿದ್ದ ವಿದ್ಯುತ್ತನ್ನು ಜೂನ್ 15ರಿಂದ ಸೆಪ್ಟೆಂಬರ್ 30ರವರೆಗೆ ಪ್ರತಿನಿತ್ಯ 1000 ಮೆಗಾವ್ಯಾಟ್ ನಷ್ಟು ವಾಪಸ್ ಮಾಡಲಾಗುತ್ತಿತ್ತು. ಕಳೆದ ಬೇಸಿಗೆಯಲ್ಲಿ ಪಡೆದಿದ್ದ ವಿದ್ಯುತ್ತನ್ನು ಇದೀಗ ಪೂರ್ಣ ವಾಪಸ್ ಮಾಡಲಾಗಿದೆ.



## ರಾಜ್ಯದಲ್ಲಿ ದಾಖಲೆ ಪ್ರಮಾಣದಲ್ಲಿ ವಿದ್ಯುತ್ ಬೇಡಿಕೆ

**ಸೆಪ್ಟೆಂಬರ್ ಮಧ್ಯಂತರದ ವೇಳೆ ರಾಜ್ಯದಲ್ಲಿ ವಿದ್ಯುತ್ ಬೇಡಿಕೆ ದಿನಕ್ಕೆ 340 ದಶಲಕ್ಷ ಯೂನಿಟ್ ತಲುಪಿತ್ತು. ಇದು ಮಳೆಗಾಲದ ಅವಧಿಯಲ್ಲಿ ಸರ್ವಕಾಲಿಕ ಗರಿಷ್ಠ ಮಟ್ಟದ ವಿದ್ಯುತ್ ಬೇಡಿಕೆಯಾಗಿದೆ ಎಂದು ಇಂಧನ ಇಲಾಖೆ ಅಧಿಕಾರುಗಳು ತಿಳಿಸಿದ್ದಾರೆ. ಇದೀಗ ರಾಜ್ಯದ ಹಲವೆಡೆ ಮಳೆ ಬರುತ್ತಿರುವುದರಿಂದ ವಿದ್ಯುತ್ ಬೇಡಿಕೆಯಲ್ಲಿ ಸ್ವಲ್ಪ ಮಟ್ಟಿಗೆ ಇಳಿಮುಖವಾಗಿದೆ. ಕಳೆದ ವಾರ 280ರಿಂದ 295 ದಶಲಕ್ಷ ಯೂನಿಟ್ ವಿದ್ಯುತ್ ಬೇಡಿಕೆ ಇತ್ತು. ಆದರೆ, ಇದೀಗ ಮತ್ತೆ ವಿದ್ಯುತ್ ಬೇಡಿಕೆ ಪ್ರಮಾಣ ನಿತ್ಯ 300-315 ಎಂ.ಯು. ವ್ಯಾಪ್ತಿಯಲ್ಲಿದೆ ಎಂದು ಇಂಧನ ಇಲಾಖೆ ಮಾಹಿತಿ ನೀಡಿದೆ.ಅ.7ಕ್ಕೆ ರಾಜ್ಯದ ವಿದ್ಯುತ್ ಬೇಡಿಕೆ 314.60 ಎಂ.ಯುಗೆ ಏರಿಕೆಯಾಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ರಾಜ್ಯದ ವಿದ್ಯುತ್ ಬೇಡಿಕೆ 259 ಎಂ.ಯು. ಇತ್ತು. ಅಂದರೆ ಈ ಬಾರಿ ಕಳೆದ ಬಾರಿಗಿಂತ ವಿದ್ಯುತ್ ಬೇಡಿಕೆಯಲ್ಲಿ ನಿತ್ಯ 55 ಎಂ.ಯು. ಹೆಚ್ಚಳ ಕಂಡಿದೆ.**

| ಈ ದಿನದ ದರ | ಪೆಟ್ರೋಲ್: 110.82₹/L | ಡೀಸೆಲ್ : 98.77₹/L | ಬಂಗಾರ: ₹ 15,071/Gram 24ct ₹ 13,815 /Gram 22ct | ಬೆಳ್ಳಿ: ₹234.90/ |
|---|---|---|---|---|

## ಅನಧಿಕೃತ ಆರೋಗ್ಯ ಸಂಸ್ಥೆಗಳ ವಿರುದ್ಧ ಕಠಿಣ ಕ್ರಮ: ಡಾ. ಮಂಜುನಾಥ್

• **ಉದಯವಾಹಿನಿ, ದೇವನಹಳ್ಳಿ**

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಯಾವುದೇ ಆರೋಗ್ಯ ಸಂಸ್ಥೆಗಳು ಕೆ.ಪಿ.ಎಂ.ಇ. ಕಾಯ್ದೆ ಅಡಿಯಲ್ಲಿ ನೋಂದಣಿಯನ್ನು ಹೊಂದದೇ ಅನಧಿಕೃತವಾಗಿ ಆರೋಗ್ಯ ಸಂಸ್ಥೆಯನ್ನು ನಿರ್ವಹಿಸುತ್ತಿರುವ ಸಂಬಂಧ ದೂರುಗಳನ್ನು ಸಲ್ಲಿಸುತ್ತಿದ್ದಾರೆ. ಅಂತಹ ಅನಧಿಕೃತ ಆರೋಗ್ಯ ಸಂಸ್ಥೆಗಳ ವಿರುದ್ಧ ಶಿಸ್ತು ಕ್ರಮ ಮತ್ತು ಶಾಸನಬದ್ಧ ಕ್ರಮ ಜರುಗಿಸಲಾಗುವುದು ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ. ಎಸ್. ಆರ್. ಮಂಜುನಾಥ್ ತಿಳಿಸಿದ್ದಾರೆ.

ಕೆ.ಪಿ.ಎಂ.ಇ. ಕಾಯ್ದೆ 2007 ಕಲಂ-03 ಮತ್ತು 07 ಅಡಿಯಲ್ಲಿ ನೋಂದಣೆ ಇಲ್ಲದೇ ಅನಧಿಕೃತವಾಗಿ ಆರೋಗ್ಯ ಸಂಸ್ಥೆಗಳನ್ನು ನಡೆಸುತ್ತಿರುವ ಸಂಸ್ಥೆಗಳು ತಕ್ಷಣವೇ ನೋಂದಣಿ ಮಾಡಿಕೊಳ್ಳಬೇಕಾಗಿದೆ. ತಪ್ಪಿದಲ್ಲಿ ಸಂಸ್ಥೆಗಳ ಮೊಹರನ್ನು ಬಂಧಿಸಿ, ಕಾನೂನು ಪ್ರಕ್ರಿಯೆ ಕೈಗೊಳ್ಳಲಾಗುವುದು ಎಂದರು. ಈಗಾಗಲೇ ದೂರುಗಳಾದ ಆರೋಗ್ಯ ಸಂಸ್ಥೆಯ ಕುರಿತು ವಿಚಾರಣೆಯನ್ನು ನಡೆಸಿ, ತಪ್ಪಿತಸ್ಥ ಆರೋಗ್ಯ ಸಂಸ್ಥೆಗಳ ವಿರುದ್ಧ ಕಾನೂನಿನ ಪ್ರಕಾರ ಜುಲ್ಮಾನೆಯನ್ನು ವಿಧಿಸಲಾಗಿದ್ದು, ದಾವೆಗಳನ್ನು ನ್ಯಾಯಾಲಯದಲ್ಲಿ ಹೂಡಲಾಗಿದೆ ಎಂದು ಹೇಳಿದರು.

ಸಾಮಾನ್ಯ ಜನರು ತಮ್ಮ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನಿಯಮ ಬಾಹಿರವಾಗಿ ಆರೋಗ್ಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿರುವುದು ಕಂಡು ಬಂದರೆ ಜಿಲ್ಲೆಯಲ್ಲಿ ಇರುವ ಕೆ.ಪಿ.ಎಂ.ಇ. ನೋಂದಣಿ ಮತ್ತು ಕುಂದುಕೊರತೆಗಳ ನಿವಾರಣಾ ಪ್ರಾಧಿಕಾರಕ್ಕೆ ಮಾಹಿತಿ ನೀಡಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಸ್. ಆರ್. ಮಂಜುನಾಥ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಆನೆ ರಂಗನ ನೆನಪಿನಲ್ಲಿ ಪ್ರತಿವರ್ಷ ಸೇವಾ ಕಾರ್ಯ : ಪರಿಸರ ಮಂಜು

• **ಉದಯವಾಹಿನಿ, ಕೆ.ಆರ್.ಪುರ:**

ಬನ್ನೇರುಘಟ್ಟದ ರಂಗನ ನೆನಪಿನಲ್ಲಿ ಪ್ರತಿವರ್ಷ ಸೇವಾ ಕಾರ್ಯಗಳನ್ನು ಮಾಡಲಾಗುತ್ತದೆ ಮತ್ತು ಬನ್ನೇರುಘಟ್ಟದ ರಂಗ ಎಂಬ ವಿಶೇಷ ಕೃತಿಯನ್ನು ಮುಂದಿನ ವರ್ಷ ಬಿಡುಗಡೆ ಮಾಡಲಾಗುತ್ತದೆ ಎಂದು ಪರಿಸರವಾದಿ, ರಂಗನ ಅಭಿಮಾನಿ ಪರಿಸರ ಮಂಜು ತಿಳಿಸಿದರು. ಮಹದೇವಪುರ ಕ್ಷೇತ್ರದ ಯಮಲೂರು ಗ್ರಾಮದ ಅಂಗನವಾಡಿ ಕೇಂದ್ರ 1ರಲ್ಲಿ ಪಿತೃ ಪಕ್ಷದ ಪ್ರಯುಕ್ತ ಮಿಡಿತ ಫೌಂಡೇಶನ್ ಸಂಸ್ಥೆಯ ಕಾರ್ಯಕರ್ತರು ಆನೆ ಬನ್ನೇರುಘಟ್ಟದ ರಂಗನ 8ನೇ ವರ್ಷದ ಪುಣ್ಯಸ್ಮರಣೆಯನ್ನು ಪುಟಾಣಿಗಳೊಂದಿಗೆ ಪುಷ್ಪನಮನ ಸಲ್ಲಿಸಿ, ಮೇಣ ಬತ್ತಿ ಹಿಡಿದು ಶ್ರದ್ಧಾಂಜಲಿ ಸಲ್ಲಿಸಿ, ಮಕ್ಕಳಿಗೆ ಅನ್ನ ದಾಸೋಹ ಪ್ರಸಾದವನ್ನು ನೀಡಿ


ಉದಯವಾಹಿನಿ ಚಿತ್ರ

ಮತನಾಡಿದ ಅವರು, ಆನೆಗಳ ಪೈಕಿ ರಂಗ ಎಂಬ ಆನೆ ಬಹಳ ವಿಶೇಷ ಸ್ಥಾನಮಾನ ಗೌರವವನ್ನು ಸಂಪಾದಿಸಿದ, ಅವನಿಂದು ಬದುಕಿದ್ದರೆ ದಸರಾ ಅಂಬಾರಿಯನ್ನು ಹೊತ್ತು ನಾಡಿಗೆ ಕೀರ್ತಿಯನ್ನು ತರುತ್ತಿದ್ದ, ನೂರಾರು ಕಾರ್ಯಾಚರಣೆಯಲ್ಲಿ ಭಾಗಿಯಾಗಿ ಯಶಸ್ವಿಯಾಗುತ್ತಿದ್ದ ಆದರೆ ರಂಗ ಈಗ ನಮ್ಮೊಂದಿಗೆಲ್ಲ, ಅವನ ನೆನಪು ಮರೆಯುವಂತದ್ದಲ್ಲ ಎಂದರು. ಮಾನವ - ಆನೆ ಸಂಘರ್ಷಕ್ಕೆ ಉದಾಹರಣೆಯಾಗಿದ್ದ ರಂಗನ ನೆನಪಿನಲ್ಲಿ ಅವನ ಸಂಪೂರ್ಣ ಜೀವನ ಆಧಾರಿತ ಅದ್ಭುತ ಮತ್ತು ವಿಶೇಷ ನೈಜ್ಯ ಘಟನೆಗಳ ಬಗ್ಗೆ ಸಂಪೂರ್ಣ ಮಾಹಿತಿ ನೀಡುವ ಕೃತಿಯನ್ನು ಮುಂದಿನ ವರ್ಷ ಬಿಡುಗಡೆ ಮಾಡಲಾಗುತ್ತದೆ. ಇದಕ್ಕೆ ಅರಣ್ಯ ಇಲಾಖೆಯು ಸಹ ಬೆಂಬಲ ನೀಡಿದೆ ಎಂದು ಅವರು ತಿಳಿಸಿದರು. ಮಿಡಿತ ತಂಡದ ಅಧ್ಯಕ್ಷ ಪರಿಸರ ಮಂಜು, ಮಿಡಿತ ಫೌಂಡೇಷನ್ ಉಪಾಧ್ಯಕ್ಷ ಶಿವಪ್ಪ, ಅಂಗನವಾಡಿ ಕಾರ್ಯಕರ್ತೆ ನವ್ಯ ಭಾರತಿ, ಸ್ವಯಂಸೇವಕರಾದ ಕಾವೇರಪ್ಪ, ಸುರೇಶ್, ಸೇರಿದಂತೆ ಮತ್ತಿತರರು ಭಾಗಿಯಾಗಿ ರಂಗನಿಗೆ ನಮನ ಸಲ್ಲಿಸಿ ಅವನ ಆತ್ಮಕ್ಕೆ ಶಾಂತಿಗಾಗಿ ಪ್ರಾರ್ಥನೆ ಸಲ್ಲಿಸಲಾಯಿತು.

## ಬೆಳಗಾವಿಯ ಹಿಂಡಲಗಾ ಜೈಲಿಗೆ ಮಾಜಿ ಸಂಸದನ ಶಿಫ್ಟ್!

• **ಉದಯವಾಹಿನಿ, ಬೆಂಗಳೂರು**



ಅತ್ಯಾಚಾರ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವ ಹಾಸನ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಿಂದ ಬೆಳಗಾವಿಯ ಹಿಂಡಲಗಾ ಜೈಲಿಗೆ ಶಿಫ್ಟ್ ಮಾಡಲಾಗುತ್ತಿದೆ. ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಇದ್ದ ಸೆಲ್‌ನಲ್ಲಿ ಮೊಬೈಲ್ ಪತ್ತೆಯಾದ್ದ ಬೆನ್ನಲ್ಲೇ ಕಾರಾಗೃಹ ಇಲಾಖೆ ಡಿಜಿಪಿ ಅಲೋಕ್‌ಕುಮಾರ್ ಅವರು ಶುಕ್ರವಾರ ಈ ಆದೇಶ ಹೊರಡಿಸಿದ್ದಾರೆ.

ಪರಪ್ಪನ ಅಗ್ರಹಾರ ಸೆಂಟ್ರಲ್ ಜೈಲಿನಲ್ಲಿರುವ ಪ್ರಜ್ವಲ್ ರೇವಣ್ಣ ಅವರನ್ನು ಬೆಳಗಾವಿಯ ಹಿಂಡಲಗಾ ಜೈಲಿಗೆ ಶಿಫ್ಟ್ ಮಾಡಲು ಡಿಜಿಪಿ ಅಲೋಕ್ ಕುಮಾರ್ ಅವರು ಸೂಚಿಸಿದ್ದಾರೆ. ಪ್ರಜ್ವಲ್ ರೇವಣ್ಣ ಅವರನ್ನು ಶಿಫ್ಟ್ ಮಾಡುವ ಬಗ್ಗೆ ಬೆಳಗಾವಿಯ ಹಿಂಡಲಗಾ ಜೈಲಿಗೆ ಅಧಿಕೃತ ಇ-ಮೇಲ್ ಮಾಡಲಾಗಿದೆ. ಅಲ್ಲದೆ ಜೈಲು ಮುಖ್ಯ ಅಧೀಕ್ಷಕರಿಗೆ ಈ ಕುರಿತು ಮಾಹಿತಿ ನೀಡಲಾಗಿದ್ದು, ಆದಷ್ಟು ಬೇಗ ಹಿಂಡಲಗಾ ಜೈಲಿಗೆ ಪ್ರಜ್ವಲ್ ಶಿಫ್ಟ್ ಮಾಡುವ ಸಾಧ್ಯತೆ ಇದೆ. ಯಾವಾಗ ಬೇಕಾದ್ರೂ ಎಸ್ಕಾರ್ಟ್ ಮೂಲಕ ಶಿಫ್ಟ್ ಮಾಡಬಹುದು. ಹೀಗಾಗಿ ಈ ಬಗ್ಗೆ ಸಿದ್ಧತೆ ಮಾಡಿಕೊಳ್ಳುವಂತೆ ಜೈಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

ಇತ್ತೀಚಿಗೆ ಕೇಂದ್ರ ಅಪರಾಧ ವಿಭಾಗದ(ಸಿಸಿಬಿ) ಪೊಲೀಸ್ ತಂಡ ಪರಪ್ಪನ ಅಗ್ರಹಾರ ಜೈಲಿನ ಮೇಲೆ ಹಠಾತ್ ದಾಳಿ ನಡೆಸಿ, ಪರಿಶೀಲನೆ ನಡೆಸಿತ್ತು. ಈ ವೇಳೆ ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವ ಪ್ರಜ್ವಲ್ ರೇವಣ್ಣ ಮತ್ತು ಇನ್ನೊಬ್ಬ ವಿಚಾರಣಾಧೀನ ಕೈದಿ ಬಳಿ ಮೊಬೈಲ್ ಫೋನ್ ಹಾಗೂ ಪೆನ್ ಡ್ರೈವ್ ಪತ್ತೆಯಾಗಿತ್ತು.

## ಅಮೆರಿಕ ನಿರ್ಧಾರದಿಂದ ಭಾರತದ IT ಕಂಪನಿಗಳ ಮೇಲೆ ಪರಿಣಾಮ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಬೆಂಗಳೂರು**

ಪ್ರಮುಖ ಐಟಿ ಹೊರಗುತ್ತಿಗೆ ಕಂಪನಿಗಳಿಗೆ ಸಂಬಂಧಿಸಿದ ಶಾಶ್ವತ ಕಾರ್ಮಿಕ ಪ್ರಮಾಣೀಕರಣ ಕಾರ್ಯಕ್ರಮವನ್ನು ಅಮೆರಿಕ ಸರ್ಕಾರ ಅಮಾನತುಗೊಳಿಸಿರುವುದರಿಂದ ಭಾರತದ ಮೇಲೆ ಸಂಕೀರ್ಣ ಹಾಗೂ ದೂರಗಾಮಿ ಪರಿಣಾಮಗಳು ಉಂಟಾಗಬಹುದು ಎಂದು ಸಚಿವ ಪ್ರಿಯಾಂಕ್ ಖರ್ಗೆ ಶುಕ್ರವಾರ ಹೇಳಿದ್ದಾರೆ. ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಖಾತೆ ಹೊಂದಿರುವ ಪ್ರಿಯಾಂಕ್ ಖರ್ಗೆ, ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿ, ಅಮೆರಿಕದಲ್ಲಿ ಕಾರ್ಯನಿರ್ವಹಿಸುತ್ತಿರುವ ಭಾರತೀಯ ಐಟಿ ಕಂಪನಿಗಳ ನಿರ್ವಹಣಾ ವೆಚ್ಚ ಹೆಚ್ಚಾಗಬಹುದು. ನುರಿತ ಉದ್ಯೋಗಿಗಳನ್ನು ಉಳಿಸಿಕೊಳ್ಳುವುದು ಕಷ್ಟವಾಗಬಹುದು ಹಾಗೂ ಭಾರತೀಯ ವೃತ್ತಿಪರರನ್ನು ಅಮೆರಿಕದಲ್ಲಿರುವ ಯೋಜನಾ ಸ್ಥಳಗಳಿಗೆ ನಿಯೋಜಿಸುವಲ್ಲಿ ದಕ್ಷತೆ ಕಡಿಮೆಯಾಗಬಹುದು ಎಂದು ಅಭಿಪ್ರಾಯಪಟ್ಟರು. ಪಿಟಿಐ ವಿಡಿಯೋಸ್ ಜತೆ ಮಾತನಾಡಿದ ಅವರು, ಭಾರತದ ಪ್ರಮುಖ ಐಟಿ ಕಂಪನಿಗಳಿಗೆ ಸಂಬಂಧಿಸಿದ ಶಾಶ್ವತ ಕಾರ್ಮಿಕ ಪ್ರಮಾಣೀಕರಣ ಕಾರ್ಯಕ್ರಮವನ್ನು ಅಮಾನತುಗೊಳಿಸುವ ಅಮೆರಿಕದ ನಿರ್ಧಾರ ಅತ್ಯಂತ ಸಂಕೀರ್ಣ ವಿಷಯವಾಗಿದೆ ಎಂದರು. ಇದರಿಂದ ಭಾರತೀಯ ಕಂಪನಿಗಳ ನಿರ್ವಹಣಾ ವೆಚ್ಚ ಹೆಚ್ಚಾಗಲಿದೆ. ಪ್ರತಿಭಾವಂತ ಉದ್ಯೋಗಿಗಳನ್ನು ಉಳಿಸಿಕೊಳ್ಳುವುದು ಕಷ್ಟವಾಗಲಿದೆ. ಅದಕ್ಕಿಂತ ಮುಖ್ಯವಾಗಿ, ದೀರ್ಘಾವಧಿಯಲ್ಲಿ ಕಂಪನಿಗಳು ತಮ್ಮ ಕಾರ್ಯತಂತ್ರವನ್ನು ಮರುರೂಪಿಸಿಕೊಳ್ಳಬೇಕಾಗುತ್ತದೆ ಎಂದು ಹೇಳಿದರು. ಆದರೆ, ಈ ನಿರ್ಧಾರದಿಂದ ಮತ್ತೊಂದು ಅವಕಾಶವೂ ಸೃಷ್ಟಿಯಾಗಬಹುದು ಎಂದು ಖರ್ಗೆ ಅಭಿಪ್ರಾಯಪಟ್ಟರು. ಪ್ರತಿಭೆ ಇರುವ ಸ್ಥಳದತ್ತ ಮಾರುಕಟ್ಟೆ ಚಲಿಸಲಿದೆ ಎಂಬ ಭರವಸೆ ನಮಗಿದೆ. ಅಂದರೆ, ಭಾರತದಲ್ಲಿಯೇ ಕಾರ್ಯನಿರ್ವಹಿಸುವ ಆಫ್‌ಶೋರ್ ಕೇಂದ್ರಗಳತ್ತ ಗಮನ ಹರಿಯಬಹುದು.

## ಚಿನ್ನದ ಒಡವೆ ವಿಚಾರಕ್ಕೆ ಜಗಳ: ಹೆತ್ತ ತಾಯಿ ಕೊಂದು ಆಕಸ್ಮಿಕ ಎಂದು ನಾಟಕ

• **ಉದಯವಾಹಿನಿ, ಬೆಂಗಳೂರು**

ಚಿನ್ನದ ಒಡವೆ ವಿಚಾರವಾಗಿ ತಾಯಿಯೊಂದಿಗೇ ಜಗಳ ತೆಗೆದು, ಆಕೆಯನ್ನು ಭೀಕರವಾಗಿ ಹೊಡೆದು ಪುತ್ರನೊಬ್ಬ ಹತ್ಯೆ ಮಾಡಿರುವ ಘಟನೆ ಕೊಂದಿರುವ ಘಟನೆ ಬೆಂಗಳೂರಿನ ಕಾಡುಗೋಡಿಯಲ್ಲಿ ನಡೆದಿದೆ. ಮೃತರನ್ನು ಬೇವಿನ ಮರ ಕಾಲೋನಿಯ ನಿವಾಸಿ ಭಾಗ್ಯಮ್ಮ (60) ಎಂದು ಗುರುತಿಸಲಾಗಿದೆ. ಅವರ ಮೂರನೇ ಮಗ ಬಾಲಾಜಿ (35) ಕೊಲೆ ಆರೋಪದ ಮೇಲೆ ಬಂಧಿತನಾಗಿದ್ದಾನೆ. ಕೊಲೆಯ ನಂತರ ಆರೋಪಿಯು ಇದನ್ನು 'ಆಕಸ್ಮಿಕವಾಗಿ ಕೆಳಗೆ ಬಿದ್ದು ಸಂಭವಿಸಿದ ಸಾವು' ಎಂದು ಬಿಂಬಿಸಲು ಹರಸಾಹಸ ಪಟ್ಟಿದ್ದರೂ, ವೈದ್ಯಕೀಯ ವರದಿಯಿಂದಾಗಿ ಆತನ ಪಾಪದ ಕೃತ್ಯ ಬಯಲಾಗಿದೆ. ಬಂಧನದ ಬಳಿಕ ಆರೋಪಿ ಪೊಲೀಸರಿಗೆ ನೀಡಿರುವ ಹೇಳಿಕೆಯಲ್ಲಿ, ತಂದೆಯ ಮರಣದ ನಂತರ ತಾಯಿ ಮದ್ಯಪಾನ ಮಾಡಲು ಆರಂಭಿಸಿದ್ದರು. ಆಗಾಗ ಮನೆಯಲ್ಲಿ ಗಲಾಟೆ ಮಾಡುತ್ತಿದ್ದರು. ಅಲ್ಲದೆ, ಮನೆಯ ಸಮೀಪ ವ್ಯಕ್ತಿಯೊಬ್ಬರು ಆಗಾಗ ಕುಳಿತುಕೊಳ್ಳುತ್ತಿದ್ದ ವಿಚಾರವಾಗಿ ನೆರೆಹೊರೆಯವರು ತಾಯಿಯ ಬಗ್ಗೆ ಕೆಟ್ಟದಾಗಿ ಮಾತನಾಡುತ್ತಿದ್ದಾರೆ ಎಂಬ ಕೋಪವೂ ತನಗಿತ್ತು ಎಂದು ಆತ ಹೇಳಿದ್ದಾನೆ ಎನ್ನಲಾಗಿದೆ.

## ರಾಜ್ಯದ ಬಾಕಿ ಹಣದ ಬಗ್ಗೆ ನಿರ್ಮಲಾ ಸೀತಾರಾಮನ್ ಜೊತೆ ಚರ್ಚೆ

• **ಉದಯವಾಹಿನಿ, ಬೆಂಗಳೂರು**

ರಾಜ್ಯಕ್ಕೆ ಬಹಳ ದಿನಗಳಿಂದ ಬಾಕಿ ಉಳಿದಿರುವ ಹಣದ ಕುರಿತು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ತಮಗೆ ಕೆಲವು 'ಸಿಹಿ ಸುದ್ದಿ' ನೀಡಿದ್ದಾರೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ. ಆದರೆ, ಈ ಕುರಿತ ಹೆಚ್ಚಿನ ವಿವರಗಳನ್ನು ಬಹಿರಂಗಪಡಿಸಲು ಅವರು ನಿರಾಕರಿಸಿದ್ದಾರೆ.

ನವದೆಹಲಿಯಲ್ಲಿ ನಡೆದ ಜಿಎಸ್‌ಟಿ ಮಂಡಳಿ ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಡಿಕೆ.ಶಿವಕುಮಾರ್ ಅವರು, ಕರ್ನಾಟಕಕ್ಕೆ ಬರಬೇಕಿರುವ ಬಾಕಿ ಹಣದ ವಿಚಾರವನ್ನು ಕೇಂದ್ರ ಹಣಕಾಸು ಸಚಿವರ ಗಮನಕ್ಕೆ ತಂದಿರುವುದಾಗಿ ಹೇಳಿದರು. ಸಿಹಿ ಸುದ್ದಿಯ ಕುರಿತು ಹೆಚ್ಚಿನ ವಿವರಗಳನ್ನು ನೀಡುವಂತೆ ಸುದ್ದಿಗಾರರು ಒತ್ತಾಯಿಸಿದಾಗ, ''ಈಗ ಅದರ ಬಗ್ಗೆ ಹೆಚ್ಚೇನೂ ಹೇಳುವುದಿಲ್ಲ, ಆಮೇಲೆ ಮಾತನಾಡುತ್ತೇನೆ'' ಎಂದು ತಿಳಿಸಿದರು. ಸಭೆ ಬಹಳ ಚೆನ್ನಾಗಿ ನಡೆದಿದೆ ಎಂದು ತಿಳಿಸಿದ ಅವರು, ಕರ್ನಾಟಕ ಪ್ರಸ್ತಾಪಿಸಿದ ವಿಚಾರಗಳನ್ನು ಸಭೆಯ ಸದಸ್ಯರು ಒಪ್ಪಿಕೊಂಡಿದ್ದಾರೆ ಎಂದರು. ಜಿಎಸ್‌ಟಿ ಪಾವತಿಸದವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕೇ ಮತ್ತು ಅವರನ್ನು ಬಂಧಿಸಬೇಕೇ ಎಂಬ ವಿಚಾರವೂ ಸಭೆಯಲ್ಲಿ ಚರ್ಚೆಯಾಯಿತು. ಈ ಕುರಿತು ಮಾತನಾಡಿದ ಮುಖ್ಯಮಂತ್ರಿಗಳು, ಆದಾಯ ತೆರಿಗೆ ಕಾಯ್ದೆಯಡಿ ಅನ್ವಯವಾಗುವ ನಿಯಮಗಳು ಮತ್ತು ನಿಬಂಧನೆಗಳಿಗೆ ಅನುಗುಣವಾಗಿ ಕ್ರಮ ಕೈಗೊಳ್ಳಬೇಕು ಎಂದು ವಾದಿಸಿದರು.ವ್ಯಾಪಾರಿಗಳನ್ನು ಅನಗತ್ಯವಾಗಿ ಬಂಧಿಸಬಾರದು. ಬದಲಿಗೆ, ಅವರು ಪಾವತಿಸಬೇಕಿರುವ ಬಾಕಿ ಮೊತ್ತವನ್ನು ವಸೂಲಿ ಮಾಡಬೇಕು ಎಂದು ಹೇಳಿದರು.

# ಹುಲಿಗಳ ಸಂಖ್ಯೆಯಲ್ಲಿ ಭಾರೀ ಏರಿಕೆ: 700ರ ಗಡಿ ತಲುಪಿದ ಸಂಖ್ಯೆ..!

### ಹುಲಿಗಳ ಸಂಖ್ಯೆ ಹುಲಿ ಸಂರಕ್ಷಿತ ಪ್ರದೇಶಗಳು ಮತ್ತು ವನ್ಯಜೀವಿ ಅಭಯಾರಣ್ಯಗಳಲ್ಲಿ ಮಾತ್ರವಲ್ಲದೆ, ಪ್ರಾದೇಶಿಕ ಅರಣ್ಯ ವಿಭಾಗಗಳು ಹಾಗೂ ಅರಣ್ಯದ ಹೊರಭಾಗಗಳಲ್ಲಿಯೂ ಹೆಚ್ಚುತ್ತಿದೆ.

• **ಉದಯವಾಹಿನಿ, ಬೆಂಗಳೂರು**

1 ರಾಜ್ಯದಲ್ಲಿ 563 ಹುಲಿಗಳು ದಾಖಲಾಗಿದ್ದವು.

2 ರಾಜ್ಯದಲ್ಲಿ ಸುಮಾರು 700 ಹುಲಿಗಳಿವೆ

3 2026ರ ಮೇ ತಿಂಗಳಲ್ಲಿ ಪೂರ್ಣಗೊಂಡಿದೆ

ದೇಶದಲ್ಲೇ ಅತಿ ಹೆಚ್ಚು ಹುಲಿಗಳನ್ನು ಹೊಂದಿರುವ ಹೆಮ್ಮೆಯ ರಾಜ್ಯಗಳಲ್ಲಿ ಒಂದಾದ ಕರ್ನಾಟಕದಲ್ಲಿ ಹುಲಿಗಳ ಸಂಖ್ಯೆ ಮತ್ತಷ್ಟು ವೃದ್ಧಿಯಾಗಿದೆ.

ರಾಜ್ಯದ ಅರಣ್ಯಗಳಲ್ಲಿ ಹುಲಿಗಳ ಸಂಖ್ಯೆ ಈಗ ಸುಮಾರು 700 ಕ್ಕೆ ಏರಿಕೆಯಾಗಿದೆ ಎಂದು ಅರಣ್ಯ ಇಲಾಖೆಯ ಪ್ರಾಥಮಿಕ ವರದಿಯಿಂದ ತಿಳಿದುಬಂದಿದೆ. 2022 ರ ಹುಲಿ ಗಣತಿಯಲ್ಲಿ ರಾಜ್ಯದಲ್ಲಿ 563 ಹುಲಿಗಳು ದಾಖಲಾಗಿದ್ದವು.

ನಮ್ಮ ಮೌಲ್ಯಮಾಪನದ ಪ್ರಕಾರ ರಾಜ್ಯದಲ್ಲಿ ಸುಮಾರು 700 ಹುಲಿಗಳಿವೆ. ಹುಲಿಗಳ ಸಂಖ್ಯೆ ಹುಲಿ ಸಂರಕ್ಷಿತ ಪ್ರದೇಶಗಳು ಮತ್ತು ವನ್ಯಜೀವಿ ಅಭಯಾರಣ್ಯಗಳಲ್ಲಿ ಮಾತ್ರವಲ್ಲದೆ, ಪ್ರಾದೇಶಿಕ ಅರಣ್ಯ ವಿಭಾಗಗಳು ಹಾಗೂ ಅರಣ್ಯದ ಹೊರಭಾಗಗಳಲ್ಲಿಯೂ ಹೆಚ್ಚುತ್ತಿದೆ ಎಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಕುಮಾರ್ ಪುಷ್ಕರ್ ತಿಳಿಸಿದ್ದಾರೆ.

ಹುಲಿಗಳ ಸಂಖ್ಯೆ ಹೆಚ್ಚುತ್ತಿರುವುದು ಉತ್ತಮ ಸಂರಕ್ಷಣಾ ಕಾರ್ಯಗಳ ಸೂಚನೆಯಾದರೂ, ಇದರೊಂದಿಗೆ ಮಾನವ ವನ್ಯಜೀವಿ ಸಂಘರ್ಷವೂ ಹೆಚ್ಚುತ್ತಿದೆ. ಹೀಗಾಗಿ ಸಂಘರ್ಷ ತಡೆಗಟ್ಟಲು ಕಠಿಣ ಕ್ರಮಗಳನ್ನು ರೂಪಿಸುವ ಅಗತ್ಯವಿದೆ ಎಂದು ಹೇಳಿದ್ದಾರೆ.

ಅಕ್ಟೋಬರ್ 2ರಿಂದ ಆರಂಭವಾಗಿರುವ 72ನೇ ವನ್ಯಜೀವಿ ಸಪ್ತಾಹದ ಅಂಗವಾಗಿ ಬೆಂಗಳೂರಿನಲ್ಲಿ ನಡೆದ ಒಂದು ದಿನದ ಸಮಾವೇಶದಲ್ಲಿ 'ಕರ್ನಾಟಕದ ಸಂರಕ್ಷಣಾ ಪರಂಪರೆ ಸಂರಕ್ಷಿತ ಪ್ರದೇಶಗಳು, ವನ್ಯಜೀವಿ ಭೂದೃಶ್ಯಗಳು ಮತ್ತು ಮುಂದಿನ ದಶಕ' ವಿಷಯದ ಕುರಿತು ಅವರು ಮಾತನಾಡಿದರು.

ದೇಶಾದ್ಯಂತವೂ ಹುಲಿಗಳ ಸಂಖ್ಯೆ ಏರಿಕೆಯಾಗುತ್ತಿದೆ. ಕರ್ನಾಟಕದ ಜತೆಗೆ


ಉದಯವಾಹಿನಿ ಚಿತ್ರ

ಮಧ್ಯಪ್ರದೇಶ ಮತ್ತು ಉತ್ತರಾಖಂಡ ರಾಜ್ಯಗಳಲ್ಲಿಯೂ ಹುಲಿಗಳ ಸಂಖ್ಯೆಯಲ್ಲಿ ಗಮನಾರ್ಹ ಏರಿಕೆ ಕಂಡುಬರುವ ನಿರೀಕ್ಷೆಯಿದೆ ಎಂದು ಅರಣ್ಯ ಅಧಿಕಾರಿಗಳು ತಿಳಿಸಿದ್ದಾರೆ.

ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ 2022ರ ಹುಲಿ ಗಣತಿ ವರದಿಯ ಪ್ರಕಾರ, ಮಧ್ಯಪ್ರದೇಶದ ಬಳಿಕ ಕರ್ನಾಟಕ ದೇಶದಲ್ಲೇ ಎರಡನೇ ಸ್ಥಾನದಲ್ಲಿತ್ತು.

ಹುಲಿ ಗಣತಿ ಪ್ರಕ್ರಿಯೆ 2025ರ ನವೆಂಬರ್‌ನಲ್ಲಿ ಆರಂಭವಾಗಿ 2026ರ ಮೇ ತಿಂಗಳಲ್ಲಿ ಪೂರ್ಣಗೊಂಡಿದೆ. ದತ್ತಾಂಶವನ್ನು ಸಂಗ್ರಹಿಸಿ ಅಂತಿಮ ಪರಿಶೀಲನೆ ಮತ್ತು ವರದಿ ಬಿಡುಗಡೆಗಾಗಿ ಸಚಿವಾಲಯಕ್ಕೆ ಕಳುಹಿಸಲಾಗಿದೆ. ರಾಜ್ಯದಲ್ಲಿ ಹುಲಿಗಳ ಸಂಖ್ಯೆ ಸ್ಥಿರತೆಯತ್ತ ಸಾಗಿದ್ದು, ಹುಲಿಗಳು ಸೇರಿದಂತೆ ಎಲ್ಲ ವನ್ಯಜೀವಿಗಳ ನಿರ್ವಹಣೆ ಮತ್ತು ಮಾನವ?ವನ್ಯಜೀವಿ ಸಂಘರ್ಷ ತಗ್ಗಿಸಲು ಸಕ್ರಿಯ ಕ್ರಮಗಳ ಅಗತ್ಯವಿದೆ ಎಂದು ಪುಷ್ಕರ್ ಹೇಳಿದರು.

ಆನೆಗಳ ಸಂಖ್ಯೆಯಲ್ಲಿನ ಏರಿಕೆಯ ಬಗ್ಗೆಯೂ ಪ್ರಸ್ತಾಪಿಸಿದ ಅವರು, ದೇಶದಲ್ಲೇ ಕರ್ನಾಟಕ ಅತಿ ಹೆಚ್ಚು ಆನೆಗಳನ್ನು ಹೊಂದಿರುವ ರಾಜ್ಯವಾಗಿ ಮೊದಲ ಸ್ಥಾನದಲ್ಲಿದೆ ಎಂದು ತಿಳಿಸಿದರು.

ಆನೆಗಳ ಸಂಚಾರಕ್ಕೆ ಅನುಕೂಲವಾಗುವಂತೆ ಪ್ರತ್ಯೇಕ ಆನೆ ಕಾರಿಡಾರ್ ನೀತಿಯನ್ನು ರೂಪಿಸಲಾಗುತ್ತಿದ್ದು, ಶೀಘ್ರದಲ್ಲೇ ಅನುಮೋದನೆಗಾಗಿ ಸಚಿವ ಸಂಪುಟದ ಮುಂದೆ ಮಂಡಿಸಲಾಗುವುದು ಎಂದರು.

ಕಾಡುಕೋಣಗಳ ಸಂಖ್ಯೆ ನಿಯಂತ್ರಿಸುವ ಬಗ್ಗೆಯೂ ಕ್ರಮಗಳನ್ನು ಪರಿಶೀಲಿಸಲಾಗುತ್ತಿದೆಮಾನವ ಕಾಡುಕೋಣ ಸಂಘರ್ಷದ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಈ ಕ್ರಮಕ್ಕೆ ಮುಂದಾಗಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹಾವುಗಳನ್ನು ಹಿಡಿಯುವುದು, ರಕ್ಷಿಸುವುದು ಮತ್ತು ಪುನರ್ವಸತಿ ಕಲ್ಪಿಸುವುದಕ್ಕೆ ಸಂಬಂಧಿಸಿದ ನಿಯಮಾವಳಿಗಳು ಹಾಗೂ ಕಾರ್ಯ ವಿಧಾನಗಳನ್ನೂ ಸಿದ್ಧಪಡಿಸಲಾಗುತ್ತಿದೆ. ನೋಂದಾಯಿತ ಹಾವು ಹಿಡಿಯುವವರ ಪಟ್ಟಿಯನ್ನು ಸಿದ್ಧಪಡಿಸಿ, ಸಾರ್ವಜನಿಕರು ಸುಲಭವಾಗಿ ಮಾಹಿತಿ ಪಡೆಯಲು ಅದನ್ನು ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗುವುದು ಎಂದು ಅರಣ್ಯ ಅಧಿಕಾರಿಗಳು ತಿಳಿಸಿದ್ದಾರೆ.

**ಬೆಂಗಳೂರು ಸೇರಿದಂತೆ ರಾಜ್ಯದ ನಗರ ಪ್ರದೇಶಗಳಲ್ಲಿ ಹಸಿರು ಪ್ರದೇಶಗಳನ್ನು ಹೆಚ್ಚಿಸಲು ಅರಣ್ಯ ಇಲಾಖೆಯ ಸಹಯೋಗದೊಂದಿಗೆ ಮತ್ತಷ್ಟು ಟ್ರೀ ಪಾರ್ಕ್‌ಗಳನ್ನು ನಿರ್ಮಿಸಲು ಸರ್ಕಾರ ಪ್ರಯತ್ನಿಸುತ್ತಿದೆ ಎಂದು ತಿಳಿಸಿದ್ದಾರೆ.-ಸಚಿವ ರಾಮಲಿಂಗಾ ರೆಡ್ಡಿ**

**ಹಾವಿನ ಕಡಿತವನ್ನು ಅಧಿಸೂಚಿತ ರೋಗವೆಂದು ಘೋಷಿಸಿದ ದೇಶದ ಮೊದಲ ರಾಜ್ಯ ಕರ್ನಾಟಕವಾಗಿದೆ. ಹಾವು ಹಿಡಿಯುವವರು ಮತ್ತು ತಜ್ಞರ ಸುರಕ್ಷತೆ ಹಾಗೂ ರಕ್ಷಣೆಗಾಗಿ ಸರ್ಕಾರ ಹಲವು ನಿಯಮಗಳನ್ನು ರೂಪಿಸಲು ಮುಂದಾಗಿದೆ ಎಂದು ಹೇಳಿದರು.-ಪುಷ್ಕರ್**

### ಹಸಿರು ಪ್ರದೇಶಗಳು ಕ್ರಮೇಣ ಕುಗ್ಗುತ್ತಿವೆ

**72ನೇ ವನ್ಯಜೀವಿ ಸಪ್ತಾಹದ ಅಂಗವಾಗಿ ಅರಣ್ಯ ಇಲಾಖೆ ಆಯೋಜಿಸಿದ್ದ ಬೆಂಗಳೂರು ಸಮಾವೇಶದಲ್ಲಿ ಮಾತನಾಡಿದ ಅವರು, ನಗರೀಕರಣದ ಪರಿಣಾಮವಾಗಿ ಹಸಿರು ಪ್ರದೇಶಗಳು ಕ್ರಮೇಣ ಕುಗ್ಗುತ್ತಿವೆ ಎಂದು ಹೇಳಿದರು.**

## ದಿನೇಶ್ ಗುಂಡೂರಾವ್ ಅವರ ಹುಟ್ಟುಹಬ್ಬ ಮಾತೃಶ್ರೀ ಮನೋವಿಕಾಸ ಕೇಂದ್ರ ಮಕ್ಕಳ ಜೊತೆಯಲ್ಲಿ ಆಚರಣೆ

• **ಉದಯವಾಹಿನಿ, ಬೆಂಗಳೂರು**

**ಗಾಂಧಿನಗರ ವಿಧಾನಸಭಾ ಕ್ಷೇತ್ರ:** ಶೇಷಾದ್ರಿಪುರಂ ಮಾಜಿ ಸಚಿವರು, ಶಾಸಕರಾದ ದಿನೇಶ್ ಗುಂಡೂರಾವ್ ಹುಟ್ಟಹಬ್ಬವನ್ನು ಮಾತೃಶ್ರೀ ಮನೋವಿಕಾಸ ಕೇಂದ್ರದ ಮಕ್ಕಳ ಜೊತೆಯಲ್ಲಿ ಕೇಕ್ ಕಟ್ ಮಾಡಿ, ಸಿಹಿ ಹಂಚಿ ಸಂಭ್ರಮಾಚರಣೆ. ಗಾಂಧಿನಗರ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಉಮೇಶ್ ಮತ್ತು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸದಸ್ಯರುಗಳು ಭಾಗವಹಿಸಿದ್ದರು.ಉಮೇಶ್ ರವರು ಮಾತನಾಡಿ 6ಬಾರಿ ಶಾಸಕರಾಗಿ ಮತ್ತು ಎರಡು ಬಾರಿ ಸಚಿವರಾಗಿ ಸೇವೆ ಸಲ್ಲಿಸಿರುವ ಸರಳ, ಸಜ್ಜನ ರಾಜಕಾರಣಿ ಎಂದು ಖ್ಯಾತಿ ಗಳಿಸಿರುವ ಶಾಸಕರಾದ ದಿನೇಶ್ ಗುಂಡೂರಾವ್ ರವರ ಹುಟ್ಟುಹಬ್ಬವನ್ನು ಕಾರ್ಯಕರ್ತರ ದಿನವಾಗಿ ಆಚರಿಸಲಾಗುತ್ತಿದೆ. ನಮ್ಮ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ವತಿಯಿಂದ ಮಾತೃ ಶ್ರೀ ಮನೋವಿಕಾಸ ಕೇಂದ್ರದಲ್ಲಿರುವ ಮಕ್ಕಳ ಜೊತೆಯಲ್ಲಿ ಕೇಕ್ ಕಟ್ ಮಾಡಿ, ಸಿಹಿ ತಿಂಡಿ ಜೊತೆಯಲ್ಲಿ ಊಟ ಬಡಿಸಲಾಯಿತು. ಶಾಸಕರಾದ ದಿನೇಶ್ ಗುಂಡೂರಾವ್ ರವರು ಗಾಂಧಿನಗರ ವಿಧಾನಸಭಾ ಕ್ಷೇತ್ರ ರಾಜ್ಯದ ಮಾದರಿ ವಿಧಾನಸಭಾ ಕ್ಷೇತ್ರವಾಗಿ ರೂಪಿಸಿದ್ದಾರೆ. ನಮ್ಮ ಕ್ಷೇತ್ರದ ಪ್ರತಿ ಮನೆ, ಮನೆಗೆ ಗ್ಯಾರಂಟಿ ಯೋಜನೆಗಳನ್ನು ಶಾಸಕರ ಮಾರ್ಗದರ್ಶನದಲ್ಲಿ ತಲುಪಿಸಲಾಗಿದೆ. ಅಜಾತಶತ್ರು , ಜಾತಿ, ಮತ, ಧರ್ಮ ಎಂಬ ಭೇದಬಾವವಿಲ್ಲದೇ ನಾವೆಲ್ಲರು ಒಂದೇ ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎಂಬ ಸಿದ್ದಾಂತ ಶಾಸಕರಾದ ದಿನೇಶ್ ಗುಂಡೂರಾವ್ ಅವರು ತಮ್ಮ ಜೀವನದಲ್ಲಿ ಆಳವಡಿಕೊಂಡು ಜನ ಸೇವೆ ಮಾಡುತ್ತಿದ್ದಾರೆ. ಬಡವರ ಬಂಧು ಶಾಸಕರಾದ ದಿನೇಶ್ ಗುಂಡೂರಾವ್ ರವರಿಗೆ ರಾಜಕೀಯ ಕ್ಷೇತ್ರದಲ್ಲಿ ಉನ್ನತ ಸ್ಥಾನಮಾನ ಸಿಗಲಿ ಎಂದು ಕ್ಷೇತ್ರದ ಸಮಸ್ತ ಜನರ ಪರವಾಗಿ ಪ್ರಾರ್ಥಿಸುತ್ತೇ ನೆ ಎಂದು ಹೇಳಿದರು.


ಉದಯವಾಹಿನಿ ಚಿತ್ರ

## ಶರನ್ನವರಾತ್ರಿ ಮಹೋತ್ಸವ -2026

• **ಉದಯವಾಹಿನಿ, ಬೆಂಗಳೂರು**

ಶ್ರೀ ಗಂಗಮ್ಮ ಗ್ರಾಮ ದೇವತಾ ಸೇವಾ ಸಮಿತಿಯ ವತಿಯಿಂದ ಜಯನಗರ 4ನೇ ಟಿ ಬಡಾವಣೆಯ 11ನೇ ಮುಖ್ಯರಸ್ತೆಯ ಶ್ರೀ ಗಂಗಮ್ಮ ದೇವಿ ಅಮ್ಮನವರ ದೇವಸ್ಥಾನದಲ್ಲಿ ಅಕ್ಟೋಬರ್ 11 ರಿಂದ 21ರ ವರೆಗೆ ಪ್ರತಿದಿನ ವಿಶೇಷ ಪೂಜೆ, ಅಭಿಷೇಕ, ವಿವಿಧ ಅಲಂಕಾರ ಹಾಗೂ ಪ್ರತಿದಿನ ಸಂಜೆ 6-30 ರಿಂದ 8-00ರ ವರೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ಹಮ್ಮಿಕೊಳ್ಳಲಾಗಿದೆ.

**ಕಾರ್ಯಕ್ರಮದ ವಿವರಗಳು :** ಅಕ್ಟೋಬರ್ 11-ತತ್ವಂ ನೃತ್ಯ ಶಾಲೆಯ ವಿದ್ಯಾರ್ಥಿಗಳಿಂದ ಭರತನಾಟ್ಯ ಮತ್ತು ಕುಚಿಪುಡಿ ನೃತ್ಯ,

ಅಕ್ಟೋಬರ್ 12-ಪಾಂಡುರಂಗ ಸ್ವಾಮಿ ಭಜನಾ ಮಂಡಳಿಯ ಶ್ರೀಮತಿ ಸಾವಿತ್ರಿ ಮತ್ತು ಸಂಗಡಿಗರಿಂದ ದಾಸವಾಣಿ,

ಅಕ್ಟೋಬರ್ 13-ವಿದುಷಿ ವೈಶಾಲಿ ಆಚಾರ್ಯ ಅವರ ವಿದ್ಯಾರ್ಥಿಗಳಿಂದ ಭರತನಾಟ್ಯ ಪ್ರದರ್ಶನ,

ಅಕ್ಟೋಬರ್ 14-ಶ್ರೀವಿದ್ಯಾ ನಾಗಾನಂದ ಮತ್ತು ಸಂಗಡಿಗರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ,

ಅಕ್ಟೋಬರ್ 15-ರಾಷ್ಟ್ರೋತ್ಥಾನ ಸಂಗೀತ ಮತ್ತು ನೃತ್ಯ ಕಲಾ ಕೇಂದ್ರದ ವಿದ್ಯಾರ್ಥಿಗಳಿಂದ ಭರತನಾಟ್ಯ,

ಅಕ್ಟೋಬರ್ 16-ಕು|| ಸಾಯಿ ಜ್ಯೋತಿ ಮತ್ತು ವಿದ್ಯಾರ್ಥಿಗಳಿಂದ ನೃತ್ಯ ಪ್ರದರ್ಶನ,

ಅಕ್ಟೋಬರ್ 17-ಶ್ರೀ ರಾಹುಲ್ ರವೀಂದ್ರನ್ ಮತ್ತು ಸಂಗಡಿಗರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ,

ಅಕ್ಟೋಬರ್ 18-ವಿದುಷಿ ಸ್ವಾತಿ ಸಂಸ್ಕೃತಿ ಇನ್ಸ್ಟಿಟ್ಯೂಟ್ ಆಫ್ ಫೈನ್ ಆರ್ಟ್ಸ್‌ನ ವಿದ್ಯಾರ್ಥಿಗಳಿಂದ ನೃತ್ಯ ಪ್ರದರ್ಶನ,

ಅಕ್ಟೋಬರ್ 19-ವಿದುಷಿ ಶ್ರೀಮತಿ ಸುಮಲತಾ ಮಂಜುನಾಥ್ ಮತ್ತು ಸಂಗಡಿಗರಿಂದ ಭಕ್ತಿ ಗೀತೆಗಳ ಗಾಯನ,

ಅಕ್ಟೋಬರ್ 20-ಶ್ರೀಮತಿ ಲಲಿತಾ ಗೋಪಾಲಸ್ವಾಮಿ ಮತ್ತು ಸಂಗಡಿಗರಿಂದ ದೇವಿ ನಾಮ ಸಂಕೀರ್ತನೆ ಹಾಗೂ

ಅಕ್ಟೋಬರ್ 21ರಂದು ಶ್ರೀ ಗಂಗಮ್ಮ ದೇವಿ ಉತ್ಸವ ಮೂರ್ತಿಯ ಪ್ರಾಕಾರೋತ್ಸವ ಕಾರ್ಯಕ್ರಮಗಳು ಜರುಗಲಿವೆ.

ಉದಯವಾಹಿನಿ ಚಿತ್ರ


## ರೋಲ್ ನಂಬರ್ ನೋಡಿ ಪ್ರಶ್ನೆ ಪತ್ರಿಕೆ ಸರಣಿ ಮ್ಯಾಚ್ ಮಾಡ್ತಿದ್ದ ಮಾಸ್ಟರ್ ಮೈಂಡ್ ಗಂಗ್ವಾರ್

• **ಉದಯವಾಹಿನಿ, ಬೆಂಗಳೂರು**


ಉದಯವಾಹಿನಿ ಚಿತ್ರ

ಕರ್ನಾಟಕ ಲೋಕಸೇವಾ ಆಯೋಗದ ನೇಮಕಾತಿ ಹಗರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ ಸ್ಫೋಟಕ ಮಾಹಿತಿಯೊಂದನ್ನು ಬಹಿರಂಗಪಡಿಸಿದೆ. ಕೆಪಿಎಸ್‌ಸಿಯ ಮಾಜಿ ಪರೀಕ್ಷಾ ನಿಯಂತ್ರಕ ಹಾಗೂ ಐಎಎಸ್ ಅಧಿಕಾರಿ ಜ್ಞಾನೇಂದ್ರ ಕುಮಾರ್ ಗಂಗ್ವಾರ್, ತಮಗೆ ಸಿಗುತ್ತಿದ್ದ ಗೌಪ್ಯ ಆಸನ ವ್ಯವಸ್ಥೆಯ ತಾಂತ್ರಿಕ ಮಾಹಿತಿಯನ್ನು ದುರುಪಯೋಗಪಡಿಸಿಕೊಂಡು ಅಭ್ಯರ್ಥಿಗಳ ರೋಲ್ ನಂಬರ್‌ಗಳನ್ನು ಪ್ರಶ್ನೆ ಪತ್ರಿಕೆಯ ಸರಣಿಯೊಂದಿಗೆ ಮ್ಯಾಚ್ ಮಾಡುತ್ತಿದ್ದರು ಎಂದು ಜಾರಿ ನಿರ್ದೇಶನಾಲಯದ (ಇ.ಡಿ.) ತನಿಖೆಯಿಂದ ತಿಳಿದುಬಂದಿದೆ. ಮಾನತುಗೊಂಡಿರುವ ಐಎಎಸ್ ಅಧಿಕಾರಿ ಗಂಗ್ವಾರ್ ಅವರು ಆಯ್ಕೆಯಾಗಿದ್ದ ಅಭ್ಯರ್ಥಿಗಳ ನೋಂದಣಿ ಸಂಖ್ಯೆಗಳನ್ನು ಆಯಾ ಪ್ರಶ್ನೆಪತ್ರಿಕೆ ಸರಣಿಯ ವಿವರಗಳೊಂದಿಗೆ ತಾಳೆ ಹಾಕಿ, ಅದಕ್ಕೆ ಸಂಬಂಧಿಸಿದ ಉತ್ತರಗಳನ್ನು ಕೆಪಿಎಸ್‌ಸಿಯ ಮಾಜಿ ಸದಸ್ಯೆ ಬಿ.ವಿ. ಗೀತಾ ಅವರಿಗೆ ಒದಗಿಸಿದ್ದರು ಎಂದು ತನಿಖೆಯಲ್ಲಿ ಬಹಿರಂಗವಾಗಿದೆ. ಗೌಪ್ಯವಾಗಿ ಇರಿಸಲಾಗಿದ್ದ ಪ್ರಶ್ನೆಪತ್ರಿಕೆಗಳ ಸರಣಿ ಮತ್ತು ಉತ್ತರ ಕೀಗಳ ಪಟ್ಟಿಯ ಜತೆಗೆ ಅಭ್ಯರ್ಥಿಗಳ ಆಸನ ವ್ಯವಸ್ಥೆಯ ವಿವರಗಳು ಪರೀಕ್ಷಾ ನಿಯಂತ್ರಕರಿಗೆ ಮಾತ್ರ ಲಭ್ಯವಿದ್ದವು. ಪರೀಕ್ಷೆಗೆ ಒಂದು ದಿನ ಮೊದಲು ಗೀತಾ ಅವರು ತಮ್ಮನ್ನು ಸಂಪರ್ಕಿಸಿ, ಪಶುವೈದ್ಯಾಧಿಕಾರಿ ಹುದ್ದೆಗೆ ಪರೀಕ್ಷೆ ಬರೆಯುತ್ತಿದ್ದ ಆರು ಅಭ್ಯರ್ಥಿಗಳ ನೋಂದಣಿ ಸಂಖ್ಯೆಗಳನ್ನು ನೀಡಿ, ಅವರಿಗೆ ಹಂಚಿಕೆಯಾಗಿದ್ದ ಪ್ರಶ್ನೆಪತ್ರಿಕೆ ಸರಣಿಗಳಿಗೆ ಅನುಗುಣವಾದ ಉತ್ತರ ಕೀಗಳನ್ನು ಕೇಳಿದ್ದರು ಎಂದು ಗಂಗ್ವಾರ್ ತನಿಖಾಧಿಕಾರಿಗಳಿಗೆ ತಿಳಿಸಿರುವುದಾಗಿ ವರದಿಯಾಗಿದೆ.

# ವಿನಯ್ ಕುಲಕರ್ಣಿಗೆ ತಾತ್ಕಾಲಿಕ ರಿಲೀಫ್; ಅ.27ಕ್ಕೆ ವಿಚಾರಣೆ ಮುಂದೂಡಿಕೆ

• **ಉದಯವಾಹಿನಿ, ಬೆಂಗಳೂರು**

ಧಾರವಾಡದ ಬಿಜೆಪಿ ಮುಖಂಡ ಯೋಗೀಶ್ ಗೌಡ ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ಅವರಿಗೆ ತಾತ್ಕಾಲಿಕ ರಿಲೀಫ್ ಸಿಕ್ಕಿದೆ. ವಿನಯ್ ಕುಲಕರ್ಣಿಗೆ ನೀಡಿದ್ದ ಜೀವಾವಧಿ ಶಿಕ್ಷೆಗೆ ತಡೆ ನೀಡಿ, ಜಾಮೀನು ಮಂಜೂರು ಮಾಡಿರುವ ಕರ್ನಾಟಕ ಹೈಕೋರ್ಟ್ ಆದೇಶ ಪ್ರಶ್ನಿಸಿ ಸಿಬಿಐ ಸಲ್ಲಿಸಿರುವ ಮೇಲ್ಮನವಿ ಅರ್ಜಿಯ ವಿಚಾರಣೆ ಶುಕ್ರವಾರ ಸುಪ್ರೀಂ ಕೋರ್ಟ್‌ನಲ್ಲಿ ನಡೆಯಿತು. ಸಿಬಿಐ ಮತ್ತು ಯೋಗೀಶ್ ಗೌಡ ಅವರ ಸಹೋದರ ಗುರುನಾಥ್ ಗೌಡ ಅವರು


ಉದಯವಾಹಿನಿ ಚಿತ್ರ

ಸಲ್ಲಿಸಿರುವ ಮೇಲ್ಮನವಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಪ್ರಶಾಂತ್ ಕುಮಾರ್ ಮಿಶ್ರಾ ಮತ್ತು ಚಂದ್ರಶೇಖರ್ ಅವರಿದ್ದ ಪೀಠ, ಪ್ರತಿವಾದಿಗಳಿಗೆ ನೋಟಿಸ್ ಜಾರಿ ಮಾಡಿ, ವಿಚಾರಣೆಯನ್ನು ಅಕ್ಟೋಬರ್ 27ಕ್ಕೆ ಮುಂದೂಡಿದೆ. ಸಿಬಿಐ ಪರ ವಾದ ಮಂಡಿಸಿದ ಸಾಲಿಸಿಟರ್ ಜನರಲ್ ಎಸ್.ವಿ. ರಾಜು ಅವರು, ಅಪರೂಪದ ಪ್ರಕರಣಗಳಲ್ಲಿ ಮಾತ್ರ ಶಿಕ್ಷೆಗೆ ತಡೆಯಾಜ್ಞೆ ನೀಡಬೇಕು ಎಂದು ವಾದಿಸಿದರು. ಈ ಸಂಬಂಧ ಸುಪ್ರೀಂ ಕೋರ್ಟ್‌ನ ಮೂರು ತೀರ್ಪುಗಳನ್ನು ಉಲ್ಲೇಖಿಸಿದರು.

ಸಾರ್ವಜನಿಕ ಸೇವಕರಾಗಿರುವ ವ್ಯಕ್ತಿಗಳಿಗೆ ಸಹಜವಾಗಿ ಶಿಕ್ಷೆಗೆ ತಡೆಯಾಜ್ಞೆ ನೀಡಬಾರದು ಎಂಬ ವಾದಿಸಿದರು. ಈ ಹಿಂದೆ ಸಾಕ್ಷ್ಯ ನಾಶಪಡಿಸಿದ ಆರೋಪದ ಹಿನ್ನೆಲೆಯಲ್ಲಿ ವಿನಯ್ ಕುಲಕರ್ಣಿ ಅವರ ಜಾಮೀನನ್ನು ಸುಪ್ರೀಂಕೋರ್ಟ್ ರದ್ದುಗೊಳಿಸಿತ್ತು ಎಂದು ಸಿಬಿಐ ನ್ಯಾಯಾಲಯದ ಗಮನಕ್ಕೆ ತಂದಿತು. ಅಲ್ಲದೆ, ಹಿಂದಿನ ಎರಡು ಕ್ರಿಮಿನಲ್ ಪ್ರಕರಣಗಳ ವಿವರಗಳನ್ನು ಹೈಕೋರ್ಟ್ ಮುಂದೆ ಬಹಿರಂಗಪಡಿಸಿಲ್ಲ ಎಂದೂ ಸಿಬಿಐ ವಾದಿಸಿತು.

### ವಿಚಾರಣೆಯನ್ನು ಮುಂದೂಡುವುದಿಲ್ಲ

**ಈ ವೇಳೆ ವಿನಯ್ ಕುಲಕರ್ಣಿ ಪರ ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ ವಾದ ಮಂಡಿಸಿ, ಎರಡು ವಾರಗಳ ಕಾಲಾವಕಾಶ ನೀಡುವಂತೆ ಮನವಿ ಮಾಡಿದರು. ಯಾರೂ ಓಡಿಹೋಗುವುದಿಲ್ಲ ಎಂದು ನ್ಯಾಯಪೀಠಕ್ಕೆ ತಿಳಿಸಿದರು. ವಾದ, ಪ್ರತಿವಾದ ಆಲಿಸಿದ ಸುಪ್ರೀಂ ಕೋರ್ಟ್, ವಿಚಾರಣೆಯನ್ನು ಅಕ್ಟೋಬರ್ 27ಕ್ಕೆ ಮುಂದೂಡಿತು. ಅಂದು ವಿಚಾರಣೆಯನ್ನು ಮುಂದೂಡುವುದಿಲ್ಲ ಎಂದು ಸಹ ಪೀಠ ಸ್ಪಷ್ಟಪಡಿಸಿದೆ.**

# ಕರ್ನಾಟಕದಲ್ಲಿ 1.10 ಲಕ್ಷ ಫಾರಂ-7 ಅರ್ಜಿ ಸ್ವೀಕೃತಿ, 40.88 ಲಕ್ಷ ನೋಟಿಸ್

### ವಿತರಿಸಲಾದ ನೋಟಿಸ್‌ಗಳಿಗೆ ಸಂಬಂಧಿಸಿದಂತೆ 40,88,099 ವಿಚಾರಣೆಗಳು ಪೂರ್ಣಗೊಂಡಿದ್ದು, ಇದು ಶೇ.93.47ರಷ್ಟಾಗಿದೆ.

• **ಉದಯವಾಹಿನಿ, ಬೆಂಗಳೂರು**

1 43.73 ಲಕ್ಷ ನೋಟಿಸ್ ವಿತರಣೆ

2 ಸುಳ್ಳು ಅರ್ಜಿ ಸಲ್ಲಿಸಿದರೆ ಕ್ರಮ

3 23 ಲಕ್ಷಕ್ಕೂ ಹೆಚ್ಚು ಅರ್ಜಿ ಸ್ವೀಕೃತಿ

ಕರ್ನಾಟಕದಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆಯಡಿ ಮತದಾರರ ಪಟ್ಟಿಗೆ ಹೆಸರು ಸೇರ್ಪಡೆಗೊಳಿಸುವುದಕ್ಕೆ ಆಕ್ಷೇಪ ವ್ಯಕ್ತಪಡಿಸಲು ಅಥವಾ ಈಗಿರುವ ಹೆಸರುಗಳನ್ನು ಅಳಿಸುವಂತೆ ಕೋರಿ ಒಟ್ಟು 1,10,654 ಫಾರಂ-7 ಅರ್ಜಿಗಳು ಸಲ್ಲಿಕೆಯಾಗಿವೆ ಎಂದು ಮುಖ್ಯ ಚುನಾವಣಾಧಿಕಾರಿ (ಸಿಇಒ) ಕಚೇರಿ ಶುಕ್ರವಾರ ತಿಳಿಸಿದೆ.

ಅಕ್ಟೋಬರ್ 9ರ ವೇಳೆಗೆ ರಾಜ್ಯದಲ್ಲಿ ಒಟ್ಟು 4,51,61,393 ಮತದಾರರಿದ್ದು, ಅವರಲ್ಲಿ 2,24,03,422 ಪುರುಷರು, 2,27,55,113 ಮಹಿಳೆಯರು ಹಾಗೂ 2,858 ತೃತೀಯ ಲಿಂಗದ ಮತದಾರರಿದ್ದಾರೆ ಎಂದು ಮುಖ್ಯ ಚುನಾವಣಾಧಿಕಾರಿ ವಿ. ಅನ್ಬುಕುಮಾರ್ ಅವರ ಹೇಳಿಕೆಯನ್ನು ಉಲ್ಲೇಖಿಸಿ ಪ್ರಕಟಣೆ ತಿಳಿಸಿದೆ.

ಅಂತೆಯೇ ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಒಟ್ಟು 43,82,315 ನೋಟಿಸ್‌ಗಳನ್ನು ಸಿದ್ಧಪಡಿಸಲಾಗಿದ್ದು, ಈ ಪೈಕಿ 43,73,745 ನೋಟಿಸ್‌ಗಳನ್ನು ವಿತರಿಸಲಾಗಿದೆ. ಈ ಮೂಲಕ ಶೇ.99.80ರಷ್ಟು ನೋಟಿಸ್ ವಿತರಣೆ ಪೂರ್ಣಗೊಂಡಿದೆ.

ನೋಟಿಸ್ ಹಂತದ ಪ್ರಕ್ರಿಯೆ ಹಾಗೂ ಹಕ್ಕು-ಆಕ್ಷೇಪಣೆಗಳ ವಿಲೇವಾರಿಗೆ ಅಕ್ಟೋಬರ್ 22 ಕೊನೆಯ ದಿನವಾಗಿದ್ದು, ಅಂತಿಮ ಮತದಾರರ ಪಟ್ಟಿಯನ್ನು ಅಕ್ಟೋಬರ್ 27ರಂದು


ಉದಯವಾಹಿನಿ ಚಿತ್ರ

ಪ್ರಕಟಿಸಲಾಗುವುದು. ಕೊನೆಯ ವಿಚಾರಣೆ ಅಕ್ಟೋಬರ್ 12ರಂದು ನಿಗದಿಯಾಗಿದೆ. ಜೂನ್ 16ರಿಂದ ಅಕ್ಟೋಬರ್ 8ರವರೆಗೆ ರಾಜ್ಯದಲ್ಲಿ ವಿವಿಧ ಉದ್ದೇಶಗಳಿಗಾಗಿ ಒಟ್ಟು 23,02,215 ಅರ್ಜಿಗಳು ಸಲ್ಲಿಕೆಯಾಗಿವೆ. ಇವುಗಳಲ್ಲಿ 9,52,497 ಫಾರಂ-6, 4,712 ಫಾರಂ-6ಎ, 1,10,654 ಫಾರಂ-7 ಹಾಗೂ 12,34,352 ಫಾರಂ-8 ಅರ್ಜಿಗಳು ಸೇರಿವೆ. ಫಾರಂ-6 ಅನ್ನು ಮತದಾರರ ಪಟ್ಟಿಗೆ ಹೊಸದಾಗಿ ಹೆಸರು ಸೇರ್ಪಡೆಗೊಳಿಸಲು, ಮೊದಲ ಬಾರಿಗೆ ಮತದಾನಕ್ಕೆ ಅರ್ಹರಾದವರು ಸೇರಿದಂತೆ, ಬಳಸಲಾಗುತ್ತದೆ. ವಿದೇಶದಲ್ಲಿ ವಾಸಿಸುವ ಭಾರತೀಯ ನಾಗರಿಕರು ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಲು ಫಾರಂ-6ಎ ಸಲ್ಲಿಸಬಹುದು.ಫಾರಂ-7 ಅನ್ನು ಮತದಾರರ ಪಟ್ಟಿಗೆ ಹೆಸರು ಸೇರ್ಪಡೆಗೊಳಿಸುವುದಕ್ಕೆ ಆಕ್ಷೇಪ ಸಲ್ಲಿಸಲು ಅಥವಾ ಈಗಿರುವ ಹೆಸರನ್ನು ಅಳಿಸಲು ಕೋರಲು ಬಳಸಲಾಗುತ್ತದೆ. ಫಾರಂ-8 ಮೂಲಕ ಮತದಾರರ ಪಟ್ಟಿಯಲ್ಲಿನ ವಿವರಗಳ ತಿದ್ದುಪಡಿ, ವಿಳಾಸ ಬದಲಾವಣೆ ಹಾಗೂ ಮತದಾರರ ಗುರುತಿನ ಚೀಟಿ ಬದಲಾವಣೆಗೆ ಅರ್ಜಿ ಸಲ್ಲಿಸಬಹುದು. ಅಕ್ಟೋಬರ್ 1ರಂದು ಚುನಾವಣಾಧಿಕಾರಿಗಳಿಗೆ ಬರೆದ ಪತ್ರದಲ್ಲಿ, ಮತದಾರರ ನೋಂದಣಾಧಿಕಾರಿಗಳ ಮುಂದೆ ದೊಡ್ಡ ಪ್ರಮಾಣದಲ್ಲಿ ಫಾರಂ-7 ಅರ್ಜಿಗಳನ್ನು ಸಲ್ಲಿಸಲಾಗುತ್ತಿರುವುದು ಗಮನಕ್ಕೆ ಬಂದಿದೆ. ಈ ಅರ್ಜಿಗಳು ನೈಜವಾಗಿಲ್ಲ ಎಂಬ ಆರೋಪಗಳೂ ಕೇಳಿಬಂದಿವೆ ಎಂದು ಅನ್ಬುಕುಮಾರ್ ಉಲ್ಲೇಖಿಸಿದ್ದರು. ಅರ್ಜಿಯಲ್ಲಿ ಉದ್ದೇಶಪೂರ್ವಕವಾಗಿ ಸುಳ್ಳು ಹೇಳಿಕೆ ಅಥವಾ ಘೋಷಣೆ ನೀಡಿರುವುದು ತನಿಖೆಯಲ್ಲಿ ದೃಢಪಟ್ಟರೆ, ಜನಪ್ರತಿನಿಧಿ ಕಾಯ್ದೆ-1950ರ ಸೆಕ್ಷನ್ 31ರ ಅಡಿಯಲ್ಲಿ ಕಾನೂನು ಪ್ರಕಾರ ಕ್ರಮ ಕೈಗೊಳ್ಳಬೇಕು ಎಂದು ಪತ್ರದಲ್ಲಿ ಸೂಚಿಸಲಾಗಿದೆ. ಆದರೆ, ಇಂತಹ ಕ್ರಮಕ್ಕೂ ಮೊದಲು ಮತದಾರರ ನೋಂದಣಿ ನಿಯಮಗಳು-1960ರ ನಿಯಮ 20ರ ಅಡಿಯಲ್ಲಿ ವಿಚಾರಣೆ ನಡೆಸಬೇಕು ಎಂದು ತಿಳಿಸಲಾಗಿದೆ.

**ಫಾರಂ-9, 10, 11, 11ಎ ಮತ್ತು 11ಬಿ ಮೂಲಕ ಸ್ವೀಕರಿಸಲಾದ ಹಕ್ಕು ಹಾಗೂ ಆಕ್ಷೇಪಣೆಗಳ ಕ್ಷೇತ್ರವಾರು ವಿವರಗಳನ್ನು ಸಾರ್ವಜನಿಕರ ಮಾಹಿತಿಗಾಗಿ ಚುನಾವಣಾ ಆಯೋಗದ ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ ಎಂದು ಸಿಇಒ ಕಚೇರಿ ತಿಳಿಸಿದೆ.**

### ನೋಂದಣಾಧಿಕಾರಿಗಳಿಗೆ ಸೂಚನೆ

**ಫಾರಂ-6, 6ಎ, 7 ಮತ್ತು 8ರ ಮೂಲಕ ಸುಳ್ಳು ಹಕ್ಕು ಅಥವಾ ಆಕ್ಷೇಪಣೆಗಳನ್ನು ಸಲ್ಲಿಸುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಜಿಲ್ಲಾ ಚುನಾವಣಾಧಿಕಾರಿಗಳು, ಹೆಚ್ಚುವರಿ ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಮತದಾರರ ನೋಂದಣಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.**

ಅಂತರಾಳದಿಂದ..
EDITORIAL

# ಡಿಜಿಟಲ್ ಮೂಲಸೌಕರ್ಯ ವೃದ್ಧಿಗಿರಲಿ ಸರಕಾರದ ಆದ್ಯತೆ



ಕಳೆದೊಂದು ದಶಕದಿಂದೀಚೆಗೆ ಭಾರತದಲ್ಲಿ ಅತ್ಯಾಧುನಿಕ ತಂತ್ರಜ್ಞಾನಗಳ ಬಳಕೆ ಗಣನೀಯವಾಗಿ ಹೆಚ್ಚಾಗಿದೆ. ಕೇಂದ್ರ ಸರಕಾರ ಡಿಜಿಟಲ್ ಇಂಡಿಯಾ ಉಪಕ್ರಮದಡಿ ಪರಿಚಯಿಸಿದ ವಿವಿಧ ಡಿಜಿಟಲ್ ವ್ಯವಸ್ಥೆ, ಸೇವೆಗಳು ಇಂದು ದೇಶಾದ್ಯಂತ ವ್ಯಾಪಕವಾಗಿ ಬಳಸಲ್ಪಡುತ್ತಿವೆ. ಸರಕಾರದ ಈ ಉಪಕ್ರಮಕ್ಕೆ ಜನರು ಕೂಡ ಆಸಕ್ತಿ ತೋರಿ ಪ್ರತಿಯೊಂದು ಡಿಜಿಟಲ್ ಸೇವೆ, ಸೌಲಭ್ಯಗಳನ್ನು ಅತ್ಯಂತ ಕ್ಷಿಪ್ರಗತಿಯಲ್ಲಿ ತಮ್ಮದಾಗಿಸಿಕೊಳ್ಳುತ್ತಿದ್ದಾರೆ. ಆದರೆ, ಡಿಜಿಟಲ್ ಇಂಡಿಯಾಕ್ಕೆ ಉತ್ತೇಜನ ನೀಡಿ, ಜನರನ್ನು ಅದರ ಕಕ್ಷೆಯೊಳಗೆ ತರಲು ಸರಕಾರ ತೋರಿಸುತ್ತಿರುವ ಆಸಕ್ತಿಯನ್ನು ಅವುಗಳಿಗೆ ಅಗತ್ಯವಿರುವ ಮೂಲಸೌಕರ್ಯಗಳು, ತಂತ್ರಜ್ಞಾನಗಳ ಉನ್ನತೀಕರಣ ಒದಗಿಸಲು ತೋರದಿರುವುದರಿಂದಾಗಿ ವಿವಿಧ ಸಮಸ್ಯೆಗಳು ಸೃಷ್ಟಿಯಾಗಿದೆ. ಆದರೆ, ಡಿಜಿಟಲ್ ವ್ಯವಸ್ಥೆಗೆ ಇಡೀ ದೇಶ ಹೊರಳಿಕೊಂಡ ಸಂದರ್ಭದಲ್ಲಿ ಡಿಜಿಟಲ್ ಮೂಲಸೌಕರ್ಯಗಳ ಕೊರತೆ, ನೆಟ್‌ವರ್ಕ್ ಸಮಸ್ಯೆಗಳು ನಿರಂತರವಾಗಿ ಬಾಧಿಸಿದಲ್ಲಿ ಅದು ಇಡೀ ವ್ಯವಸ್ಥೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ. ವಿಶ್ವದ ಎಲ್ಲಾ ದೇಶಗಳಿಗಿಂತಲೂ ಕಡಿಮೆ ಬೆಲೆಯಲ್ಲಿ ಇಂಟರ್‌ನೆಟ್ ಸೇವೆ ಭಾರತದಲ್ಲಿ ಲಭಿಸುತ್ತಿದೆಯಾದರೂ ಅದು ತಳಹಂತದ ಅಂದರೆ ಗ್ರಾಮೀಣ ಪ್ರದೇಶಗಳ ಜನರಿಗೆ ಲಭ್ಯವಾಗದೇ ಹೋದಲ್ಲಿ ಸರಕಾರದ ಡಿಜಿಟಲ್ ಭಾರತ' ಕನಸು ಸಂಪೂರ್ಣ ನನಸಾಗುವುದು ಕಷ್ಟಸಾಧ್ಯ. ಹಳ್ಳಿಗಳ ದೇಶವೆಂದೇ ಕರೆಯಲ್ಪಡುತ್ತಿರುವ ಭಾರತದಂತಹ ಜನಸಂಖ್ಯಾ ಬಾಹುಳ್ಯದ ಬೃಹತ್ ದೇಶದಲ್ಲಿ ಇಂತಹ ಅತ್ಯಾಧುನಿಕ ತಂತ್ರಜ್ಞಾನ ಆವಿಷ್ಕಾರಗಳ ಪ್ರಯೋಜನವನ್ನು ಹಳ್ಳಿಹಳ್ಳಿಗೂ ತಲುಪಿಸುವಂತೆ ಮಾಡುವುದು ಬಲುದೊಡ್ಡ ಸವಾಲಿನ ಕಾರ್ಯ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ, ಡಿಜಿಟಲ್ ವ್ಯವಸ್ಥೆಗೆ ಇಡೀ ದೇಶ ಹೊರಳಿಕೊಂಡ ಸಂದರ್ಭದಲ್ಲಿ ಡಿಜಿಟಲ್ ಮೂಲಸೌಕರ್ಯಗಳ ಕೊರತೆ, ನೆಟ್‌ವರ್ಕ್ ಸಮಸ್ಯೆಗಳು ನಿರಂತರವಾಗಿ ಬಾಧಿಸಿದಲ್ಲಿ ಅದು ಇಡೀ ವ್ಯವಸ್ಥೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ. ವಿಶ್ವದ ಎಲ್ಲಾ ದೇಶಗಳಿಗಿಂತಲೂ ಕಡಿಮೆ ಬೆಲೆಯಲ್ಲಿ ಇಂಟರ್‌ನೆಟ್ ಸೇವೆ ಭಾರತದಲ್ಲಿ ಲಭಿಸುತ್ತಿದೆಯಾದರೂ ಅದು ತಳಹಂತದ ಅಂದರೆ ಗ್ರಾಮೀಣ ಪ್ರದೇಶಗಳ ಜನರಿಗೆ ಲಭ್ಯವಾಗದೇ ಹೋದಲ್ಲಿ ಸರಕಾರದ ಡಿಜಿಟಲ್ ಭಾರತ' ಕನಸು ಸಂಪೂರ್ಣ ನನಸಾಗುವುದು ಕಷ್ಟಸಾಧ್ಯ.

ಡಿಜಿಟಲ್ ವ್ಯವಸ್ಥೆಯಲ್ಲಿನ ಈ ಎಲ್ಲಾ ಲೋಪದೋಷಗಳ ಕಾರಣದಿಂದಾಗಿಯೇ ಇಂದಿಗೂ ವಿಶ್ವದ ಇತರ ಅಗ್ರಮಾನ್ಯ ಡಿಜಿಟಲ್ ರಾಷ್ಟ್ರಗಳಿಗೆ ಹೋಲಿಸಿದರೆ ದೇಶದಲ್ಲಿ ಡಿಜಿಟಲ್ ಅಂತರ ಅಧಿಕವಾಗಿದೆ. ಇನ್ನು ಕೆಲವು ಡಿಜಿಟಲ್ ಸೇವೆಗಳು ಇಂದಿಗೂ ಜನಸಾಮಾನ್ಯರನ್ನು ತಲುಪುತ್ತಿಲ್ಲ. ಸರಕಾರ ವಿವಿಧ ಜನಪರ ಹಾಗೂ ಜನಕಲ್ಯಾಣ ಯೋಜನೆಗಳ ಫಲಾನುಭವಿಗಳಿಗೆ ಡಿಜಿಟಲ್ ವ್ಯವಸ್ಥೆಯ ಮೂಲಕನಗದು ಪಾವತಿಸುತ್ತಿರುವುದರಿಂದಾಗಿ ಇತ್ತ ಸರಕಾರ ಲಕ್ಷ್ಯ ಹರಿಸಬೇಕು. ನವದೆಹಲಿಯಲ್ಲಿ ನಡೆದ ಇಂಡಿಯಾ ಮೊಬೈಲ್ ಕಾಂಗ್ರೆಸ್‌ನ ಹತ್ತನೇ ಆವೃತ್ತಿಯನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ ಡಿಜಿಟಲ್ ಅಂತರವನ್ನು ಕಡಿಮೆ ಮಾಡುವುದು ಹಾಗೂ ಅತ್ಯಾಧುನಿಕ ತಂತ್ರಜ್ಞಾನಗಳು ಸಂಪನ್ಮೂಲ ಲಭ್ಯತೆ ಇರುವವರಿಗೆ ಮಾತ್ರ ಸೀಮಿತವಾಗದಂತೆ ನೋಡಿಕೊಳ್ಳುವುದು ಸರಕಾರದ ಆದ್ಯತೆಯಾಗಿದೆ ಎಂದಿರುವುದು ಗಮನೀಯ. ಈ ಕಾರಣದಿಂದಾಗಿಯೇ ಸರಕಾರದ ಡಿಜಿಟಲ್ ಇಂಡಿಯಾ ಸಾಕಾರಗೊಂಡಿದೆ ಎಂದವರು ಹೇಳಿರುವರಾದರೂ ಈ ದಿಸೆಯಲ್ಲಿ ಸಾಗಬೇಕಾದ ಹಾದಿ ಬಹಳಷ್ಟು ದೂರವಿದೆ ಎಂಬುದನ್ನು ಮರೆಯುವಂತಿಲ್ಲ. ಈ ನಿಟ್ಟಿನಲ್ಲಿ ಕೇಂದ್ರ ಸರಕಾರ ಡಿಜಿಟಲ್ ಮೂಲಸೌಕರ್ಯ ವೃದ್ಧಿ, ಸುಧಾರಣಾ ಕ್ರಮಗಳಿಗೆ ಇನ್ನಷ್ಟು ಹೆಚ್ಚಿನ ಒತ್ತು ನೀಡುವ ಅಗತ್ಯವಿದೆ. ಇನ್ನು ಡಿಜಿಟಲ್ ಸುರಕ್ಷೆಯನ್ನು ಖಾತರಿಪಡಿಸಲು ಸರಕಾರ ತುರ್ತು ಲಕ್ಷ್ಯ ಹರಿಸಬೇಕು. ಇದೇ ವೇಳೆ ಪ್ರಧಾನಿಯವರು ಹೇಳಿದಂತೆ ಈ ಸಂಬಂಧ ಜಾಗತಿಕ ವ್ಯವಸ್ಥೆಯನ್ನು ರೂಪಿಸಲು ವಿಶ್ವರಾಷ್ಟ್ರಗಳ ಮೇಲೆ ಹೆಚ್ಚಿನ ಒತ್ತಡ ಹೇರಬೇಕು.

**ಇನ್ನು ಸೈಬರ್ ಸುರಕ್ಷೆ ಎನ್ನುವುದು ದಿನಗಳೆದಂತೆ ಜನತೆ ಮತ್ತು ಸರಕಾರದ ಪಾಲಿಗೆ ಪೆಡಂಭೂತವಾಗಿ ಪರಿಣಮಿಸಿದ್ದು ಎಲ್ಲಾ ಮುಂಜಾಗ್ರತೆ ಮತ್ತು ಸುರಕ್ಷಾ ಕ್ರಮಗಳ ಹೊರತಾಗಿ ಸೈಬರ್ ವಂಚನೆ, ಅಕ್ರಮಗಳಿಗೆ ಕಡಿವಾಣ ಹಾಕಲು ಸಾಧ್ಯವಾಗಿಲ್ಲ. ಇದೇ ವೇಳೆ ಕೇಂದ್ರ ಸರಕಾರದ ನಿರಂತರ ಪ್ರಯತ್ನಗಳ ಹೊರತಾಗಿಯೂ ಗ್ರಾಮೀಣ ಪ್ರದೇಶಗಳಿಗಿನ್ನೂ ಈ ತಂತ್ರಜ್ಞಾನ ಸೇವೆಗಳು ಸಮರ್ಪಕವಾಗಿ ಲಭಿಸಿಲ್ಲ. ಇದು ಕೂಡ ಡಿಜಿಟಲ್ ಇಂಡಿಯಾದ ಗುರಿಯನ್ನು ತಲುಪುವಲ್ಲಿ ದೊಡ್ಡ ತಡೆಯಾಗಿ ಪರಿಣಮಿಸಿದೆ. ಹಳ್ಳಿಗಳ ದೇಶವೆಂದೇ ಕರೆಯಲ್ಪಡುತ್ತಿರುವ ಭಾರತದಂತಹ ಜನಸಂಖ್ಯಾ ಬಾಹುಳ್ಯದ ಬೃಹತ್ ದೇಶದಲ್ಲಿ ಇಂತಹ ಅತ್ಯಾಧುನಿಕ ತಂತ್ರಜ್ಞಾನ ಆವಿಷ್ಕಾರಗಳ ಪ್ರಯೋಜನವನ್ನು ಹಳ್ಳಿಹಳ್ಳಿಗೂ ತಲುಪಿಸುವಂತೆ ಮಾಡುವುದು ಬಲುದೊಡ್ಡ ಸವಾಲಿನ ಕಾರ್ಯ ಎಂಬುದರಲ್ಲಿ ಎರಡು ಮಾತಿಲ್ಲ.**






• ಹಿಂದಿನ ಸಂಚಿಕೆಯಿಂದ **121ನೆಯ ಅಧ್ಯಾಯ**

ನಿಂತು ಎದುರಿಸಲೂ ಶಕ್ಯವಿಲ್ಲ, ಹೆಜ್ಜೆಯಿಡಲೂ ಅಳವಲ್ಲ, ಎಂಬ ರೀತಿಯಲ್ಲಿ ಅವನು ಬಾಣ ಸುರಿಸುವ ಚಮತ್ಕಾರಕ್ಕೆ ಕೊನೆಯೆಂಬುದೇ ಇಲ್ಲ! ಅವನು ಈ ಸಂಮೋಹನವಿದ್ಯೆಯನ್ನು ಯಾರಿಂದ ಕಲಿತನೋ ಕವಿದ ಕಗ್ಗತ್ತಲೆಯಲ್ಲಿ ಒಂದು ಕಡೆಯ ಮಿಂಚಿನಂತೆ ಹೊಳೆದು ಶರವೃಷ್ಟಿಗಳನ್ನು ಕರೆಯುವುದನ್ನು ನೋಡುವಷ್ಟರಲ್ಲಿ ಮನೋವೇಗದಿಂದ ಮತ್ತೊಂದೆಡೆಗೆ ಹಾರಿ ಗರ್ಜನೆ ಮಾಡುತ್ತ ಬಾಣಗಳನ್ನು ತೂರಿಬಿಡುತ್ತಾನೆ. ಕ್ಷಣದಲ್ಲಿ ಕಣ್ಣಿಗೆ ಕಾಣದಂತೆ ನಿಶಾಯುವತಿಯಲ್ಲಿ ಬೆರೆತುಬಿಡುತ್ತಾನಲ್ಲ, ಈ ಅಮರೇಂದಜಿತವು ಅದೆಂಥ ಮಾಯಾವಿಶಾರದ ಮೂಡುದಿಕ್ಕಿನಲ್ಲಿದ್ದಾನೆ, ಕೊಂದುಬಿಡಬೇಕು ಎಂದು ಕೈಯೆತ್ತುವಷ್ಟರಲ್ಲಿ, ಉತ್ತರದ ಕಡೆಯಿಂದ ಬಾಣಗಳು ಬರಲು ತೊಡಗಿ ಆ ದಿಸೆಗೆ ನೋಟವು ಹೋಗುವಷ್ಟರಲ್ಲಿ ತೆಂಕಣದಿಂದ ಬಾಣಗಳು ಸುರಿಯುತ್ತಿದ್ದವು. ಓಹೋ ಅವನು ಈ ದಿಸೆಯಲ್ಲಿದ್ದಾನೆ ಎಂಬುದು ಮನಸ್ಸಿಗೆ ತೋಚುವಷ್ಟರಲ್ಲಿ ಪಡುಗಡಲ ತೆರೆಗಳಂತೆ ಆ ಕಡೆಯಿಂದ ಶರಗಳು ಬಂದು ಬೀಳತೊಡಗುವು. ಮಹಾದೇವನೇ, ಅವನ ಮಾಯಾಬಲ ಅದೆಂತಹುದು, ಅವನ ಈ ಶೌರ್ಯಕ್ಕೆ ಬಲಿಯಾಗದವರಾರು. ಅಕ್ಕಪಕ್ಕಗಳಿಗೆ ಕಣ್ಣು ಹೊರಳಿಸಲೂ ಸಾಧ್ಯವಿಲ್ಲದಂತೆ, ಎದುರಿನಲ್ಲಿ ತಲೆಯೆತ್ತಿ ನೋಡಲೂ ಆಗದಂತೆ, ಹಿಂದೆ ತಿರುಗಿ ಹೆಜ್ಜೆಯಿಡಲಂತೂ ಶಕ್ಯವೇ ಆಗದಂತೆ ನಿಲ್ಲಲೂ ಆಗದ, ನಿಂತ ಕಡೆಯಲ್ಲಿಯೇ ಅತ್ತಿತ್ತ ಕಣ್ಣಾಡಿಸಲೂ ಆಗದ ರೀತಿಯಲ್ಲಿನ ಈ ಯುದ್ಧರಂಗದಲ್ಲಿ ರಾಘವನು ಗೆಲ್ಲುವುದು ಅಸಂಭವ – ಎಂದು ಅಮರತತಿ ಚಿಂತಿಸುವಂತಾಯಿತು. ಎಲ್ಲಿನೋಡಿದರೂ ಬಾಣಗಳ ರಾಶಿ, ಮತ್ತೆಲ್ಲಿ ಕಣ್ಣಾಡಿಸಿದರೂ ಕಣೆಗಳು ಉರುಳುವಿಕೆ' ಸುರುಳುವಿಕೆಗಳು, ಮತ್ತೆಲ್ಲಿ ಕಣ್ಣುಗಳನ್ನು ತಿರುವಿದರೂ ಕಣೆಗಳ ನೆರವಿ ನಿಲ್ಲುತ್ತಾನೆ, ಓಡುತ್ತಾನೆ, ಅಡಗಿಕೊಳ್ಳುತ್ತಾನೆ, ಓಡಾಡುತ್ತಾನೆ, ಕಣ್ಣುಮುಚ್ಚಿ ಬಿಚ್ಚುವಷ್ಟರಲ್ಲಿ ದಾಂಧಲೆ ನಡೆಸುತ್ತಾನೆ. ಕಪಿಸೇನೆಯು ಕಣ್ಣು ತೆರೆದು ಭೂಮಿ ಆಕಾಶಗಳನ್ನು ನೋಡದೆ, ಉಸಿರಾಡದೆ, ಮಾತನಾಡದೆ ದಿಗ್ಭ್ರಮೆಯಿಂದ ಕೂಡಿತು. ಪ್ರಳಯಕಾಲದ ಮೋಡಗಳಂತೆ ಖಳತನಯನು ಮೇಲಿನಿಂದ ಭೂಮಿಯ ಮೇಲಿನ ಕಪಿಗಳ ಸಂತತಿ ಹಾಗೂ ರಘುರಾಮಲಕ್ಷ್ಮಣರ ಮೇಲೆ ಶರವೃಷ್ಟಿಗರೆದು ಕಳವಳಗೊಳಿಸಿ, ಸುರಿಯುವ ರಕ್ತಮಾಂಸಗಳಿಂದ ಆಕರ್ಷಿತವಾದ ಭೂತಬೇತಾಳಗಳ ಗುಂಪು ಬರಲು ಅನುವು ಮಾಡಿಕೊಟ್ಟು ಸಂತಸದಳೆದ. ಅಸುರನು ಮಾಯಾಕಲಿತವಾದ ಸರ್ಪಾಸ್ತ್ರಸಂಧಾನ ಮಾಡಿ ಅಣ್ಣತಮ್ಮಂದಿರ ಮೇಲೆ ಬಿಡಲು ಆ ಕ್ಷಣದಲ್ಲಿ ರಾಮಲಕ್ಷ್ಮಣರು ಅದರ ಕಟ್ಟಿಗೆ ಒಳಗಾಗಿ ನೆಲದ ಮೇಲೆ ಬಿದ್ದರು. ಬ್ರಹ್ಮ ಇಂದ್ರ ಮುಂತಾದ ದೇವತಾನಿಚಯವನ್ನು ಸೃಷ್ಟಿಸಿ ಸಲಹಿ ನಾಶಗೊಳಿಸುವ ಪರತತ್ವದ ಅಸಮಾನಮೂರ್ತಿಗಳು ಆ ಸಮಯದಲ್ಲಿ ಲೋಕಾನುಸರಣೆಯಿಂದ ನೆಲಕ್ಕುರುಳಿದರು. ಸಾಲುಸಾಲಾಗಿ ಮೇಲೆ ಬೀಳುತ್ತಿರುವ ಬಾಣಗಳು ಮೈಗಳಿಗೆ ನಾಟಿಕೊಂಡು ಗಾಯಗಳನ್ನುಂಟುಮಾಡಿ ಅವರ ಮೈಯೆಲ್ಲವೂ ರಕ್ತಮಯವಾಯಿತು. ಒಡಹುಟ್ಟಿದವರು ಭೂಲಲನೆಯನ್ನು ನೆಚ್ಚಿಕೊಂಡು ಕಾಲವಶದಿಂದ ನಿಶ್ಚೇಷ್ಟಿತರಾಗಿ ಆಲಸ್ಯದಿಂದಿರಲು ಅದನ್ನು ಕಂಡ ರಾವಣಿಯು ನಗುತ್ತ ಮತ್ತೆ ಮತ್ತೆ ಶರಗಳನ್ನೆಸೆದನು . ಇಂದ್ರಜಿತುವಿನ ಶರಾಘಾತಕ್ಕೊಳಗಾಗಿ ಕಪಿಸಂತತಿಯು ನೆಲಕ್ಕೊರಗಿತು, ಆಗಸದಲ್ಲಿ ರಕ್ಕಸನನ್ನು ಹುಡುಕಲು ಆಕಾಶಮಾರ್ಗದಲ್ಲಿ ಹೋಗಿದ್ದ ಬಲಿಮುಖಮುಖ್ಯರು ದೈತ್ಯನನ್ನು ಕಾಣದೆ ಕೊರಗುತ್ತ ಭೂಮಿಯ ಕಡೆಗೆ ಇಳಿದು ಬಂದರು. ಶರತಲ್ಪದಲ್ಲಿ ಮರೆದೊರಗಿದ್ದ ರಾಮಲಕ್ಷ್ಮಣರನ್ನು ವಿಭೀಷಣನು ನೋಡಿ ಸಂಕ್ಷೇಶಗೊಂಡ. ಮೈಗಳಿಂದ ಸುರಿಯುವ ರಕ್ತದ ಧಾರೆಯಿಂದ ಕೂಡಿದ ಅವರು ಅಲುಗಾಟವಿಲ್ಲದೆ ನೆಲದ ಮೇಲೆ ಬಿದ್ದಿರುವುದನ್ನು ನೋಡಿದ ವಿಭೀಷಣನು ಇತರ ಕಪಿಯೂಥನಾಥರೊನೆ ಅವರ ಬಳಿ ಬಂದು ಕೊರಗಿ ಕರಗಿ ಕಂಪಿಸಿ, ಅವರ ನಾನಾ ಗುಣಗಳನ್ನು ನೆನೆಸಿಕೊಂಡು, ಮುಂದಿನ ಹಾದಿಯ ಬಗ್ಗೆ ತಮ್ಮತಮ್ಮಲ್ಲೇ ಆಲೋಚಿಸಿ ದಿಕ್ಕು ತೋಚದೆ ಬಳಲುತ್ತಲಿದ್ದರು. ಕವಿದ ಅಂಧಕಾರದಲ್ಲಿ ಯಾರೂ ಕಾಣದ ಹಾಗೆ ಅಲ್ಲಲ್ಲಿ ಬಿದ್ದುಕೊಂಡು ನಾನಾ ರೀತಿಗಳಲ್ಲಿ ನರಳುತ್ತಿರುವ ಕಪಿಗಳನ್ನು ನೋಡಿ ಮರುಗುತ್ತ ವಿಭೀಷಣನು ಸುತ್ತಲೂ ನೋಡುತ್ತ, ಕೊನೆಗೆ ಆಕಾಶದತ್ತ ಕಣ್ಣು ಹಾಯಿಸಲು ಅಲ್ಲಿ ಕುಟಿಲತರವಾದ ಮಾಯೆಯಲ್ಲಿ ಅಡಗಿಕೊಂಡು ಶಸ್ತವರ್ಷವನ್ನು ಮಾಡುವ ಇಂದ್ರಜಿತುವನ್ನು ನೋಡಿ ಅಚ್ಚರಿಗೊಂಡ.

ಮುಂದುವರೆಯುವುದು



ಪರೀಕ್ಷಾ ಸಂಭ್ರಮ
ಡಾ.ಸುಧಾಕರ್ . ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು
(M)8747969381
03

# ಹೋಲಿಕೆ ಬಿಟ್ಟರೆ ಗೆಲುವು ಸಿಕ್ಕಿತು!

**ನಿರಂತರ ಹೋಲಿಕೆಯಿಂದ ಒತ್ತಡ ಹೆಚ್ಚಿ ಓದಿದ ಅಂಶವೂ ಮರೆತುಹೋಗುತ್ತದೆ ಎಂದು ಮನೋವಿಜ್ಞಾನ ಹೇಳುತ್ತದೆ. ಇತರರನ್ನು ನೋಡಿ ಓಡುವ ಬದಲು ಹಿಂದಿನ ನಮ್ಮನ್ನು ನೋಡಿಕೊಳ್ಳೋಣ. ಕಳೆದ ತಿಂಗಳು ಒಂದು ಪಾಠಕ್ಕೆ ಒಂದು ಗಂಟೆ ಬೇಕಾಗುತ್ತಿತ್ತು, ಈಗ ಅರ್ಧ ಗಂಟೆಯಲ್ಲಿ ಪೂರ್ಣಗೊಳ್ಳುತ್ತಿದೆಯೇ? ಅದೇ ನಿಜವಾದ ಗೆಲುವು. ಸಣ್ಣ ಪ್ರಗತಿಯೂ ದೊಡ್ಡ ಸಾಧನೆಯ ಮೊದಲ ಮೆಟ್ಟಿಲಾಗಿರುತ್ತದೆ.**

ಪರೀಕ್ಷೆ ಮುಗಿದೊಡನೆ ಅವರು ಎಷ್ಟು ಪಡೆದರು? ಎಂದು ನೋಡುವುದು ಸಹಜ ಅಭ್ಯಾಸ. ಸಹಪಾಠಿಗಳ ಅಂಕ, ವೇಗ, ತಯಾರಿ ಕಂಡು ಮನಸ್ಸು ಕುಗ್ಗುತ್ತದೆ. ನಾವು ಅಷ್ಟು ಓದಿಲ್ಲ ಎಂಬ ಭಾವ ಮೂಡುತ್ತದೆ. ಆದರೆ ಸತ್ಯವೆಂದರೆ ಪ್ರತಿಯೊಬ್ಬರ ಮನಸ್ಥಿತಿ, ಮನೆಯ ಪರಿಸರ, ಕಲಿಕೆಯ ಲಯ ಭಿನ್ನವಾಗಿರುತ್ತದೆ. ಹೋಲಿಕೆ ಎಂದರೆ ಸೇಬನ್ನು ಮಾವಿನೊಂದಿಗೆ ತೂಗಿದಂತೆ. ಇದರಿಂದ ಆತ್ಮವಿಶ್ವಾಸಕ್ಕೆ ಮಾತ್ರ ಧಕ್ಕೆಯಾಗುತ್ತದೆ.

ಆದ್ದರಿಂದ ಗಮನವನ್ನು ಹೊರಗಿನಿಂದ ಒಳಮುಖವಾಗಿ ತಿರುಗಿಸೋಣ. ಇಂದು ಏನನ್ನು ಕಲಿತೆವು, ನಿನ್ನೆಗಿಂತ ಒಂದು ಪ್ರಶ್ನೆ ಹೆಚ್ಚು ಬಗೆಹರಿಸಿದೆವೇ ಎಂದು ಆತ್ಮಾವಲೋಕನ ಮಾಡೋಣ. ದಿನದ ಸಾಧನೆಗಳನ್ನು ಪುಟ್ಟ ಪುಸ್ತಕದಲ್ಲಿ ಗುರುತಿಸಿಡೋಣ. ಒಂದು ಹೊಸ ಪದ, ಒಂದು ಹೆಚ್ಚುವರಿ ಲೆಕ್ಕ ಬಗೆಹರಿದರೂ ಅದು ಪ್ರಗತಿಯೇ.



ಇದರಿಂದ ಮನಸ್ಸಿಗೆ ತೃಪ್ತಿ ದೊರೆತು ಅಧ್ಯಯನದಲ್ಲಿ ಆಸಕ್ತಿ ಹೆಚ್ಚುತ್ತದೆ. ಕೊನೆಯದಾಗಿ ಇತರರ ಓಟವನ್ನು ನೋಡಿ ನಮ್ಮ ಓಟವನ್ನು ನಿಲ್ಲಿಸಬಾರದು.

ಪ್ರತಿಯೊಬ್ಬರ ಪಯಣವು ಭಿನ್ನವಾಗಿರುತ್ತದೆ. ನಮ್ಮದೇ ವೇಗದಲ್ಲಿ, ನಮ್ಮದೇ ಶೈಲಿಯಲ್ಲಿ ಮುನ್ನಡೆಯೋಣ. ಹೋಲಿಕೆಯನ್ನು ತೊರೆದು ಸ್ವ-ಸುಧಾರಣೆಯತ್ತ ಗಮನ ಹರಿಸಿದರೆ ಗೆಲುವು ಖಂಡಿತ ನಮ್ಮದಾಗುತ್ತದೆ. ನಾವು ನಮ್ಮ ಎದುರಾಳಿಗಳಲ್ಲ, ನಮ್ಮ ಸಾರಥಿಗಳು.

# ಮದುವೆ ಬಳಿಕ ದಂಪತಿಗಳ ಭವಿಷ್ಯದ ಆರ್ಥಿಕ ಭದ್ರತೆಗಾಗಿ ತಜ್ಞರು ಸೂಚಿಸುವ ಸೂಪರ್ ಸೂತ್ರಗಳಿವು!

ಮದುವೆ ಬಳಿಕ ಜೀವನದಲ್ಲಿ ಹಲವು ಬದಲಾವಣೆಗಳಾಗುತ್ತವೆ. ಜವಾಬ್ದಾರಿಗಳು ಹೆಚ್ಚಾಗುತ್ತವೆ, ಭವಿಷ್ಯದ ಯೋಜನೆಗಳನ್ನು ರೂಪಿಸಲಾಗುತ್ತದೆ ಹಾಗೂ ಮನೆಯ ನಿರ್ವಹಣೆಯಿಂದ ಹಿಡಿದು ಮಕ್ಕಳ ಶಿಕ್ಷಣದವರೆಗೆ ವಿವಿಧ ಆರ್ಥಿಕ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಪ್ರೀತಿ ಹಾಗೂ ಪರಸ್ಪರ ತಿಳಿವಳಿಕೆಯ ಜೊತೆಗೆ ಹಣಕಾಸಿನ ವಿಷಯಗಳ ಕುರಿತು ಪತಿ – ಪತ್ನಿಯರು ಮುಕ್ತವಾಗಿ ಚರ್ಚಿಸಬೇಕಾಗುತ್ತದೆ.

ಗಳಿಕೆ, ಉಳಿತಾಯ, ವೆಚ್ಚಗಳು ಹಾಗೂ ಸಾಲದ ಕುರಿತು ಸ್ಪಷ್ಟತೆಯ ಕೊರತೆಯಿಂದ ವೈವಾಹಿಕ ಸಂಬಂಧದಲ್ಲಿ ಜಗಳಕ್ಕೆ ಕಾರಣವಾಗಬಹುದು. ಈ ಸಮಸ್ಯೆಯನ್ನು ತಪ್ಪಿಸಲು ಉತ್ತಮ ಮಾರ್ಗವೆಂದರೆ ದಂಪತಿಗಳು ಮದುವೆಯ ಆರಂಭಿಕ ಹಂತದಲ್ಲೇ ತಮ್ಮ ಆರ್ಥಿಕ ಆದ್ಯತೆಗಳು ಹಾಗೂ ಜವಾಬ್ದಾರಿಗಳ ಬಗ್ಗೆ ಚರ್ಚಿಸುವುದು ಒಳ್ಳೆಯದು. ದಂಪತಿಗಳು ಚರ್ಚಿಸಬೇಕಾದ ಪ್ರಮುಖ ಆರ್ಥಿಕ ವಿಷಯಗಳು ಯಾವುವು ಎಂಬದುನ್ನು ಇಲ್ಲಿ ತಿಳಿಯೋಣ. ಪತಿ – ಪತ್ನಿ ಪರಸ್ಪರರ ಆದಾಯದ ಬಗ್ಗೆ ಸ್ಪಷ್ಟ ತಿಳಿದುಕೊಳ್ಳುವುದು ತುಂಬಾ ಮುಖ್ಯವಾಗುತ್ತದೆ. ಇಬ್ಬರೂ ದುಡಿಯುತ್ತಿದ್ದರೆ ತಮ್ಮ ಮಾಸಿಕ ಆದಾಯ, ನಿಯಮಿತ ವೆಚ್ಚಗಳ ಕುರಿತು ಮುಕ್ತವಾಗಿ ಚರ್ಚಿಸಬೇಕು. ನಿಮ್ಮ ಮನೆಯ ಬಜೆಟ್ ರೂಪಿಸಲು ಹಾಗೂ ಭವಿಷ್ಯದ ಗುರಿಗಳನ್ನು ನಿಗದಿಪಡಿಸಲು ಕೂಡ ಸುಲಭವಾಗಿಸುತ್ತದೆ. ದಂಪತಿಗಳು ಪರಸ್ಪರರ ಆದಾಯದ ಕುರಿತು ಸ್ಪಷ್ಟವಾಗಿ ತಿಳಿಯುವುದು ಸುಸ್ಥಿರ ಸಂಸಾರ, ಗಟ್ಟಿಮುಟ್ಟಾದ ಆರ್ಥಿಕ ಭವಿಷ್ಯಕ್ಕೆ ಅತ್ಯಂತ ಅತ್ಯಗತ್ಯವಾಗಿದೆ ಎಂದು ತಜ್ಞರು ತಿಳಿಸುತ್ತಾರೆ. ದಿನಸಿ, ಬಾಡಿಗೆ, ವಿದ್ಯುತ್ ಬಿಲ್‌ಗಳು, ಮಕ್ಕಳ ಶಾಲಾ ಶುಲ್ಕಗಳು ಹಾಗೂ ಇತರ ಅಗತ್ಯ ವೆಚ್ಚಗಳ ಬಗ್ಗೆ ಮೊದಲೇ ಒಪ್ಪಂದಕ್ಕೆ ಬರುವುದು ಪ್ರಯೋಜನಕಾರಿ. ದಂಪತಿಗಳು ತಮ್ಮ ಆರ್ಥಿಕ ಸಾಮರ್ಥ್ಯ, ಪರಿಸ್ಥಿತಿಗೆ ಅನುಗುಣವಾಗಿ ತಮ್ಮ ಕೊಡುಗೆಯ ಕುರಿತು ನಿರ್ಧರಿಸಬಹುದು. ಪ್ರತಿಯೊಂದು ವೆಚ್ಚವನ್ನು ನಿಖರವಾಗಿ 50-50ರಷ್ಟು ಹಂಚಿಕೊಳ್ಳುವುದು ಕಡ್ಡಾಯವಲ್ಲ, ವ್ಯವಸ್ಥೆಯು ಇಬ್ಬರಿಗೂ ನ್ಯಾಯಯುತ ಎಂದು ಅನ್ನಿಸುವಂತಿರಬೇಕು. ಕೇವಲ ಹಣ ಗಳಿಸುವುದು ಸಾಕಾಗುವುದಿಲ್ಲ. ಭವಿಷ್ಯಕ್ಕಾಗಿ ಉಳಿತಾಯ ಮಾಡುವುದು ಕೂಡ ತುಂಬಾ ಒಳ್ಳೆಯದು. ಪ್ರತಿ ತಿಂಗಳು ಎಷ್ಟು ಹಣ ಉಳಿಸಬೇಕು ಹಾಗೂ ಯಾವ ಗುರಿಗಳಿಗಾಗಿ ಉಳಿಸಬೇಕು ಎಂಬುದನ್ನು ದಂಪತಿಗಳು ಒಟ್ಟಾಗಿ ನಿರ್ಧಾರ ಮಾಡಬೇಕಾಗುತ್ತದೆ. ಚಿಕ್ಕ ಮೊತ್ತದಿಂದ ಉಳಿತಾಯ ಆರಂಭಿಸಬಹುದು. ನಿಯಮಿತ ಉಳಿತಾಯವು ತುರ್ತು ಸಂದರ್ಭಗಳು ಹಾಗೂ ಭವಿಷ್ಯದ ಯೋಜನೆಗಳಿಗೆ ಆರ್ಥಿಕ ಭದ್ರತೆಗೆ ಬುನಾದಿ ಹಾಕಲು ತುಂಬಾ ಸಹಾಯ ಮಾಡುತ್ತದೆ. ವಿವಾಹದ ಬಳಿಕ ವೈಯಕ್ತಿಕ ಸಾಲ, ಗೃಹ ಸಾಲ, ಕ್ರೆಡಿಟ್ ಕಾರ್ಡ್ ಬಾಕಿಗಳು ಮತ್ತು ಇತರ ಆರ್ಥಿಕ ಹೊಣೆಗಾರಿಕೆಗಳ ಕುರಿತು ಮುಕ್ತವಾಗಿ ಹಾಗೂ ಪ್ರಾಮಾಣಿಕವಾಗಿ ಚರ್ಚಿಸುವುದು ಆರೋಗ್ಯಕರ ಸಂಬಂಧಕ್ಕೆ ತುಂಬಾ ಅವಶ್ಯವಾಗಿದೆ. ಸಾಲದ ಮೊತ್ತ, ಮಾಸಿಕ ಕಂತುಗಳ ಕುರಿತು ತಿಳಿದುಕೊಳ್ಳುವುದು ನಿಖರವಾದ ಬಜೆಟ್ ಅನ್ನು ರೂಪಿಸಲು ತುಂಬಾ ಸಹಾಯ ಮಾಡುತ್ತದೆ. ಅನಿರೀಕ್ಷಿತ ಆರ್ಥಿಕ ಒತ್ತಡಗಳನ್ನು ನಿಭಾಯಿಸುವುದನ್ನು ಸುಲಭಗೊಳಿಸುತ್ತದೆ ಎಂದು ತಜ್ಞರು ತಿಳಿಸುತ್ತಾರೆ. ದಂಪತಿಗಳು ವಿಭಿನ್ನ ಆರ್ಥಿಕ ಗುರಿಗಳನ್ನು ಹೊಂದಿರುತ್ತಾರೆ. ಕೆಲವರು ಮನೆ ಖರೀದಿಸಲು ಬಯಸಬಹುದು ಹಾಗೂ ಇನ್ನು ಕೆಲವರು ಮಕ್ಕಳ ಶಿಕ್ಷಣಕ್ಕಾಗಿ ಹಣ ಉಳಿಸಲು ಮತ್ತು ವ್ಯವಹಾರವನ್ನು ಪ್ರಾರಂಭಿಸಲು, ನಿವೃತ್ತಿಗಾಗಿ ಹೂಡಿಕೆ ಮಾಡಲು ಬಯಸಬಹುದು. ದಂಪತಿಗಳು ತಮ್ಮ ಗುರಿಗಳನ್ನು ಪರಸ್ಪರ ಹಂಚಿಕೊಳ್ಳಬೇಕು, ಇವುಗಳನ್ನು ಸಾಧಿಸಲು ಕಾಲಮಿತಿ ನಿಗದಿಪಡಿಸಿಕೊಳ್ಳಬೇಕು.



ಲೇಖಕರು
ವಿಶ್ವಾಸ್ .ಡಿ.ಗೌಡ
ಲೇಖಕರು
ಸಾಮಾಜಿಕ ಚಿಂತಕರು

# ಪಿತೃಸ್ಮರಣೆ ಬದುಕಿನ ಸಂಸ್ಕಾರ

**ಪಿತೃಪಕ್ಷವೆಂದರೆ ಕೇವಲ ಒಂದು ಧಾರ್ಮಿಕ ಆಚರಣೆಯಲ್ಲ; ಅದು ನಮ್ಮ ಬೇರುಗಳನ್ನು ನೆನಪಿಸಿಕೊಳ್ಳುವ ಸಂಸ್ಕೃತಿ. ನಮ್ಮ ಪೂರ್ವಜರು ನಮಗೆ ಆಸ್ತಿ, ಮನೆ, ಜಮೀನು ಅಥವಾ ಹಣವನ್ನು ಮಾತ್ರ ನೀಡಿಲ್ಲ. ಅವರು ಬದುಕಿನ ಮೌಲ್ಯಗಳನ್ನು, ಸಂಸ್ಕಾರವನ್ನು, ಪ್ರಾಮಾಣಿಕತೆಯನ್ನು, ಪರಿಶ್ರಮವನ್ನು ಮತ್ತು ಸಂಬಂಧಗಳ ಮಹತ್ವವನ್ನು ಕಲಿಸಿದ್ದಾರೆ. ಮಹಾಲಯ ಅಮಾವಾಸ್ಯೆಯಂದು ಕುಟುಂಬದ ಅಗಲಿದ ಹಿರಿಯರನ್ನು ಭಕ್ತಿಯಿಂದ ಸ್ಮರಿಸಿ, ಅವರಿಗಾಗಿ ತರ್ಪಣ, ಶ್ರಾದ್ಧ, ಪಿಂಡಪ್ರದಾನ ಹಾಗೂ ದಾನಧರ್ಮಗಳನ್ನು ಮಾಡುವ ಸಂಪ್ರದಾಯವಿದೆ. ತಮ್ಮ ಪೂರ್ವಜರ ತಿಥಿ ತಿಳಿದಿಲ್ಲದವರು ಅಥವಾ ನಿರ್ದಿಷ್ಟ ತಿಥಿಯಲ್ಲಿ ಆಚರಣೆ ಮಾಡಲು ಸಾಧ್ಯವಾಗದವರು ಸರ್ವಪಿತೃ ಅಮಾವಾಸ್ಯೆಯಂದು ಅವರನ್ನು ಸ್ಮರಿಸುವುದು ಹಲವು ಸಂಪ್ರದಾಯಗಳಲ್ಲಿ ಕಂಡುಬರುತ್ತದೆ.**

ನಮ್ಮ ಬದುಕು ಕೇವಲ ನಮ್ಮ ಪರಿಶ್ರಮದ ಫಲವಲ್ಲ. ನಮ್ಮ ಹಿಂದೆ ನಿಂತು ಬದುಕಿಗೆ ದಾರಿ ತೋರಿಸಿದ ತಂದೆ-ತಾಯಿ, ಅಜ್ಜ-ಅಜ್ಜಿ ಹಾಗೂ ಅನೇಕ ತಲೆಮಾರುಗಳ ಹಿರಿಯರ ತ್ಯಾಗ, ಪರಿಶ್ರಮ ಮತ್ತು ಆಶೀರ್ವಾದಗಳ ಫಲವೂ ಹೌದು. ಅವರನ್ನು ಕೃತಜ್ಞತೆಯಿಂದ ಸ್ಮರಿಸುವ ಪವಿತ್ರ ಸಂದರ್ಭವೇ ಪಿತೃಪಕ್ಷ. ಈ ಅವಧಿಯ ಕೊನೆಯ ದಿನವಾದ ಸರ್ವಪಿತೃ ಅಮಾವಾಸ್ಯೆ ಅಥವಾ ಮಹಾಲಯ ಅಮಾವಾಸ್ಯೆ ಅಕ್ಟೋಬರ್ 10, 2026ರಂದು ಆಚರಿಸಲಾಗುತ್ತದೆ. ಆದರೆ ಪಿತೃಗಳಿಗೆ ನಾವು ಸಲ್ಲಿಸಬೇಕಾದ ನಿಜವಾದ ಗೌರವ ಕೇವಲ ಆಚರಣೆಗೆ ಸೀಮಿತವಾಗಬಾರದು. ಅವರು ಬದುಕಿದ್ದಾಗ ಅವರನ್ನು ಗೌರವಿಸುವುದು, ಅವರ ಮಾತು ಕೇಳುವುದು, ಅವರ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು ಮತ್ತು ಅವರೊಂದಿಗೆ ಪ್ರೀತಿಯಿಂದ ಸಮಯ ಕಳೆಯುವುದು ಅತ್ಯಂತ ದೊಡ್ಡ ಪಿತೃಸೇವೆ. ಇಂದು ನಮ್ಮಲ್ಲಿ ಅನೇಕರು ಹಿರಿಯರು ಬದುಕಿದ್ದಾಗ ಅವರಿಗಾಗಿ ಸಮಯವಿಲ್ಲ ಎಂದು ಹೇಳುತ್ತೇವೆ. ಆದರೆ ಅವರು ಅಗಲಿದ ನಂತರ ಅವರ ನೆನಪಿಗಾಗಿ ದೊಡ್ಡ ಕಾರ್ಯಕ್ರಮಗಳನ್ನು ಮಾಡುತ್ತೇವೆ. ಇದು ನಮ್ಮ ಜೀವನದಲ್ಲಿ ಯೋಚಿಸಬೇಕಾದ ಸಂಗತಿ. ಹಿರಿಯರ ಫೋಟೋಗೆ ಹಾರ ಹಾಕುವುದಕ್ಕಿಂತ, ಅವರು ಬದುಕಿದ್ದಾಗ ಅವರ ಕೈ ಹಿಡಿದು ಮಾತನಾಡಿದ ಒಂದು ಕ್ಷಣ ಹೆಚ್ಚು ಅಮೂಲ್ಯ. ಪಿತೃಸ್ಮರಣೆಯ ಮತ್ತೊಂದು ಮಹತ್ವದ ಅಂಶ ದಾನ ಮತ್ತು ಮಾನವೀಯತೆ. ನಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಹಸಿದವರಿಗೆ ಅನ್ನ ನೀಡುವುದು, ಬಡವರಿಗೆ ನೆರವಾಗುವುದು, ವೃದ್ಧರಿಗೆ ಸಹಾಯ ಮಾಡುವುದು, ನಿರ್ಗತಿಕರಿಗೆ ಅಗತ್ಯ ವಸ್ತುಗಳನ್ನು ನೀಡುವುದು ಮುಂತಾದ ಕಾರ್ಯಗಳನ್ನು ಮಾಡಬಹುದು. ಇಂತಹ ಮಾನವೀಯ ಕಾರ್ಯಗಳು ನಮ್ಮ ಪೂರ್ವಜರ ಹೆಸರನ್ನು ಸಾರ್ಥಕಗೊಳಿಸುತ್ತವೆ. ಈ ದಿನ ಮಕ್ಕಳಿಗೂ ನಮ್ಮ ಕುಟುಂಬದ ಹಿರಿಯರ ಪರಿಚಯ ಮಾಡಿಸಬೇಕು. ಅಜ್ಜ-ಅಜ್ಜಿ ಹೇಗೆ ಬದುಕಿದರು, ಕುಟುಂಬಕ್ಕಾಗಿ ಏನು ತ್ಯಾಗ ಮಾಡಿದರು, ಯಾವ ಮೌಲ್ಯಗಳನ್ನು ಪಾಲಿಸಿದರು ಎಂಬುದನ್ನು ಮಕ್ಕಳಿಗೆ ತಿಳಿಸಬೇಕು. ತಮ್ಮ ಕುಟುಂಬದ ಇತಿಹಾಸ ತಿಳಿದ ಮಕ್ಕಳು ತಮ್ಮ ಬೇರುಗಳ ಮಹತ್ವವನ್ನು ಅರಿಯುತ್ತಾರೆ. ಮಹಾಲಯ ಅಮಾವಾಸ್ಯೆ ನಮಗೆ ಒಂದು ಸುಂದರ ಸಂದೇಶ ನೀಡುತ್ತದೆ ಮನುಷ್ಯ ಎಷ್ಟೇ ಎತ್ತರಕ್ಕೆ ಬೆಳೆದರೂ ತನ್ನ ಬೇರುಗಳನ್ನು ಮರೆಯಬಾರದು. ಮರದ ಬಲ ಅದರ ಬೇರುಗಳಲ್ಲಿ ಇರುವಂತೆ, ಕುಟುಂಬದ ಬಲವೂ ಹಿರಿಯರ ಆಶೀರ್ವಾದ ಮತ್ತು ಸಂಸ್ಕಾರದಲ್ಲಿದೆ.

ಆದ್ದರಿಂದ ಈ ಮಹಾಲಯ ಅಮಾವಾಸ್ಯೆಯಂದು ನಮ್ಮ ಪೂರ್ವಜರನ್ನು ಭಕ್ತಿಯಿಂದ ಸ್ಮರಿಸೋಣ. ಅವರ ಆತ್ಮಕ್ಕೆ ಶಾಂತಿ ಕೋರಿ, ಅವರು ನಮಗೆ ನೀಡಿದ ಒಳ್ಳೆಯ ಮೌಲ್ಯಗಳನ್ನು ಮುಂದಿನ ಪೀಳಿಗೆಗೆ ತಲುಪಿಸುವ ಸಂಕಲ್ಪ ಮಾಡೋಣ. ಪೂರ್ವಜರ ನೆನಪು ಮನದಲ್ಲಿರಲಿ, ಹಿರಿಯರ ಆಶೀರ್ವಾದ ಸದಾ ನಮ್ಮೊಂದಿಗಿರಲಿ, ಮಾನವೀಯತೆ ನಮ್ಮ ಬದುಕಿನ ದಾರಿಯಾಗಲಿ. ಸರ್ವಪಿತೃಗಳಿಗೆ ಶ್ರದ್ಧಾಪೂರ್ವಕ ನಮನಗಳು. ಮಹಾಲಯ ಅಮಾವಾಸ್ಯೆಯ ಹಾರ್ದಿಕ ಶುಭಾಶಯಗಳು.



ಕಲಾ ಸಾಹಿತ್ಯ
ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ
ವಿಮರ್ಶಕರು

**ಈ ರಾಷ್ಟ್ರದಲ್ಲಿ ಋಷಿಮುನಿಗಳು, ಸಾಧುಸಂತರು,ಸನ್ಯಾಸಿಗಳು, ಮಠಾಧಿಪತಿಗಳು,ಧರ್ಮ ಗುರುಗಳು,ಧಾರ್ಮಿಕ ಮುಖಂಡರು,ವಿದ್ವಾಂಸರು, ದಾರ್ಶನಿಕರು,ಪಂಡಿತರು, ಮೇಧಾವಿಗಳು,ಆದರ್ಶ ಗುಣವುಳ್ಳವರು ಇನ್ನೂ ಇತರೆ ಸಮಕಾಲೀನ ಸಂಬಂಧಪಟ್ಟವರು ಈ ರಾಷ್ಟ್ರವನ್ನ ಕಟ್ಟಿ ಉಳಿಸಿ ಬೆಳೆಸಿ ಮಾರ್ಗದರ್ಶನ ಹಾಗೂ ದಾರಿಮಾರ್ಗ ತೋರಿಸಿರುವ ಸಾವಿರಾರು ಉದಾಹರಣೆಗಳು ನಮ್ಮ ಕಣ್ಮುಂದಿವೆ. ಹಾಗೂ ಖ್ಯಾತ ವಾಣಿಜ್ಯ, ಕೈಗಾರಿಕ,ತಾಂತ್ರಿಕ ಹಾಗೂ ಇತರೆ ಉದ್ಯಮಿಗಳು,ಖ್ಯಾತ ವೈದ್ಯರು,ಖ್ಯಾತ ವಿಜ್ಞಾನಿಗಳು, ತಾಂತ್ರಿಕ ತಜ್ಞರು,ಖ್ಯಾತ ನ್ಯಾಯವಾದಿಗಳು, ಉನ್ನತ ಆಡಳಿತ ಅಧಿಕಾರಿಗಳು, ಪ್ರಾಮಾಣಿಕ ರಾಜಕಾರಣಿಗಳು, ಹಾಗೂ ಪ್ರಾಮಾಣಿಕ ಹೋರಾಟಗಾರರು ಇರುವರನ್ನ ಜಗತ್ತು ಹಾಗೂ ಈ ದೇಶ ಕಂಡಿದೆ. ನಮ್ಮ ರಾಷ್ಟ್ರ ಮಾನವೀಯತೆ ಹಾಗೂ ಪ್ರಾಮಾಣಿಕತೆಗೆ ಹೆಸರುವಾಸಿಯಾಗಿದೆ. ಆದರೆ ಅದನ್ನ ಉಳಿಸಿ ಬೆಳೆಸಲು ವಿಫಲರಾಗಿದ್ದೇವೆ ಎಂತಹ ದುರಾದೃಷ್ಟಕರ ಹಾಗೂ ವಿಪರ್ಯಾಸ. ಈ ಹಿಂದೆ ನಮ್ಮಲ್ಲಿ ದುಷ್ಟರಿಗಿಂತ ಶಿಷ್ಟರು ಜಾಸ್ತಿ ಸಂಖ್ಯೆಯಲ್ಲಿದ್ದರು ಆದರೆ ಈಗ ಶಿಷ್ಟರಿಗಿಂತ ದುಷ್ಟರು ಜಾಸ್ತಿ ಸಂಖ್ಯೆಯಲ್ಲಿದ್ದಾರೆ ಹಾಗೂ ದುಷ್ಟರ ಜೊತೆಯಲ್ಲಿ ಕೆಲವು ಶಿಷ್ಟರು ರಾಜಿಯಾಗಿ ಸಮಾಜ ಕಲುಷಿತ ವಾತಾವರಣವಾಗಿದೆ ಆದರೂ ಸಾಧ್ಯವಾದ ಮಟ್ಟಿಗೆ ಸಮತೋಲನ ಕಾಪಾಡಿಕೊಂಡು ಹೋಗಬೇಕಾಗಿದೆ.**

# ಅಗತ್ಯಕ್ಕಿಂತ ಮೀರಿ ಬರುವ ವೇತನ ಅಥವಾ ನಿವೃತ್ತಿ ವೇತನವನ್ನು ಪ್ರಾಮಾಣಿಕವಾಗಿ ಸರ್ಕಾರಕ್ಕೆ ಹಿಂತಿರುಗಿಸಿ ಮಾದರಿಯಾಗಿ

ಭಾರತ ನಾನಾ ಕ್ಷೇತ್ರಗಳಲ್ಲಿ ಸಾಧನೆ ಮಾಡಿ ಸಾಧಿಸಿರುವ ಹಾಗೂ ಆದರ್ಶರಾಗಿ ಬಾಳಿ ಬದುಕಿರುವ ಅನೇಕ ಉದಾಹರಣೆಗಳು ವಿಶ್ವದ ಭೂಪಟದಲ್ಲಿ ಸೇರಿ ಇತಿಹಾಸ ಪುಟವನ್ನ ಸೇರಿಕೊಂಡಿವೆ.

ಗೊತ್ತಿರುವ ಕೆಲವು ಮಹಾನುಭಾವರ ಪೈಕಿ ಕೆಲವರ ಬಗ್ಗೆ ತಿಳಿಯುವುದಾದರೆ ಡಾ: ರಾಜೇಂದ್ರ ಪ್ರಸಾದ್, ಪಂಡಿತ್ ನೆಹರು, ಪಟೇಲ್, ಅಂಬೇಡ್ಕರ್, ರಾಜಾಜಿ, ಅಬ್ದುಲ್ ಕಲಾಂ, ಡಾ: ರಾಧಾಕೃಷ್ಣನ್, ಲಾಲ್ ಬಹದ್ದೂರ್ ಶಾಸ್ತ್ರಿ, ವಾಜಪೇಯಿ, ಕಡಿದಾಳ್ ಮಂಜಪ್ಪ, ಡಾ:ಎಚ್.ನರಸಿಂಹಯ್ಯ, ಟಿ.ಎನ್. ಶೇಷನ್ ಇನ್ನೂ ಇತರೆ ಸಾವಿರಾರು ಹೃದಯವಂತ ರಾಜಕೀಯ ಮುಖಂಡರುಗಳು ಹಾಗೂ ಸಾರ್ವಜನಿಕ ಆಡಳಿತ ಅಧಿಕಾರಿಗಳು ಅಗತ್ಯಕ್ಕಿಂತ ಮೀರಿ ಬರುವ ಹೆಚ್ಚುವರಿ ವೇತನ ಅಥವಾ ನಿವೃತ್ತಿ ವೇತನವನ್ನು ಸರ್ಕಾರಕ್ಕೆ ಹಿಂತಿರುಗಿಸಿ ಸಮಾಜಕ್ಕೆ ಉತ್ತಮ ಸಂದೇಶವನ್ನು ನೀಡಿರುವ ಸಾವಿರಾರು ಉದಾಹರಣೆಗಳಿವೆ.ಯಾವುದೇ ಪಕ್ಷದ ಸರ್ಕಾರ ಎಲ್ಲವನ್ನೂ ಕೂಡ ನಿಭಾಯಿಸಲು ಸಾಧ್ಯವಾಗುವುದಿಲ್ಲ ಅದರಲ್ಲಿ ನಮ್ಮದೂ ಕೂಡ ಒಂದು ಪಾತ್ರ ಇದೆ ಎಂಬುದನ್ನು ಸಮಾಜದಲ್ಲಿ ಬದುಕನ್ನು ಕಟ್ಟಿಕೊಂಡು ಬದುಕುತ್ತಿರುವ ನಾವುಗಳು ಎಂದಿಗೂ ಮರೆಯಬಾರದು. ಸ್ವಾರ್ಥ ತುಂಬಿರುವ ಈ ಕಲಿಯುಗದ ಕಾಲಘಟ್ಟದಲ್ಲಿ ಕೆಲವರಿಗೆ ಎಷ್ಟೇ ಸವಲತ್ತುಗಳು ಕುಟುಂಬದಿಂದ, ಸಮಾಜದಿಂದ, ಸರ್ಕಾರದಿಂದ ಲಭಿಸಿದ್ದರೂ ಸಹ ನಿಸ್ವಾರ್ಥ ಸೇವೆ ಹಾಗೂ ನೊಂದವರ ಬಾಳಿಗೆ ಹಾಗೂ ಸರ್ಕಾರದ ಪರಿಹಾರ ನಿಧಿಗೆ ನೀಡಲು ಮೀನಾ ಮೇಷ ಎಣಿಸುತ್ತಿದ್ದೇವೆ. ಎಷ್ಟೋ ಕುಟುಂಬಗಳಲ್ಲಿ ವೇತನ ಹಾಗೂ ನಿವೃತ್ತಿ ವೇತನ, ಮನೆಯ ಬಾಡಿಗೆ, ಕಾಂಪ್ಲೇಕ್ಸ್‌ಗಳ ಬಾಡಿಗೆ, ಕೃಷಿ ಬಂಡವಾಳ ಮಿಗಿಲಾಗಿ ಮಕ್ಕಳ ಆದಾಯ ಇದ್ದರೂ ಸಹ ಸರ್ಕಾರಕ್ಕೆ ಸರಿಯಾದ ತೆರಿಗೆ ಮೂಲಕ ಲೆಕ್ಕ ಕೊಡಲು ಹಾಗೂ ನೊಂದವರ ಬಾಳಿಗೆ ಬೆಳಕಾಗಲು ಅಥವಾ ಸರ್ಕಾರಕ್ಕೆ ಹಿಂತಿರುಗಿಸಲು ಅಥವಾ ಪರಿಹಾರ ನಿಧಿಗೆ ಕೊಡಲು ಮನಸ್ಸಿಲ್ಲದೇ ಹಾಗೆಯೇ ಬಿಟ್ಟು ಹೋಗುತ್ತಾರೆ.

ಇತ್ತೀಚೆಗೆ ವಾರಸ್ದಾರರು ಇಲ್ಲದೇ ವಿವಿಧ ಬ್ಯಾಂಕಿನಲ್ಲಿರುವ 66,000 ಕೋಟಿ ಹಣವನ್ನ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಮುಟ್ಟುಗೋಲು ಹಾಕಿ ಕೊಂಡಿರುವುದನ್ನು ಮೆಲುಕು ಹಾಕಬೇಕಾಗಿದೆ. ಬಿಟ್ಟು ಹೋಗುವ ಬದಲು ಕೊಟ್ಟು ಹೋಗಿದ್ದರೆ ಅಂಥವರ ಹಣ ಅನಾಥವಾಗುತ್ತಿರಲಿಲ್ಲ ಅಂಥವರು ಇತಿಹಾಸ ಪುಟವನ್ನ ಸೇರುತ್ತಿದ್ದರು. ಜೀವಂತವಾಗಿರುವ ಹಿರಿಯ ಜೀವಗಳು ಹೆಚ್ಚುವರಿ ಬರುವ ನಿವೃತ್ತಿ ವೇತನ ಅಥವಾ ವಿವಿಧ ಬಲ್ಲ ಮೂಲಗಳಿಂದ ಬರುವ ಆದಾಯದಲ್ಲಿ ಮಾನವೀಯತೆಯ ದೃಷ್ಟಿಯಿಂದ ಸರ್ಕಾರಕ್ಕೆ ಹಿಂತಿರುಗಿಸುವ ಅಥವಾ ನೊಂದವರ ಬಾಳಿಗೆ ಬೆಳಕಾದರೆ ನಾವುಗಳು ಇಷ್ಟು ವರ್ಷ ಎಲ್ಲಾ ಸವಲತ್ತುಗಳೊಂದಿಗೆ ಅನುಭವಿಸಿ ಬದುಕಿದ್ದೂ ಸಾರ್ಥಕವಾದ ಬದುಕಾಗುತ್ತಿತ್ತು. ನಾವುಗಳು ಇಷ್ಟು ವರ್ಷ ಎಲ್ಲವನ್ನೂ ಸಮಾಜದಿಂದಲೇ ಪಡೆದಿರುತ್ತೇವೆ ಹಾಗೂ ಸಮಾಜದ ಋಣ ನಮ್ಮ ಮೇಲೆ ಇರುವುದನ್ನು ನಾವೆಂದಿಗೂ ಮರೆಯಬಾರದು ಮತ್ತೆ ಸಮಾಜಕ್ಕೆ ಹಿಂತಿರುಗಿಸಬೇಕು ಇದೇ ಮಾನವೀಯ ಧರ್ಮ. ದೇಶದಲ್ಲಿ ಸರಿಸುಮಾರು ಶೇಕಡಾ 40 ಭಾಗ ಇರುವ ಬಡ ಎಷ್ಟೋ ಕುಟುಂಬಗಳು ಒಪ್ಪತ್ತು ಊಟಕ್ಕೆ ಆಹಾಕಾರವಾಗಿ ಬಾಯಿ ಬಿಡುತ್ತಾ ಅನಾಥವಾಗಿವೆ ಮನೆ ಇಲ್ಲ ಆರೋಗ್ಯ ಇಲ್ಲ ಆಹಾರವಿಲ್ಲ ವಿದ್ಯಾಭ್ಯಾಸವಿಲ್ಲ ಉದ್ಯೋಗವಿಲ್ಲ ಇತ್ಯಾದಿ ಅಂಥವರು ಇಂಥವರ ಬಾಳಿಗೆ ಬೆಳಕಾದರೆ ಬಡವರ ಆಶೀರ್ವಾದವೇ ಶ್ರೀಮಂತರಿಗೆ ಶ್ರೀರಕ್ಷೆ. ಅನಾವಶ್ಯಕವಾಗಿ ಅಗತ್ಯ ಇಲ್ಲದ ವ್ಯವಸ್ಥೆಗೆ ಋತಾ ದುಂದು ವೆಚ್ಚ ಮಾಡಿ ಆಡಂಬರ,ಹೆಗ್ಗಳಿಕೆ, ತೋರ್ಪಡಿಸಿಕೊಳ್ಳುವಿಕೆ ಶ್ರೀಮಂತಿಕೆಯ ಪ್ರದರ್ಶನವನ್ನು ಮಾಡುವುದನ್ನು ಮೊದಲು ನಾವುಗಳು ಬಿಡಬೇಕು.

ಒಟ್ಟಾರೆ ಅಗತ್ಯಕ್ಕಿಂತ ಮೀರಿ ಯಾವುದೇ ಆದಾಯದಲ್ಲೇ ಆಗಲೀ ಅಥವಾ ವೇತನ ಅಥವಾ ನಿವೃತ್ತಿ ವೇತನ ಬರುವವರು ಪ್ರಾಮಾಣಿಕವಾಗಿ ಹಿಂತುರುಗಿಸಿ ರಾಷ್ಟ್ರವನ್ನು ರಕ್ಷಿಸಿ. ಪ್ರಾಮಾಣಿಕ, ಹೃದಯವಂತಿಕೆ ಹಾಗೂ ಮಾನವೀಯತೆಯ ಗುಣಗಳನ್ನ ಸಮಾಜಕ್ಕೆ ಹಂಚಿ. ಸತ್ಯ ಶುದ್ಧ ಕಾಯಕದಿಂದ ವಿಶ್ವಮಾನವರಾಗಿ.



ಕಲಾ ಸಾಹಿತ್ಯ
ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ
ವಿಮರ್ಶಕರು

# ಪಿತೃಪಕ್ಷ ಅಥವಾ ಮಹಾಲಯ ಅಮಾವಾಸ್ಯೆ ಹಬ್ಬದ ಆಚರಣೆಯ ವಿಶೇಷ ಹಾಗೂ ವೈಶಿಷ್ಟ್ಯ

ಸನಾತನ ಹಿಂದೂ ಧರ್ಮದ ಸಂಸ್ಕಾರವುಳ್ಳ ಸಂಸ್ಕೃತಿಯನ್ನು ಅನಾದಿಕಾಲದಿಂದಲೂ ಹಿರಿಯರು ಆಚರಿಸಿಕೊಂಡು ಬಂದಿರುವ ಈ ಪಿತೃಪಕ್ಷ ಅಥವಾ ಮಹಾಲಯ ಅಮಾವಾಸ್ಯೆ ಹಬ್ಬ. ಈ ಹಬ್ಬವನ್ನು ಸಾಮಾನ್ಯವಾಗಿ ಪ್ರತಿ ವರ್ಷಕ್ಕೊಮ್ಮೆ ಹಿಂದುಗಳೆಲ್ಲರೂ ಭಕ್ತಿ ಹಾಗೂ ಶ್ರದ್ಧಾಪೂರ್ವಕವಾಗಿ ಆಚರಿಸಿಕೊಂಡು ಬರುವ ಸಂಪ್ರದಾಯ ಹಬ್ಬ.

ಈ ಹಬ್ಬದ ವಿಶೇಷ ಹಾಗೂ ವೈಶಿಷ್ಟ್ಯ ಏನೆಂದರೆ ದೈವಾಧೀನರಾಗಿರುವ ಹಾಗೂ ನಮ್ಮಿಂದ ಮರೆಯಾಗಿರುವ ಹಿರಿಯರನ್ನ ಸ್ಮರಿಸಿ ನೆನೆಸಿಕೊಂಡು ಅವರುಗಳ ಹೆಸರಿನ ಮೇಲೆ ಎಡೆ ಇಟ್ಟು ದೂಪ ಹಾಕುವ ಹಬ್ಬ.ಹಿರಿಯರು ಜೀವನದ ಬದುಕಿನ ಉದ್ದಕ್ಕೂ ಸುಖವನ್ನೇ ಅನುಭವಿಸದೇ ಬರೀ ಕಷ್ಟವೇ ಅವರ ಪಾಲಿಗೆ ಶ್ರೀರಕ್ಷೆಯಾಗಿ ರಾತ್ರಿ ಹಗಲು ಕಷ್ಟಪಟ್ಟು ದುಡಿದು ಜೀವಿಸಿ ಬದುಕಿನ ಪಯಣವನ್ನು ಮುಗಿಸಿ ಹೋಗಿರುತ್ತಾರೆ. ಅವರುಗಳ ದೇಹ ಮರೆಯಾದರೂ ಅವರ ಆತ್ಮ ಇಲ್ಲಿಯೇ ಸುಳಿದಾಡುತ್ತಿದೆ ಹಾಗೂ ದೇಹಕ್ಕೆ ಸಾವಿದೆ ಆದರೆ ಆತ್ಮಕ್ಕೆ ಸಾವಿಲ್ಲ ಎಂಬ ಪ್ರತೀತಿ ನಂಬುವ ಮೂಡನಂಬಿಕೆಯಿಂದ ತಿಳಿಯುತ್ತದೆ. ಹಿರಿಯರು ಅನುಭವಿಸಿ ಅನುಭವದ ಬೆಳಕಿನ ಆದರ್ಶಗಳನ್ನ ಹಾಗೂ ಮಾರ್ಗದರ್ಶನಗಳನ್ನ ಕುಟುಂಬಕ್ಕೆ ಹಾಗೂ ಸಮಾಜಕ್ಕೆ ಧಾರೆಎರದಿರುತ್ತಾರೆ.

ಕೊಟ್ಟು ಹೋಗಿರುವ ಅಥವಾ ಬಿಟ್ಟು ಹೋಗಿರುವ ಅವರುಗಳು ಅನುಭವಿಸಿದ ಆಸ್ತಿಪಾಸ್ತಿಗಳನ್ನು ವಾರಸ್ದಾರರಾದ ರಕ್ತಸಂಬಂಧಿಕರು ಕಾಪಾಡಿಕೊಂಡು ಅನುಭವಿಸುತ್ತಾ ಹಾಗೂ ಅವರ ಆದರ್ಶಗಳನ್ನು ತಪ್ಪದೇ ಪಾಲಿಸಿಕೊಂಡು ಜೀವನದ ಬದುಕಿನಲ್ಲಿ ಅಳವಡಿಸಿಕೊಂಡಿದ್ದೇ ಆದರೆ ಅವರುಗಳ ಆತ್ಮಕ್ಕೆ ಶಾಂತಿ ಮತ್ತು ಸದ್ಗತಿ ದೊರಕುತ್ತದೆ. ಮಹಾಲಯ ಅಮಾವಾಸ್ಯೆ ಈ ಹಬ್ಬವನ್ನು ಆಚರಿಸುವ ಮೂಲಕವಾದರೂ ಚಿರಸ್ಮರಣೆಯರಾಗಿ ಮರೆಯಾಗಿರುವ ಹಿರಿಯರನ್ನ ಸ್ಮರಿಸಿ ನೆನೆಸಿಕೊಂಡು ವರ್ಷಕ್ಕೊಮ್ಮೆ ಬರುವ ಹಬ್ಬದಂದು ಶ್ರದ್ಧೆ , ಭಕ್ತಿಪೂರ್ವಕ ಹಾಗೂ ಬಹಳ ಅರ್ಥಪೂರ್ಣವಾಗಿ ಆಚರಿಸಿಕೊಂಡು ಬರುವ ಹಬ್ಬವೇ ಮಹಾಲಯ ಅಮಾವಾಸ್ಯೆ ಹಬ್ಬ ಇದುವೇ ಹಿಂದುಗಳ ಪವಿತ್ರ ಚಾರಿತ್ರ್ಯ ಉಳ್ಳ ಹಬ್ಬ. ಕೊನೆಯದಾಗಿ ನಾವುಗಳು ಎಲ್ಲವನ್ನೂ ಅಮೂಲಾಗ್ರವಾಗಿ ಅರ್ಥೈಸಿಕೊಂಡರೆ ಅಂತರಂಗ ಮತ್ತು ಬಹಿರಂಗ ಶುದ್ಧಿಯಿಂದ ಒಳ್ಳೆಯ ಮನುಷ್ಯರಾಗಿ ಎಲ್ಲಾ ವರ್ಗದವರನ್ನು ಪ್ರೀತಿಸಿ ಗೌರವದಿಂದ ಬಾಳಿ ಬದುಕುತ್ತಾ ಈ ಹಬ್ಬವನ್ನ ಆಚರಿಸಿದರೆ ಮಾತ್ರ ಅದಕ್ಕೆ ಒಂದು ಅರ್ಥ ಸಿಗುತ್ತದೆ. ಇದುವೇ ಈ ಹಬ್ಬದ ವಿಶೇಷ ಹಾಗೂ ವೈಶಿಷ್ಟ್ಯ. ಮುಂಜಾನೆಯ ಶುಭದಿನದ ಶುಭನುಡಿಗಳು

1. ಕೋಪದಲ್ಲಿ ನಾವು ಮಾಡಿದ ಯಾವುದೇ ಕೆಲಸವು ಕೊನೆಗೆ ನಾವೇ ಪಶ್ಚಾತ್ತಾಪ ಪಟ್ಟು ನಾಚಿಕೆ ಪಡುವ ಸ್ಥಿತಿಗೆ ನಮ್ಮನ್ನ ಕೊಂಡೊಯ್ಯುತ್ತದೆ.
2. ಮಾತಲ್ಲೇ ಮನೆ ಕಟ್ಟುವವರ ಬಳಿ ಕಿವುಡನಾಗಿರು,ಬೆಲೆ ಕೊಡದಿರುವವರ ಬಳಿ ಮೂಕನಾಗಿರು, ಮಮತೆ ಇಲ್ಲದವರ ಬಳಿ ಅನಾಥನಾಗಿರು, ಅಹಂ- ಅಹಂಕಾರ, ಸೊಕ್ಕಿನಿಂದಿರುವವರ ಬಳಿ ಒಂಟಿಯಾಗಿರು.
3. ಧನಾತ್ಮಕವಾಗಿ ಯೋಚಿಸುವವನನ್ನು ಯಾವ ವಿಷಯವೂ ಕೊಲ್ಲಲಾರದು ಹಾಗೆ ಋಣಾತ್ಮಕವಾಗಿ ಯೋಚಿಸುವವನ ರೋಗವನ್ನು ಯಾವ ಔಷಧಿಯೂ ಸಹ ಗುಣಪಡಿಸದು.
4. ಗುರಿ ಪರಿಶುದ್ಧವಾಗಿರಬೇಕು ಹಾಗೆಯೇ ಅದನ್ನು ಸಾಧಿಸುವ ದಾರಿಯೂ ಸಹ ಪರಿಶುದ್ಧವಾಗಿರಬೇಕು. ಶಿಸ್ತು,ಪರಿಶ್ರಮ, ಪ್ರಾಮಾಣಿಕತೆ ಇದ್ದರಷ್ಟೇ ಗುರಿ ಮುಟ್ಟಲು ಸಾಧ್ಯ.
5 . ನೀವು ಅಂದುಕೊಂಡಂತೆ ಜೀವನ ಸಾಗುತ್ತಿಲ್ಲವೆಂದಾದರೆ ನೀವು ವರ್ತಮಾನಕ್ಕಿಂತ ಭವಿಷ್ಯ ಹಾಗೂ ಭೂತಕಾಲದ ಬಗ್ಗೆ ಹೆಚ್ಚಿಗೆ ಯೋಚಿಸಿ, ಚಿಂತಿಸುತ್ತೀರಾ ಎಂದರ್ಥ! ಹೀಗಾಗಿ ಭೂತಕಾಲದಲ್ಲಿ ಕಳೆದು ಹೋದ ಸಂಗತಿ ಹಾಗೂ ಭವಿಷ್ಯದ ಬಗ್ಗೆ ಚಿಂತನೆ ಬಿಟ್ಟು ವರ್ತಮಾನದಲ್ಲಿ ಬದುಕಿರುವ ಈಗಿನ ಜೀವನದ ಬಗ್ಗೆ ಗಮನಹರಿಸಿ ಬದುಕನ್ನು ಸಾರ್ಥಕಗೊಳಿಸಿಕೊಳ್ಳಿ.

ಉದಯ ವಾಹಿನಿ

ಪ್ರಾದೇಶಿಕ

ಶನಿವಾರ
10 ಅಕ್ಟೋಬರ್ 2026



ಜಾಗೃತಿ ಮೂಡಿಸುವ ಜಾಥಾಗೆ ಸೋಮನಾಥಪ್ಪ ಅಷ್ಟೂರೆ ಅವರು ಗಾಂಧಿ ಭಾವಚಿತ್ರ ಕ್ಕೆ ಪುಷ್ಪಾರ್ಚನೆ ಮಾಡುವುದರ ಮೂಲಕ ಚಾಲನೆ ನೀಡದರು

# ಗ್ರಾಮಗಳ ಅಭಿವೃದ್ಧಿಯಾದರೆ ಮಾತ್ರ ದೇಶ ಅಭಿವೃದ್ಧಿ ಹೊಂದಲು ಸಾಧ್ಯ

**ಉದಯವಾಹಿನಿ, ಬೀದರ್**

ಜಿಲ್ಲೆಯ ಭಾಲ್ಕಿ ತಾಲ್ಲೂಕಿನಲ್ಲಿ ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಬೀದರ್ ಜಿಲ್ಲೆ , ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಿ,ಸಿ, ಟ್ರಸ್ಟ್(ರಿ) ಬೀದರ್ ಜಿಲ್ಲೆ ಪ್ರಗತಿ ಬಂದು ಸ್ವಸಹಾಯ ಸಂಘಗಳ ಒಕ್ಕೂಟ ಭಾಲ್ಕಿ ತಾಲ್ಲೂಕು ಇವರ ಸಹಯೋಗದಲ್ಲಿ ಗಾಂಧೀ ಸ್ಮೃತಿ ಜನಜಾಗೃತಿ ಜಾಥಾ ಮತ್ತು ವ್ಯಸನಮುಕ್ತರ ಸಮಾವೇಶ ಕಾರ್ಯಕ್ರಮ ಭಾಲ್ಕಿ ಪಟ್ಟಣದ ಕುಮಾರ ಗುಂಡಯ್ಯಾ ಸಭಾಭವನದಲ್ಲಿ ಉದ್ಘಾಟಿಸಿ ಮಾತನಾಡುತ್ತ ವಿರೂಪಾಕ್ಷ ಗಾದಗಿ ಅವರು ಗಾಂಧಿ ಕಂಡ ಗ್ರಾಮ ಸ್ವರಾಜ್ಯ ಹಾಗು ದುಶ್ಚಟ ಮುಕ್ತ ಸಮಾಜ ಇಂದಿನ ಅವಶ್ಯಕತೆ, ಗ್ರಾಮಗಳ ಸಮಗ್ರ ಅಭಿವೃದ್ಧಿಯಿಂದ ಮಾತ್ರ ದೇಶ ಅಭಿವೃದ್ಧಿ ಸಾದ್ಯ ಎಂದು ನುಡಿದರು

**1.ಗಾಂಧೀ ಸ್ಮೃತಿ ಜನಜಾಗೃತಿ ಜಾಥಾ**
**2.ವ್ಯಸನಮುಕ್ತರ ಸಮಾವೇಶ ಕಾರ್ಯಕ್ರಮ**
**3.ಅನೇಕ ಸಮಾಜಮುಖಿ ಕಾರ್ಯ ಮಾಡುತ್ತಾ ಬಂದಿದೆ**

ಈ ಕಾರ್ಯಕ್ರಮದಲ್ಲಿ ಧರ್ಮಸ್ಥಳ ಮಂಜುನಾಥೇಶ್ವರ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಪ್ರಾದೇಶಿಕ ನಿರ್ದೇಶಕರಾದ ದಿನೇಶ ಪೂಜಾರಿ ಪ್ರಾಸ್ತಾವಿಕ ಮಾತನಾಡುತ್ತಾ ಸಂಸ್ಥೆಯು ವೀರೇಂದ್ರ ಹೆಗ್ಗಡೆಯವರ ಮಾರ್ಗದರ್ಶನದಲ್ಲಿ ಅನೇಕ ಸಮಾಜಮುಖಿ ಕಾರ್ಯಗಳನ್ನು ಮಾಡುತ್ತಾ ಬರುತ್ತಿದೆ, ಮಹಿಳೆಯರು ಸ್ವಾವಲಂಬಿ ಜೀವನ ನಡೆಸುವುದು, ಹಾಗೂ ವ್ಯಸನ ಮುಕ್ತ ಸಮಾಜ ನಿರ್ಮಾಣಕ್ಕಾಗಿ ಅನೇಕ ಶಿಬಿರಗಳನ್ನು, ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ, ಶ್ರೀ ಕ್ಷೇತ್ರ ಶ್ರೀ ಕ್ಷೇತ್ರ ಧರ್ಮಸ್ಥಳದ ಕಾರ್ಯಕ್ರಮಗಳು ಸೌಲಭ್ಯಗಳ ಯೋಜನೆಯ ಧಾರ್ಮಿಕ ಕಾರ್ಯಕ್ರಮಗಳ ಕುರಿತು ಹಾಗೂ ಮದ್ಯವರ್ಧನ್ ಶಿಬಿರದಿಂದ ಸಮಾಜದಲ್ಲಿ ವ್ಯಸನ ಮುಕ್ತ ದಿಂದ ಉತ್ತಮ ಬದುಕನ್ನು ಕಟ್ಟಿಕೊಂಡು ಸಮಾಜಕ್ಕೆ ಮಾದರಿಯಾಗಿವೆ,ಹಾಗೂ ಸ್ವ ಸಹಾಯ ಸಂಘಗಳ ಕುರಿತು ಬಗ್ಗೆ ಮಾಶಾಸನದ ಬಗ್ಗೆ ದೇವಾಲಯಗಳು ಜೀವನೋದ್ಧಾರಗಳ ಬಗ್ಗೆ ಹಾಗೂ ಯೋಜನೆಯ ಕಾರ್ಯಕ್ರಮಗಳ ಕುರಿತು ಮಾತನಾಡಿದರು..

ಕಾರ್ಯಕ್ರಮ ಪೂರ್ವದಲ್ಲಿ ಜಾಗೃತಿ ಮೂಡಿಸುವ ಜಾಥಾಗೆ ಸೋಮನಾಥಪ್ಪ ಅಷ್ಟೂರೆ ಅವರು ಗಾಂಧಿ ಭಾವಚಿತ್ರ ಕ್ಕೆ ಪುಷ್ಪಾರ್ಚನೆ ಮಾಡುವುದರ ಮೂಲಕ ಚಾಲನೆ ನೀಡದರು.ಜಾಥಾದಲ್ಲಿ ನೂರಾರು ಮಹಿಳೆಯರು ಪೂರ್ಣ ಕುಂಭ ಮೇಳವನ್ನು ನಡೆಸಿದರು, ಇದರ ಜೊತೆಗೆ ಮದ್ಯಪಾನ, ದುಶ್ಚಟ ಬಿಡುವ ಘೋಷ ವಾಕ್ಯಗಳ ಭಿತ್ತಿ ಪತ್ರಗಳ ಪ್ರದರ್ಶನ ನಡೆಯಿತು ಈ ಕಾರ್ಯಕ್ರಮದಲ್ಲಿ ಗೌರವಾನ್ವಿತ ಮಾನ್ಯ ಜಿಲ್ಲಾ ನಿರ್ದೇಶಕರು ಮುರಳಿಧರ್ H,L ಅವರು ಕಾರ್ಯಕ್ರಮದ ಕುರಿತು ವೇದಿಕೆಯ ಗಣ್ಯರಿಗೆ ಸ್ವಾಗತಿಸಿ ಕಾರ್ಯಕ್ರಮದ ಕುರಿತು ಮಾತನಾಡಿದರು.

ಗಣ್ಯರಾದ ಈ ಕಾರ್ಯಕ್ರಮದಲ್ಲಿ ಮಾಜಿ ಪುರಸಭೆಯ ಅಧ್ಯಕ್ಷರು ಶ್ರೀ ಬಸವರಾಜ್ ವಂಕಿ ಹಾಗೂ ಶ್ರೀ ಸೋಮನಾಥ ಅಷ್ಟೂರೆ ಹಿರಿಯರು,ಹಾಗೂ ಪತ್ರಕರ್ತರು ಬೀದರ್ ಜಿಲ್ಲೆಯ ಎಲ್ಲಾ ತಾಲ್ಲೂಕಿನ ಯೋಜನಾಧಿಕಾರಿಗಳು ಹಾಗೂ ಜಿಲ್ಲೆಯ ಎಲ್ಲಾ ಮೇಲ್ವಿಚಾರಕ ಶ್ರೇಣಿಯ ಸಿಬ್ಬಂದಿಗಳು ಹಾಗೂ ಸ್ವ ಸಹಾಯ ಸಂಘದ ಸದಸ್ಯರು ಹಾಗೂ ಸೇವಾ ಪ್ರತಿನಿಧಿಗಳು ಹಾಗೂ ಜಿಲ್ಲೆಯ ಎಲ್ಲಾ ತಾಲ್ಲೂಕಿನ ವ್ಯಸನ ಮುಕ್ತ ಫಲಾನುಭವಿಗಳು. ಭಾಗವಹಿಸಿದರು ಈ ಕಾರ್ಯಕ್ರಮದಲ್ಲಿ ವ್ಯಸನ ಮುಕ್ತ ನವಜೀವನ ಸದಸ್ಯರ ಅನಿಸಿಕೆಯನ್ನು ಪಡೆಯುವದರ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲಾಗಿದೆ



ಉದಯವಾಹಿನಿ ಚಿತ್ರ

> ಶ್ರೀ ಹನುಮಂತ ಚೌಹಾಣ್ ಕರ್ನಾಟಕ ರಾಜ್ಯ ಅರಣ್ಯ ಅಭಿವೃದ್ಧಿ ನಿಗಮ ಉಪಾಧ್ಯಕ್ಷರು, ಅವರು ಧರ್ಮಸ್ಥಳ ಸಂಸ್ಥೆ ಸಮಾಜಕ್ಕೆ ಬಡ ಕುಟುಂಬಗಳಿಗೆ ದಾರಿ ದೀಪವಾಗಿದ್ದಾರೆ. ಸಾಮಾಜ ಮುಖಿ ಕಾರ್ಯಕ್ರಮಗಳ ಮೂಲಕ ಉತ್ತಮ ಸೇವೆಯನ್ನು ಮಾಡುತ್ತಿದ್ದಾರೆ.
>
> – ಹನುಮಂತ ಚೌಹಾಣ್

## ದೇಗಲಮಡಿ ತಾಪಂ ಕ್ಷೇತ್ರದ ಚುನಾವಣೆಗೆ ಮಹ್ಮದ್ ಮಸ್ತಾನ ಪಟೇಲ್ ಪ್ರಬಲ ಆಕಾಂಕ್ಷಿ

**ಉದಯವಾಹಿನಿ, ಚಿಂಚೋಳಿ**

ತಾಲ್ಲೂಕಿನ ದೇಗಲಮಡಿ ತಾಲ್ಲೂಕಾ ಪಂಚಾಯತ್ ಮತಕ್ಷೇತ್ರದ ಚುನಾವಣೆಗೆ ಪ್ರಬಲ ಆಕಾಂಕ್ಷಿಯಾಗಿದ್ದೇನೆ ಎಂದು ಕಾಂಗ್ರೆಸ್ ಮುಖಂಡ ಮಹ್ಮದ್ ಮಸ್ತಾನ ಪಟೇಲ್ ಕೋಡ್ಲಿ ತಿಳಿಸಿದ್ದಾರೆ. ಪತ್ರಿಕಾ ಪ್ರಕಟಣೆ ಹೊರಡಿಸಿದ ಅವರು,ಎಡ್ಮೂರು ದಶಕಗಳಿಂದ ಕಾಂಗ್ರೆಸ್ ಪಕ್ಷದಿಂದ ನಿಷ್ಠಾವಂತ ಕಾರ್ಯಕರ್ತನಾಗಿ ಪಕ್ಷ ನೀಡಿದ ಅನೇಕ ಜವಾಬ್ದಾರಿಗಳು ಪಕ್ಷನಿಷ್ಠೆಯಿಂದ ಕೆಲಸ ಮಾಡಿದ್ದೇನೆ. ಈಗ ದೇಗಲಮಡಿ



ತಾಪಂ.ಕ್ಷೇತ್ರಕ್ಕೆ ಮಹಿಳಾ ಸ್ಥಾನ ಮೀಸಲಾತಿ ಬರಲಿ ಅಥವಾ ಸಾಮಾನ್ಯ ಪುರಷ ಬರಲಿ ನಾನು ಮತ್ತು ನಮ್ಮ ಮನೆಯ ಯಜಮಾನಿ ಸಿದ್ದರಿದ್ದೇವೆ ಹಾಗಾಗಿ ಕಾಂಗ್ರೆಸ್ ಪಕ್ಷದ ಹೈಕಮಾಂಡ್ ನನ್ನ ಪಕ್ಷನಿಷ್ಠೆಗೆ ತಾಲ್ಲೂಕು ಪಂಚಾಯತ್ ಚುನಾವಣೆಗೆ ಟಿಕೆಟ್ ನೀಡಬೇಕು,ಈಗಾಗಲೇ ಕಳೆದ 10–15ವರ್ಷಗಳಿಂದ ಜನರ ಸಂಪರ್ಕದಲ್ಲಿದ್ದು ಜನರ ಪ್ರತಿಯೊಂದು ಕೆಲಸಗಳು ಸಮಸ್ಯೆಗಳಿಗೆ ಪರಿಹಾರ ನೀಡುವ ನಿಟ್ಟಿನಲ್ಲಿ ಕೆಲಸ ಮಾಡುತ್ತಾ ಬಂದಿದ್ದೇನೆ. ಬ್ಯಾಂಕ್ ಕೆಲಸವಾಗಲಿ, ವಿಧವೆ ವೇತನ,ಸಂಧ್ಯಾ ಸುರಕ್ಷಾ, ವಿಕಲಚೇತನ,ಸೇರಿದಂತೆ ತಾಪಂ.ಜಿಪಂ.ಕಛೇರಿಗಳ ಕೆಲಸಗಳು ಯಾವುದೇ ಇದ್ದರೂ ಕೂಡ ಜನರಿಗೆ ಉಚಿತವಾಗಿ ಸೇವೆ ನೀಡಿದ್ದೇನೆ ಬಡವರ ಯಾವುದೇ ಕುಂದುಕೊರತೆಗಳು ಸಮಸ್ಯೆ ಕೆಲಸಗಳು ಇದ್ದರೆ ಹಗಲಿರುಳು ಎನ್ನದೆ ಸದಾ ಜನರ ಕೆಲಸ ಮಾಡಿದ್ದೇನೆ ದೇಗಲಮಡಿ ತಾಪಂ. ಚುನಾವಣಾ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳು ಎಲ್ಲಾ ಸಮೂದಾಯಗಳ ಅಭಿವೃದ್ಧಿಗೆ ಕೆಲಸ ಮಾಡಿದ್ದೇನೆ ಹಾಗಾಗಿ ಎಲ್ಲಾ ಸಮೂದಾಯಗಳ ಮತದಾರರು ನನ್ನ ಮೇಲೆ ವಿಶ್ವಾಸವಿಟ್ಟು ಮತ ಚಲಾವಣೆ ಮಾಡುತ್ತಾರೆ ಎಂಬ ನಂಬಿಕೆವಿದ್ದು ಕಾಂಗ್ರೆಸ್ ಹೈಕಮಾಂಡ್ ಕೂಡ ಬೆನ್ನಿಗೆವಿದ್ದರೆ ನನ್ನ ಗೆಲುವು ಖಚಿತವೆಂದು ಮಹ್ಮದ್ ಮಸ್ತಾನ ಪಟೇಲ ತಿಳಿಸಿದ್ದಾರೆ.

## ಪೋಲಕಪಳ್ಳಿ ತಾಪಂ ಚುನಾವಣೆ ಸ್ಪರ್ಧೆಗೆ ನಾರಾಯಣ ಪ್ರಬಲ ಆಕಾಂಕ್ಷಿ

**ಉದಯವಾಹಿನಿ, ಚಿಂಚೋಳಿ**

ತಾಲ್ಲೂಕಿನ ಪೋಲಕಪಳ್ಳಿ ತಾಲ್ಲೂಕಾ ಪಂಚಾಯತ್ ಸ್ಥಾನಕ್ಕೆ ಬಿಜೆಪಿ ಪಕ್ಷದಿಂದ ನಾರಾಯಣ ನಾಟೀಕಾರ ಪ್ರಬಲ ಆಕಾಂಕ್ಷಿಯಾಗಿದ್ದಾರೆ.

ಪತ್ರಿಕಾ ಪ್ರಕಟಣೆ ಹೊರಡಿಸಿದ ಅವರು,ಕಳೆದ 10ವರ್ಷದಿಂದ ಸತತವಾಗಿ ಬಿಜೆಪಿ



ಪಕ್ಷವು ನೀಡಿದ ಪ್ರತಿಯೊಂದು ಜವಾಬ್ದಾರಿಯು ಪ್ರಮಾಣಿಕವಾಗಿ ಕೆಲಸ ಮಾಡಿದ್ದೇನೆ ಪೋಲಕಪಳ್ಳಿ ಅಥವಾ ಬೇರೆ ಪಂಚಾಯತನಲ್ಲಿ ಬಿಸಿಬಿ ಮೀಸಲಾತಿ ಬಂದರೆ ಬಿಜೆಪಿ ಹೈಕಮಾಂಡ್ ನನ್ನನ್ನು ಸ್ಪರ್ಧೆ ಮಾಡಲು ಟಿಕೆಟ್ ನೀಡಿದರೆ ನಾನು ಸ್ಪರ್ಧೆಗೆ ಸಿದ್ದನಿದ್ದೇನೆ ಎಂದು ತಾಪಂ.ಸ್ಪರ್ಧೆಯ ಪ್ರಬಲ ಸ್ಪರ್ಧಿ ನಾರಾಯಣ ನಾಟೀಕಾರ ತಿಳಿಸಿದ್ದಾರೆ. ಕಳೆದ ಅನೇಕ ದಿನಗಳಿಂದ ಪಕ್ಷದ ಜವಾಬ್ದಾರಿಗಳು ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸಿದ್ದೇನೆ ಯಾವುದೇ ಸಮಸ್ಯೆಗಳಿದ್ದರೆ ಬಡವರ ಪರವಾಗಿ ಕೆಲಸ ಮಾಡಿದ್ದೇನೆ ತಾಪಂ.ಚುನಾವಣೆಗೆ ಸ್ಪರ್ಧಿಸಲು ಬಿಜೆಪಿ ಜಿಲ್ಲಾ ತಾಲ್ಲೂಕ ಮುಖಂಡರು ತಾಪಂ.ಟಿಕೆಟ್ ನೀಡಿದರೆ ನನ್ನ ಗೆಲುವು ಖಚಿತವಾಗಿದೆ. ಮತದಾರರ ಪ್ರಭುಗಳು ನನ್ನನ್ನು ಗೆಲ್ಲಿಸಿದರೆ ಗ್ರಾಮೀಣ ಭಾಗಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕುಡಿಯುವ ನೀರು, ಸಿಸಿ ರಸ್ತೆ, ಚರಂಡಿ, ಬಿದಿದ್ವೀಪಗಳು, ಸರ್ಕಾರದ ವಸತಿ ಮನೆಗಳು, ಸರ್ಕಾರದ ಯೋಜನೆಗಳು ಜನರಿಗೆ ತಲುಪುವ ಕೆಲಸ ಪ್ರಮಾಣಿಕವಾಗಿ ಮಾಡುತ್ತೇನೆ ಹಾಗಾಗಿ ನಾನು ತಾಪಂ.ಚುನಾವಣೆಗೆ ಪ್ರಬಲ ಆಕಾಂಕ್ಷಿಯಾಗಿದ್ದೇನೆ ಎಂದು ನಾರಾಯಣ ನಾಟೀಕಾರ ತಿಳಿಸಿದ್ದಾರೆ.

## ಮೊಬೈಲ್ ಟಾರ್ಚ್ ಲೈಟ್‌ನಲ್ಲಿ ರೋಗಿಗಳಿಗೆ ಚಿಕಿತ್ಸೆ

**ಉದಯವಾಹಿನಿ, ವಿಜಯಪುರ**

ಅಪಘಾತದಲ್ಲಿ ಗಾಯಗೊಂಡವರಿಗೆ ಮೊಬೈಲ್ ಟಾರ್ಚ್ ಹಾಕಿ ಚಿಕಿತ್ಸೆ ನೀಡಿದ ಘಟನೆ ವಿಜಯಪುರ ಜಿಲ್ಲೆಯ ದೇವರಹಿಪ್ಪರಗಿಯ ನೂತನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ನಡೆದಿದ್ದು ಇದಕ್ಕೆ ಸಂಬಂಧಪಟ್ಟ ವಿಡಿಯೊ ಹರಿದಾಡುತ್ತಿದೆ.

ಮಂಗಳವಾರ ದೇವರಹಿಪ್ಪರಗಿ ಪಟ್ಟಣದ ಇಂಡಿ ರಸ್ತೆಯಲ್ಲಿ ಬೊಲೆರೋ, ಟಂಟಂ ಹಾಗೂ ಮೋಟಾರ್ ಸೈಕಲ್ ಅಪಘಾತದಲ್ಲಿ ಸುಮಾರು 10 ಜನರಿಗೆ ಗಾಯಗಳಾಗಿದ್ದವು. ಅದರಲ್ಲಿ 5 ಜನರಿಗೆ ಗಂಭೀರ ಗಾಯಗಳಾಗಿತ್ತು. ಹೀಗಾಗಿ ತುರ್ತು ಚಿಕಿತ್ಸೆಗೆ ರೋಗಿಗಳನ್ನು ದೇವರಹಿಪ್ಪರಗಿಯ ನೂತನ ಸಮುದಾಯ ಆರೋಗ್ಯ ಕೇಂದ್ರಕ್ಕೆ ಕರೆತಂದಾಗ ಆಸ್ಪತ್ರೆಯಲ್ಲಿ ಕರೆಂಟ್ ಇಲ್ಲದೇ ಕತ್ತಲು ಆವರಿಸಿತ್ತು. ಇದರಿಂದಾಗಿ ಗ್ರಾಮಸ್ಥರು, ಗಾಯಾಳುಗಳು ಸಂಬಂಧಿಕರು ಆಸ್ಪತ್ರೆ ಸಿಬ್ಬಂದಿ ಜೊತೆ ವಾಗ್ವಾದ ನಡೆಸಿದರು.

ಸರ್ಕಾರಿ ಆಸ್ಪತ್ರೆ ಬೇಡ, ಆದ್ರೆ ದುಡ್ಡು ಬೇಕು! ರಾಜ್ಯದ 69 ಶಾಸಕರ ವೈದ್ಯಕೀಯ ವೆಚ್ಚ 7.40 ಕೋಟಿ ಮರುಪಾವತಿ ಮಾಡಿದ ಸರ್ಕಾರ ಈ ವೇಳೆ ಗೊಂದಲದ ವಾತಾವರಣ ಉಂಟಾಗಿ



ಉದಯವಾಹಿನಿ ಚಿತ್ರ

ಮೊಬೈಲ್ ಟಾರ್ಚ್ ಮೂಲಕ ಪರೀಕ್ಷೆ ಮಾಡಿ ಚಿಕಿತ್ಸೆ ನೀಡಬೇಕಾದ ಅನಿವಾರ್ಯತೆ ಎದುರಾಯಿತು. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಅವರನ್ನು ವಿಜಯಪುರದ ಜಿಲ್ಲಾಸ್ಪತ್ರೆಗೆ ಕಳುಹಿಸಿಕೊಡಲಾಯಿತು.

ಪಟ್ಟಣದ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ ಮೇಲ್ದರ್ಜೆಗೇರಿ ಸುಮಾರು 8.30 ಕೋಟಿ ರೂ ವೆಚ್ಚದ ಸುಸಜ್ಜಿತ 30 ಹಾಸಿಗೆಯ ಉತ್ತಮ ಕಟ್ಟಡ ನಿರ್ಮಾಣವಾಗಿದೆ. ಇದನ್ನು ಉಸ್ತುವಾರಿ ಸಚಿವ ಡಾ.ಎಂ.ಬಿ.ಪಾಟೀಲ ಹಾಗೂ ಶಾಸಕ ರಾಜುಗೌಡ ಪಾಟೀಲ ಕುದರಿಸಾಲವಾಡಗಿ ಲೋಕಾರ್ಪಣೆ ಮಾಡಿದ್ದರು.



ಉದಯವಾಹಿನಿ ಚಿತ್ರ

## ರೌಡಿ ಹತ್ಯೆಗೆ ಯತ್ನ ಹಲವರು ಪೊಲೀಸ್ ವಶಕ್ಕೆ

**ಉದಯವಾಹಿನಿ, ಬಳ್ಳಾರಿ**

ಈ ಮೊದಲು ಒಂದಾಗಿದ್ದ ರೌಡಿಗಳ ಮಧ್ಯೆ ಹಲವಾರು ರೀತಿಯ ಆಂತರಿಕ ವೈಷಮ್ಯಗಳಿಂದ ನಿನ್ನೆ ಸಂಜೆ ಪಾರ್ವತಿ ನಗರದ ತಾಳೂರು ರಸ್ತೆಯಲ್ಲಿ ಹಲವು ಜನರ ರೌಡಿಗಳ ಗುಂಪು ಮತ್ತೊಬ್ಬ ರೌಡಿ ಶೀಟರ್ ನನ್ನು ಹತ್ಯೆ ಪ್ರಯತ್ನ ನಡೆಸಿರುವ ಬಗ್ಗೆ ಇಲ್ಲಿನ ಗಾಂಧಿ ನಗರ ಠಾಣೆಯಲ್ಲಿ ದೂರು ದಾಖಲಾಗಿದೆ.

ಲಭ್ಯ ಮಾಹಿತಿ ಪ್ರಕಾರ ಬಸವನಕುಂಟೆಯ ರೌಡಿ ಶೀಟರ್ ಮಧು ಎಂಬಾತನನ್ನು ಹಲವರು ಸೇರಿ ಕಟ್ಟಿಗೆಯಿಂದ ಹೊಡೆದು, ಮುಷ್ಟಿಯಿಂದ ಗುದ್ದಿ ಹಲ್ಲೆ ಮಾಡಲಾಗಿದೆ. ಈ ವೇಳೆ ಮಧು ಪ್ರಜ್ಞೆ ತಪ್ಪಿ ಬಿದ್ದಿದ್ದಾನೆ.

ನಂತರ ಅತನನ್ನು ಹಲ್ಲೆ ಮಾಡಿದವರೇ ಕರೆದುಕೊಂಡು ಹೋಗಿ ಟ್ರಾಮಕೇರ್ ಆಸ್ಪತ್ರೆಗೆ ದಾಖಲಿಸಿದ್ದಾರಂತೆ.

ಹಲ್ಲೆ ಮಾಡುವ ಸಂದರ್ಭರ್ದಲ್ಲಿ ಅನೇಕ ಜನರಿದ್ದರೂ ನಮಗೇಕೆ ಎಂದು ಯಾರು ಬಿಡಿಸಲು ಹೋಗಿಲ್ಲ.

ಹಲ್ಲೆ ಮಾಡಿದವರು ಸಹ ರೌಡಿ ಲಿಸ್ಟ್ ನಲ್ಲಿರುವ ಡೀಲ್ ರವಿ, ಸತೀಶ್, ವಿಕ್ಕಿ ಮೊದಲಾದವರೆಂದು ಹೇಳಲಾಗುತ್ತಿದೆ. ಹಲ್ಲೆ ಮಾಡಿದ ದೃಶ್ಯಗಳು ಸಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿವೆ.

ಇವರಲ್ಲೆ ಬಹುತೇಕರು ಸಿಡಿ ರವಿ ಹತ್ಯೆ ಕೇಸಿನ ಆರೋಪಿಗಳಂತೆ. ಒಟ್ಟಾಗಿದ್ದವರಲ್ಲಿ ಆಂತರಿಕ ವೈಷಮ್ಯ ಬೆಳೆದಿದೆಯಂತೆ. ಕಸರಣ ನ್ಯಾಯಾಲಯದಲ್ಲಿ ಸಾಕ್ಷಿ ಹೇಳುವ ಸಂಬಂಧ ಎನ್ನಲಾಗುತ್ತಿದೆ.

ಈ ಪ್ರಕರಣ ಸಂಬಂಧ ಹಲ್ಲೆ ಮಾಡಿ ಪರಾರಿಯಾದವರನ್ನು ಹುಡಿಕಿ ಈ ಪೈಕಿ ನಾಲ್ಕೈದು ಜನರನ್ನು ಪೊಲೀಸರು ತಮ್ಮ ವಶಕ್ಕೆ ಪಡೆದಿದ್ದಾರಂತೆ.

## ದರೋಡೆ ಪ್ರಕರಣಗಳಲ್ಲಿನ 66 ಜನ ಆರೋಪಿಗಳ ಪರೇಡ್

**ಉದಯವಾಹಿನಿ, ಕಲಬುರಗಿ**

ಅಕ್ರಮ ಹಾಗೂ ಕಾನೂನು ಬಾಹಿರ ಚಟುವಟಿಕೆಗಳ ಮೇಲೆ ನಿಗಾವಹಿಸಿ ಕ್ರಮ ಕೈಗೊಳ್ಳುವ ನಿಟ್ಟಿನಲ್ಲಿ ನಗರ ಪೊಲೀಸ್ ಆಯುಕ್ತಾಲಯದ ಕಚೇರಿಯಲ್ಲಿ ಗುರುವಾರ ಸುಲಿಗೆ ಹಾಗೂ ದರೋಡೆ ಪ್ರಕರಣಗಳಲ್ಲಿನ ಆರೋಪಿಗಳ ಪರೇಡ್ ನಡೆಸಲಾಯಿತು.



ಉದಯವಾಹಿನಿ ಚಿತ್ರ

ಈ ಸಂದರ್ಭದಲ್ಲಿ ಕಾನೂನು ಸುವ್ಯವಸ್ಥೆಯ 10 ಪೊಲೀಸ್ ಠಾಣೆಗಳಿಂದ 66 ಜನ ಸುಲಿಗೆ ಹಾಗೂ ದರೋಡೆ ಪ್ರಕರಣಗಳಲ್ಲಿನ ಚಾಳಿಬಿದ್ದ ಆರೋಪಿತರನ್ನು ಪರೇಡ್‌ಗೆ ಹಾಜರು ಪಡಿಸಲಾಯಿತು. ಪ್ರಸಕ್ತ ಸಾಲಿನಲ್ಲಿ ಇಲ್ಲಿಯವರೆಗೆ 44 ಜನರ ವಿರುದ್ಧ ಪಿಎಆರ್ ಕ್ರಮ ಕೈಗೊಳ್ಳಲಾಗಿದ್ದು, 38 ಜನರ ವಿರುದ್ಧ ಬಾಂಡ್ ಓವರ್ ಮಾಡಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ.ತಿಳಿಸಿದರು. ಪರೇಡ್‌ಗೆ ಹಾಜರಾದ ಆರೋಪಿಗಳು ಯಾವುದೇ ಅಕ್ರಮ ಚಟುವಟಿಕೆಗಳಲ್ಲಿ ಭಾಗವಹಿಸದಂತೆ ಮತ್ತು ಕಾನೂನು ಸುವ್ಯವಸ್ಥೆಗೆ ಭಂಗ ತರುವಂತ ಅಪರಾಧಗಳಲ್ಲಿ ತೊಡಗಿದಲ್ಲಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಎಚ್ಚರಿಕೆ ನೀಡಿದರು.

ಹೂಗಾರ ಸಮಾಜದ ಕೊಡುಗೆ ಅಪಾರವಾಗಿದೆ. ಎಲ್ಲಾ ಜಾತಿ, ಧರ್ಮದವರನ್ನು ಪ್ರೀತಿಯಿಂದ ಅಪ್ಪಿಕೊಂಡು ಸೌಹಾರ್ದತೆಯಿಂದ ಬದುಕುವ ಪರಂಪರೆ ಈ ಸಮುದಾಯದ್ದಾಗಿದೆ

# ಏಕತೆಯಿಂದ ಹೂಗಾರ ಸಮಾಜ ಸಂಘಟನೆ ಆಗಲಿ : ಡಾ. ಸಿದ್ದು ಪಾಟೀಲ



ಉದಯವಾಹಿನಿ ಚಿತ್ರ

> ಹೂಗಾರ ಸಮಾಜದ ಕೊಡುಗೆ ಅಪಾರವಾಗಿದೆ. ಎಲ್ಲಾ ಜಾತಿ, ಧರ್ಮದವರನ್ನು ಪ್ರೀತಿಯಿಂದ ಅಪ್ಪಿಕೊಂಡು ಸೌಹಾರ್ದತೆಯಿಂದ ಬದುಕುವ ಪರಂಪರೆ ಈ ಸಮುದಾಯದ್ದಾಗಿದೆ. ಇಂದಿನ ದಿನಗಳಲ್ಲಿ ಹೂಗಾರ ಸಮುದಾಯ ಶಿಕ್ಷಣ, ಉದ್ಯೋಗ, ವಿವಿಧ ಕ್ಷೇತ್ರಗಳಲ್ಲಿ ಅಭಿವೃದ್ಧಿ ಹೊಂದುತ್ತಿರುವುದು ಸಂತಸದ ಸಂಗತಿ.
>
> – ಶಾಸಕ ಡಾ. ಸಿದ್ದು ಪಾಟೀಲ

### ಸಮಾಜದ ಒಗ್ಗಟ್ಟಿಗೆ ಶ್ರಮಿಸಿ

ಸಮಾಜ ರಾಜಕೀಯವಾಗಿ ಬೆಳೆಯಬೇಕಾದರೆ ಮುಖಂಡರು ಧೈರ್ಯದಿಂದ ಮುನ್ನಡೆಯಬೇಕು. ಸಾಹಸ ಮಾಡದೆ ಯಾವುದೇ ಕ್ಷೇತ್ರದಲ್ಲಿ ಪ್ರಗತಿ ಸಾಧಿಸಲು ಸಾಧ್ಯವಿಲ್ಲ. ಸಮಾಜದ ಸಂಘಟನೆ ಹಾಗೂ ಅಭಿವೃದ್ಧಿಗಾಗಿ ಎಲ್ಲರೂ ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಬೇಕು ಎಂದು ಕರೆ ನೀಡಿದರು.

**ಉದಯವಾಹಿನಿ, ಹುಮನಾಬಾದ**

ಏಕತೆ ಹಾಗೂ ಸಂಘಟನೆಯ ಮೂಲಕ ಹೂಗಾರ ಸಮಾಜ ಇಂದು ಬಲಿಷ್ಠವಾಗಿ ಬೆಳೆಯುತ್ತಿದೆ. ಸಮಾಜದ ಅಭಿವೃದ್ಧಿಗೆ ಅಗತ್ಯವಿರುವ ಎಲ್ಲಾ ರೀತಿಯ ಸಹಾಯ–ಸಹಕಾರ ನೀಡುವುದಾಗಿ ಶಾಸಕ ಡಾ. ಸಿದ್ದು ಪಾಟೀಲ ಹೇಳಿದರು.

ತಾಲ್ಲೂಕಿನ ಹಳ್ಳಿಖೇಡ(ಬಿ) ಪಟ್ಟಣದಲ್ಲಿ ಅಖಿಲ ಕರ್ನಾಟಕ ಹೂಗಾರ ಸೇವಾ ಮಹಾಸಭಾ ವತಿಯಿಂದ ಆಯೋಜಿಸಿದ್ದ ಕಾಯಕ ಯೋಗಿ ಶರಣ ಹೂಗಾರ ಮಾದಯ್ಯನವರ ಜಯಂತ್ಯೋತ್ಸವ ಹಾಗೂ ಹೂಗಾರ ತಾಲ್ಲೂಕು ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

ಹಳ್ಳಿಖೇಡ(ಬಿ) ಪಟ್ಟಣದಲ್ಲಿ ಹೂಗಾರ ಸಮಾಜದ ವತಿಯಿಂದ ಸಮುದಾಯ ಭವನ ನಿರ್ಮಾಣಕ್ಕೆ ಬೇಡಿಕೆ ಸಲ್ಲಿಸಲಾಗಿದೆ. ಸಮಾಜದ ಈ ಬೇಡಿಕೆ ಸೇರಿದಂತೆ ಸಮುದಾಯದ ಅಭಿವೃದ್ಧಿಗೆ ಸಂಬಂಧಿಸಿದ ಎಲ್ಲಾ ಬೇಡಿಕೆಗಳಿಗೆ ಸ್ಪಂದಿಸುವ ಕೆಲಸ ಮಾಡಲಾಗುವುದು ಎಂದು ಡಾ. ಸಿದ್ದು ಪಾಟೀಲ ಭರವಸೆ ನೀಡಿದರು. ಅಖಿಲ ಕರ್ನಾಟಕ ಹೂಗಾರ ಸೇವಾ ಮಹಾಸಭಾದ ರಾಜ್ಯಾಧ್ಯಕ್ಷ ಶಂಕರ ಹೂಗಾರ ಮಾತನಾಡಿ, ಹೂಗಾರ ಸಮಾಜದ ಅಭಿವೃದ್ಧಿಗಾಗಿ ಹಿಂದಿನ ಸರ್ಕಾರ ಹೂಗಾರ ನಿಗಮ ಮಂಡಳಿ ಘೋಷಣೆ ಮಾಡಿದೆ. ಆದರೆ ನಿಗಮಕ್ಕೆ ಸೂಕ್ತ ಅನುದಾನ ಕಲ್ಪಿಸುವ ಮೂಲಕ ಸಮುದಾಯದ ಅಭಿವೃದ್ಧಿಗೆ ಸರ್ಕಾರ ಮುಂದಾಗಬೇಕು ಎಂದು ಆಗ್ರಹಿಸಿದರು. ಹೂಗಾರ ಸಮಾಜದ ವಿವಿಧ ಬೇಡಿಕೆಗಳ ಕುರಿತು ಶಾಸಕರು ಹಾಗೂ ವಿಧಾನ ಪರಿಷತ್ ಸದಸ್ಯರು ಸರ್ಕಾರದ ಗಮನ ಸೆಳೆಯುವ ಮೂಲಕ ಸಮುದಾಯಕ್ಕೆ ನ್ಯಾಯ ಒದಗಿಸಬೇಕು ಎಂದು ಹೇಳಿದರು.

**1. ಹೂಗಾರ ಸಮಾಜದ ಕೊಡುಗೆ ಅಪಾರವಾಗಿದೆ**
**2.ಮುಖಂಡರು ಧೈರ್ಯದಿಂದ ಮುನ್ನಡೆಯಬೇಕು**
**3.ಸಮುದಾಯ ಭವನ ನಿರ್ಮಾಣಕ್ಕೆ ಬೇಡಿಕೆ**

ರಾಜ್ಯ ಸಹ ಕಾರ್ಯದರ್ಶಿ ದುರ್ಯೋಧನ ಹೂಗಾರ ಮಾತನಾಡಿ, ಹೂಗಾರ ಸಮಾಜವು ಶ್ರೇಷ್ಠ ಪರಂಪರೆ ಹಾಗೂ ಕಾಯಕ ಸಂಸ್ಕೃತಿಯನ್ನು ಹೊಂದಿದೆ. ರಾಜ್ಯದ ಹಲವು ಹನುಮಾನ ದೇವಸ್ಥಾನಗಳು ಸೇರಿದಂತೆ ವಿವಿಧ ದೇವಸ್ಥಾನಗಳಲ್ಲಿ ಹೂಗಾರ ಸಮುದಾಯದವರು ಪೂಜಾ ಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಹೂಗಾರ ಕಾಯಕದ ಜೊತೆಗೆ ಶಿಕ್ಷಣ, ಉದ್ಯೋಗ, ಉದ್ಯಮ, ರಾಜಕೀಯ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಮುದಾಯದವರು ಸಾಧನೆ ಮಾಡುತ್ತಿದ್ದಾರೆ. ಪ್ರತಿಯೊಬ್ಬರೂ ಸಮಾಜ ಸಂಘಟನೆಗೆ ಕೈಜೋಡಿಸಬೇಕು ಎಂದು ಕರೆ ನೀಡಿದರು. ಜಿಲ್ಲಾ ಗೌರವಾಧ್ಯಕ್ಷ ರೇವಣ್ಣಪ್ಪ ಹೂಗಾರ ಹಾಗೂ ರಾಜ್ಯ ಪ್ರಧಾನ ಕಾರ್ಯದರ್ಶಿ ಉಮೇಶ ಹೂಗಾರ ಮಾತನಾಡಿದರು. ಚಿಕ್ಕಮಠ ಸಂಸ್ಥಾನದ ಪಂಡಿತಾರಾಧ್ಯ ಶಿವಾಚಾರ್ಯರು ಆಶೀರ್ವಚನ ನೀಡಿದರು.

**ಭವ್ಯ ಮೆರವಣಿಗೆ:** ಸಮ್ಮೇಳನಕ್ಕೂ ಮುನ್ನ ಹಳ್ಳಿಖೇಡ(ಬಿ) ಪಟ್ಟಣದ ಬಸವೇಶ್ವರ ವೃತ್ತದಿಂದ ಆರ್ಯ ಸಮಾಜದವರೆಗೆ ಶರಣ ಹೂಗಾರ ಮಾದಯ್ಯನವರ ಜಯಂತಿ ಅಂಗವಾಗಿ ಭವ್ಯ ಮೆರವಣಿಗೆ ನಡೆಯಿತು. ಸಮಾಜದ ಮುಖಂಡರು, ಮಹಿಳೆಯರು, ಯುವಕರು ಸೇರಿದಂತೆ ಅಪಾರ ಸಂಖ್ಯೆಯಲ್ಲಿ ಸಮಾಜ ಬಾಂಧವರು ಭಾಗವಹಿಸಿದ್ದರು.

ರಾಜ್ಯ ಉಪಾಧ್ಯಕ್ಷ ಪಡಿಯಪ್ಪ ಹೂಗಾರ (ಧಾರವಾಡ), ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಿವಕುಮಾರ ಹೂಗಾರ, ಜಗನಾಥ ಹೂಗಾರ, ಶಿವಪುತ್ರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಮಿನಿ ನ್ಯೂಸ್

## ಟಿಪ್ಪರ್‌ಗೆ ಸರ್ಕಾರಿ ಬಸ್ ಡಿಕ್ಕಿ

**ಉದಯವಾಹಿನಿ, ಚಿಕ್ಕೋಡಿ**

ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಸಂಕೇಶ್ವರ ಸಮೀಪವಿರುವ ರಾಷ್ಟ್ರೀಯ ಹೆದ್ದಾರಿ 48ರಲ್ಲಿ, ಸರ್ಕಾರಿ ಬಸ್ ಒಂದು ಹಿಂಬದಿಯಿಂದ ಟಿಪ್ಪರ್ ಲಾರಿಯೊಂದಕ್ಕೆ ಡಿಕ್ಕಿ ಹೊಡೆದ ಪರಿಣಾಮ ಕೆಎಸ್‌ಆರ್‌ಟಿಸಿ ಬಸ್ ಚಾಲಕ ಮೃತಪಟ್ಟಿದ್ದು, 12 ಪ್ರಯಾಣಿಕರು ಗಾಯಗೊಂಡಿದ್ದಾರೆ. ಸ್ಥಳೀಯ ಪೊಲೀಸರ ಪ್ರಕಾರ, ಗೂನಾವಿಯಿಂದ ಬೆಳಗಾವಿ ಮಾರ್ಗವಾಗಿ ಕೊಲ್ಹಾಪುರಕ್ಕೆ ತೆರಳುತ್ತಿದ್ದ ಸರ್ಕಾರಿ ಸಾರಿಗೆ ಬಸ್ ಮುಂದಿದ್ದ ಟಿಪ್ಪರ್ ಲಾರಿಗೆ ಡಿಕ್ಕಿ ಹೊಡೆದಿದೆ. ಡಿಕ್ಕಿಯ ತೀವ್ರತೆಗೆ ಬಸ್ ಚಾಲಕ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ತುರ್ತು ಸೇವಾ ಸಿಬ್ಬಂದಿ ಗಾಯಗೊಂಡ 12 ಪ್ರಯಾಣಿಕರನ್ನು ವೈದ್ಯಕೀಯ ಚಿಕಿತ್ಸೆಗಾಗಿ ಸಂಕೇಶ್ವರ ತಾಲ್ಲೂಕು ಆಸ್ಪತ್ರೆಗೆ ಸ್ಥಳಾಂತರಿಸಿದ್ದಾರೆ.ಈ ಸಂಬಂಧ ಮುಂದಿನ ತನಿಖೆ ನಡೆಯುತ್ತಿದೆ.

## ಅಪಘಾತದಲ್ಲಿ ನಾಲ್ವರು ಸ್ಥಳದಲ್ಲೇ ಸಾವು!

**ಉದಯವಾಹಿನಿ, ಧಾರವಾಡ**

ಧಾರವಾಡ ಜಿಲ್ಲೆಯ ನವಲಗುಂದ ತಾಲ್ಲೂಕಿನ ಅಮರಗೋಳ ಗ್ರಾಮದ ಬಳಿ ಶುಕ್ರವಾರ ಕ್ಯಾಂಟರ್ ಹಾಗೂ ಕಾರಿನ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿದ್ದು, ಭೀಕರ ಅಪಘಾತದಲ್ಲಿ ನಾಲ್ವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಶುಕ್ರವಾರ ಬೆಳಗ್ಗೆ ಹುಬ್ಬಳ್ಳಿಯಿಂದ ವಿಜಯಪುರ ಕಡೆಗೆ ಹೋಗುತ್ತಿದ್ದ ಕಾರಿಗೆ ಎದುರಿನಿಂದ ಬಂದ ಕ್ಯಾಂಟರ್ ಡಿಕ್ಕಿ ಹೊಡೆದಿದೆ. ಭೀಕರ ಅಪಘಾತದಲ್ಲಿ ಕಾರಿನಲ್ಲಿದ್ದ ನಾಲ್ವರು ಮೃತಪಟ್ಟಿದ್ದಾರೆ. ಮೃತರನ್ನು ಅಜಿತ (32), ರಾಕೇಶ(22), ಸಂದೀಪ್(33), ಶೃತಿ(28) ಎಂದು ಗುರುತಿಸಲಾಗಿದೆ. ಡಿಕ್ಕಿಯ ರಭಸಕ್ಕೆ ಕಾರು ಸಂಪೂರ್ಣವಾಗಿ ನಜ್ಜುಗುಜ್ಜಾಗಿದೆ. ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಭೇಟಿ ನೀಡಿದ ನವಲಗುಂದ ಠಾಣೆ ಪೊಲೀಸರು ಪರಿಶೀಲನೆ ನಡೆಸಿದ್ದು, ಮೃತರ ಬಗ್ಗೆ ಹೆಚ್ಚಿನ ಮಾಹಿತಿ ಕಲೆ ಹಾಕುತ್ತಿದ್ದಾರೆ. ಈ ಸಂಬಂಧ ನವಲಗುಂದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ತಾಕತ್ತಿದ್ದರೆ ರಾಜಿನಾಮೆ ನೀಡಿ ಚುನಾವಣೆಗೆ ನಿಲ್ಲಿ

**ಉದಯವಾಹಿನಿ, ವಿಜಯಪುರ**

ಬಿಜೆಪಿ ಪಕ್ಷದ ಚಿಹ್ನೆಯಿಂದ ಆಯ್ಕೆಯಾಗಿ, ಇದೀಗ ಅದೇ ಪಕ್ಷದ ವಿರುದ್ಧ ಟೀಕೆ ಮಾಡುತ್ತಿರುವ ವಿಜಯಪುರ ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರಿಗೆ



ಪಕ್ಷದ ಬಗ್ಗೆ ಮಾತನಾಡುವ ನೈತಿಕ ಹಕ್ಕಿಲ್ಲ. ತಮ್ಮ ವೈಯಕ್ತಿಕ ವರ್ಚಸ್ಸಿನ ಮೇಲೆ ಗೆಲ್ಲುವ ಸಾಮರ್ಥ್ಯವಿದ್ದರೆ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಚುನಾವಣೆಗೆ ಸ್ಪರ್ಧಿಸಲಿ. ಬಿಜೆಪಿ ಸಾಮಾನ್ಯ ಕಾರ್ಯಕರ್ತನನ್ನೇ ಅವರ ವಿರುದ್ಧ ಕಣಕ್ಕಿಳಿಸಿ ಗೆಲ್ಲಿಸುವ ಮೂಲಕ ಪಕ್ಷದ ಶಕ್ತಿ ತೋರಿಸುತ್ತೇವೆ ಎಂದು ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಹಾಗೂ ನಗರಸಭೆ ಮಾಜಿ ಅಧ್ಯಕ್ಷ ಪರಶುರಾಮಸಿಂಗ್ ರಜಪೂತ ಸವಾಲು ಹಾಕಿದ್ದಾರೆ. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಬಿಜೆಪಿ ಪಕ್ಷದಿಂದಲೇ ಕೇಂದ್ರ ಮಾಜಿ ಸಚಿವ, ಶಾಸಕ ಯತ್ನಾಳ ಅವರು ಇದೀಗ ಪಕ್ಷದ ರಾಜ್ಯಾಧ್ಯಕ್ಷರು ಹಾಗೂ ಹಿರಿಯ ನಾಯಕ ಬಿ.ಎಸ್. ಯಡಿಯೂರಪ್ಪ ಸೇರಿದಂತೆ ಪಕ್ಷದ ನಾಯಕರ ವಿರುದ್ಧ ಟೀಕೆ ಮಾಡುತ್ತಿರುವುದು ಸರಿಯಲ್ಲ ಎಂದು ಹೇಳಿದ್ದಾರೆ. ವಿಜಯಪುರ ಜಿಲ್ಲೆಯಲ್ಲಿ ಬಿಜೆಪಿ ಸಂಘಟನೆ ಬಲಿಷ್ಠವಾಗಿದ್ದು, ಸಾವಿರಾರು ಕಾರ್ಯಕರ್ತರು ಪಕ್ಷದ ವಿವಿಧ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದಾರೆ. ಜಿಲ್ಲಾ ಘಟಕದ ನೂತನ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಸಂಘಟನೆ ಬಲಪಡಿಸುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಹೀಗಾಗಿ ಬಿಜೆಪಿ ಸತ್ತಿದೆ ಎಂಬ ಯತ್ನಾಳರ ಹೇಳಿಕೆ ವಾಸ್ತವಕ್ಕೆ ವಿರುದ್ಧವಾಗಿದೆ ಎಂದು ರಜಪೂತ ತಿಳಿಸಿದ್ದಾರೆ. ಯತ್ನಾಳ ಅವರು ಹಿಂದೆ ಬೇರೆ ಪಕ್ಷದಿಂದ ವಿಜಯಪುರ ನಗರ ಕ್ಷೇತ್ರದಲ್ಲಿ ಸ್ಪರ್ಧಿಸಿ ಸೋತಿದ್ದನ್ನು ಮರೆಯಬಾರದು. ಬಳಿಕ ಬಿಜೆಪಿ ಹಿರಿಯ ನಾಯಕರ ಮನವೊಲಿಕೆಯೊಂದಿಗೆ ಮತ್ತೆ ಪಕ್ಷಕ್ಕೆ ಮರಳಿದ್ದರು.

## ಅತಂತ್ರ ಸ್ಥಿತಿಯಲ್ಲಿ ಬಳ್ಳಾರಿ ಕನ್ನಡ ಸಾಹಿತ್ಯ ಸಮ್ಮೇಳನ..!

**ಉದಯವಾಹಿನಿ, ಬಳ್ಳಾರಿ**

ಬಳ್ಳಾರಿಯಲ್ಲಿ ಆಯೋಜಿಸಲು ಉದ್ದೇಶಿಸಲಾಗಿದ್ದ 88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ಮತ್ತಷ್ಟು ವಿಳಂಬವಾಗುವುದು ಅಧಿಕೃತವಾಗಿದೆ. ಕಸಾಪದಲ್ಲಿ ಸದ್ಯ ಉಂಟಾಗಿರುವ ಆಡಳಿತಾತ್ಮಕ ಮತ್ತು ನಾಯಕತ್ವದ ಬಿಕ್ಕಟ್ಟೇ ಈ ಮಹತ್ವದ ಸಾಂಸ್ಕೃತಿಕ ಉತ್ಸವ ನೆನೆಗುದಿಗೆ ಬೀಳಲು ಪ್ರಮುಖ ಕಾರಣವಾಗಿದೆ. 2025ರ ಡಿಸೆಂಬರ್‌ನಲ್ಲಿ ನಡೆಯಬೇಕಿದ್ದ ಈ ಸಮ್ಮೇಳನವು, ಸದ್ಯ ಪರಿಷತ್ತಿನಲ್ಲಿ ಚುನಾಯಿತ ಆಡಳಿತ ಮಂಡಳಿ ಇಲ್ಲದ ಕಾರಣ ಸಾಹಿತ್ಯಾಸಕ್ತರು ಸಮ್ಮೇಳನಕ್ಕಾಗಿ ಮತ್ತಷ್ಟು ಕಾಯುವ ಪರಿಸ್ಥಿತಿ ಎದುರಾಗಿದೆ. ಕಳೆದ 88ನೇ ಕನ್ನಡ ಸಾಹಿತ್ಯ ಸಮ್ಮೇಳನವು 2024ರ ಡಿಸೆಂಬರ್‌ನಲ್ಲಿ ಮಂಡ್ಯದಲ್ಲಿ ನಡೆದಿತ್ತು. ಬಳ್ಳಾರಿಯಲ್ಲಿ ನಡೆಯಬೇಕಿದ್ದ ಮುಂದಿನ ಸಮ್ಮೇಳನದ ಅಧ್ಯಕ್ಷತೆ ವಹಿಸಲು ಅಂತಾರಾಷ್ಟ್ರೀಯ ಬೂಕರ್ ಪ್ರಶಸ್ತಿ ವಿಜೇತೆ ಬಾನು ಮುಷ್ತಾಕ್ ಅವರ ಹೆಸರನ್ನೂ ಅಂತಿಮಗೊಳಿಸಲಾಗಿತ್ತು. ಕನ್ನಡ ಸಾಹಿತ್ಯ ಪರಿಷತ್ತಿನ ಹಿಂದಿನ ಅಧ್ಯಕ್ಷ ಮಹೇಶ್ ಜೋಶಿ ಅವರ ಅಧಿಕಾರಾವಧಿಯಲ್ಲಿ ಹಣಕಾಸಿನ ಅಕ್ರಮಗಳು ಮತ್ತು ಅಧಿಕಾರ ದುರ್ಬಳಕೆಯ ಆರೋಪಗಳು ಕೇಳಿಬಂದಿದ್ದವು. ಈ ಬೆಳವಣಿಗೆಗಳ ಬಳಿಕ ರಾಜ್ಯ ಸರ್ಕಾರವು 2025ರ ಸೆಪ್ಟೆಂಬರ್‌ನಲ್ಲಿ ಚುನಾಯಿತ ಆಡಳಿತ ಮಂಡಳಿಯನ್ನು ಬದಿಗಿಟ್ಟು ಆಡಳಿತಾಧಿಕಾರಿಯನ್ನು ನೇಮಿಸಿತ್ತು. ಪ್ರಸ್ತುತ ಪರಿಷತ್ತಿನಲ್ಲಿ ಚುನಾಯಿತ ಆಡಳಿತ ಮಂಡಳಿ ಇಲ್ಲ. ಬದಲಿಗೆ ಸರ್ಕಾರ ನೇಮಿಸಿರುವ ಆಡಳಿತಾಧಿಕಾರಿಯ ಮೂಲಕ ಕಾರ್ಯನಿರ್ವಹಿಸಲಾಗುತ್ತಿದೆ. ಸಮ್ಮೇಳನವನ್ನು ಕರೆಯಲು ಚುನಾಯಿತ ಆಡಳಿತ ಮಂಡಳಿ ಅಗತ್ಯವಿದೆ ಎಂದು ಮೂಲಗಳು ಹೇಳಿವೆ.

## ಬೆಳೆವಿಮೆ ಪಾವತಿಯಲ್ಲಿ ಅನ್ಯಾಯ–ತನಿಖೆಗೆ ಒತ್ತಾಯ

**ಉದಯವಾಹಿನಿ, ಪುತ್ತೂರು**

ಕೇಂದ್ರ ಸರ್ಕಾರ ಪ್ರಾಯೋಜಿತ ಫಸಲ್‌ಭಿಮಾ ಯೋಜನೆಯ ರಾಜ್ಯದಲ್ಲಿ ಅಸಮರ್ಪಕವಾಗಿ ನಡೆಯುತ್ತಿದ್ದು, ಪ್ರಸ್ತುತ ಸಾಕಷ್ಟು ವ್ಯತ್ಯಾಸಗಳು ಕಂಡು ಬರುತ್ತಿದೆ. ಜಿಲ್ಲೆಯಲ್ಲಿ ಪಾವತಿಯಾಗಿರುವ ವಿಮಾ ಪರಿಹಾರ ನೀಡಿಕೆಯಲ್ಲಿ ತಾರತಮ್ಯ ಎಸಗಲಾಗಿದೆ. ಹಾಗಿದ್ದರೂ ರಾಜ್ಯ ಸರ್ಕಾರ ಮತ್ತು ಅಧಿಕಾರಿಗಳು ಮೌನಾಚರಣೆ ಮಾಡುವ ಮೂಲಕ ರೈತರಿಗೆ ಅನ್ಯಾಯ ಮಾಡುತ್ತಿದ್ದಾರೆ. ತಕ್ಷಣ ಈ ಪಾವತಿ ವಿಚಾರವನ್ನು ಸಮಗ್ರ ತನಿಖೆಗೆ ಒಳಪಡಿಸಬೇಕು ಎಂದು ಮಾಜಿ ಶಾಸಕ ಸಂಜೀವ ಮಠಂದೂರು ಆಗ್ರಹಿಸಿದರು.

ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 2023ನೇ ಸಾಲಿನವರೆಗೆ ಈ ವಿಮಾ ಪಾವತಿ ಅತ್ಯಂತ ಸಮರ್ಪಕವಾಗಿತ್ತು. ಆದರೆ ಈಗ ರೈತರು ಕಟ್ಟಿದ ಪ್ರೀಮಿಯಮ್ ಗಿಂತಲೂ ಕಡಿಮೆ ಮೊತ್ತದ ವಿಮಾ ಪರಿಹಾರ ನೀಡಲಾಗುತ್ತಿದೆ. ಅ ಫಸಲ್ ಭಿಮಾ ಯೋಜನೆಗೆ ಪ್ರೀಮಿಯಂ ಪಾವತಿಗೆ ಸಂಬಂಧಿಸಿ 5 ಶೇ.ರೈತರು, 10 ಶೇ.ಕೇಂದ್ರ ಹಾಗೂ 20 ಶೇ. ರಾಜ್ಯ ಸರಕಾರ ಪಾವತಿ ಮಾಡುತ್ತಿದ್ದು, ಯೋಜನೆಯ ಅನುಷ್ಠಾನವನ್ನು ರಾಜ್ಯ ಸರಕಾರ ನಿರ್ವಹಿಸುವ ನಿಟ್ಟಿನಲ್ಲಿ ಸೂಕ್ತ ನಿಯಮಾವಳಿಗಳನ್ನು ನೀಡಲಾಗಿದೆ. ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದ ಸಮಿತಿಗೆ ತೋಟಗಾರಿಕೆ ಇಲಾಖೆಯ ಡಿಡಿಯವರು ಕಾರ್ಯದರ್ಶಿಯಾಗಿರುತ್ತಾರೆ. 2025–26ನೇ ಸಾಲಿನ ದ.ಕ.ಜಿಲ್ಲೆಯ ಬೆಳೆ ವಿಮೆ ಪಾವತಿಗೆ ಸಂಬಂಧಿಸಿ ಅಡಿಕೆ 840.74 ಕೋ.ರೂ.ಗಳ ಬೆಳೆ ವಿಮೆಯ ಮೊತ್ತಕ್ಕೆ 294.24 ಕೋ.ರೂ. ಪ್ರಿಮಿಯಂ ಪಾವತಿಯಾಗಿದೆ. 1 ಹೆಕ್ಟೇರ್ ಗೆ ಸುಮಾರು 45 ಸಾವಿರ ರೂ.ಗಳಷ್ಟು ವಿಮಾ ಮೊತ್ತ ಪಾವತಿಯಾಗಿದ್ದು, ಆದರೆ ರೈತರಿಗೆ ವಿಮಾ ಪರಿಹಾರ ಮೊತ್ತ ಪಾವತಿ ಮಾಡುವಾಗ ಅದಕ್ಕಿಂತಲೂ ಕಡಿಮೆ ಮೊತ್ತವನ್ನು ನೀಡುತ್ತಿದ್ದಾರೆ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಗ್ಗೆ | 09:00 ರಿಂದ 10:30 |
| ಗುಳಿಕ ಕಾಲ | ಬೆಳಗ್ಗೆ | 06:00 ರಿಂದ 07:30 |
| ಯಮಗಂಡ ಕಾಲ | ಮಧ್ಯಾಹ್ನ | 01:30 ರಿಂದ 03:00 |

**ಮೇಷ**
ನಿಮ್ಮ ಆಸಕ್ತಿಗಳನ್ನು ಮುಂದುವರಿಸಲು ಅಥವಾ ನೀವು ತುಂಬ ಆನಂದಿಸುವ ಕೆಲಸಗಳನ್ನು ಮಾಡಲು ಹೆಚ್ಚು ಸಮಯ ಕಳೆಯಬೇಕು. ನಿಮ್ಮ ಹೆಚ್ಚುವರಿ ಹಣವನ್ನು ಒಂದು ಸುರಕ್ಷಿತ ಸ್ಥಳದಲ್ಲಿರಿಸಿ ಹಾಗೂ ಇದು ಮುಂದಿನ ಕಾಲದಲ್ಲಿ ನಿಮಗೆ ಒಳ್ಳೆಯ ಆದಾಯ ತರುತ್ತದೆ.

**ವೃಷಭ**
ಒತ್ತಡದ ಹೊರತಾಗಿಯೂ ಆರೋಗ್ಯ ಪರಿಪೂರ್ಣವಾಗಿರುತ್ತದೆ. ಇಂದು ನಿಮ್ಮ ಸಹೋದರ ಸಹೋದರಿಯರು ನಿಮ್ಮಿಂದ ಆರ್ಥಿಕ ಬೆಂಬಲ ಕೇಳಬಹುದು ಮತ್ತು ಅವರಿಗೆ ಸಹಾಯ ಮಾಡಿ ನೀವು ಸ್ವತಃ ಆರ್ಥಿಕ ಒತ್ತಡಕ್ಕೆ ಬರಬಹುದು.

**ಮಿಥುನ**
ನಗು ನಿಮ್ಮ ಎಲ್ಲ ಸಮಸ್ಯೆಗಳಿಗೆ ಪರಿಹಾರವಾದ್ದರಿಂದ ನಕ್ಕುಬಿಡಿ. ದಿನದಲ್ಲಿ ನಂತರ ಹಣಕಾಸು ಪರಿಸ್ಥಿತಿಗಳು ಸುಧಾರಿಸುತ್ತವೆ. ದೂರದ ಸಂಬಂಧಿಗಳಿಂದ ಅನಿರೀಕ್ಷಿತವಾದ ಒಳ್ಳೆಯ ಸುದ್ದಿ ಇಡೀ ಕುಟುಂಬಕ್ಕೆ ಸಂತೋಷ ತರುವುದು.

**ಕರ್ಕಾಟಕ**
ನೀವು ಧೀರ್ಘಕಾಲೀನ ಅನಾರೋಗ್ಯದ ಚೇತರಿಸಿಕೊಳ್ಳುತ್ತೀರಿ. ಆದರೆ ಸ್ವಾರ್ಥಿಗಳಾದ, ಮುಂಗೋಪಿ ವ್ಯಕ್ತಿಯ ಸಹವಾಸವನ್ನು ತಪ್ಪಿಸಿ – ಅವರು ನಿಮ್ಮ ಮೇಲೆ ಒತ್ತಡ ಹಾಕಬಹುದು–ಇದು ಸಮಸ್ಯೆಯನ್ನು ಮತ್ತಷ್ಟು ಉಲ್ಬಣಗೊಳಿಸಬಹುದು.

**ಸಿಂಹ**
ನೀವು ಸಾಕಷ್ಟು ವಿಶ್ರಾಂತಿ ತೆಗೆದುಕೊಳ್ಳುತ್ತಿರದಿದ್ದಲ್ಲಿ ನಿಮಗೆ ತುಂಬಾ ದಣಿವಾದಂತೆನಿಸುತ್ತದೆ ಮತ್ತು ನಿಮಗೆ ಅಧಿಕ ವಿಶ್ರಾಂತಿ ಬೇಕಾಗುತ್ತದೆ. ಹಣವನ್ನು ಯೋಚಿಸದೆ ಮತ್ತು ಪರಿಗಣಿಸದೆ ಖರ್ಚುಮಾಡುವುದು, ನಿಮಗೆ ಎಷ್ಟು ನಷ್ಟ ಮಾಡಬಹದು ಎಂಬುದು ಅರ್ಥವಾಗಬಹುದು.

**ಕನ್ಯಾ**
ರಿಯಲ್ ಎಸ್ಟೇಟ್ ನಲ್ಲಿ ಹೂಡಿಕೆ ಲಾಭದಾಯಕವಾಗಬಹುದು. ನಿಮ್ಮ ಮಗುವಿನಂಥ ಮತ್ತು ಮುಗ್ಧ ವರ್ತನೆ ಕುಟುಂಬದ ಸಮಸ್ಯೆ ಪರಿಹರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಇಂದಿನ ಮನರಂಜನೆ ಕ್ರೀಡಾ ಚಟುವಟಿಕೆಗಳು ಒಳಗೊಂಡಿರಬೇಕು.

**ತುಲಾ**
ನಿಮ್ಮ ಕಾಯಿಲೆ ಅತೃಪ್ತಿಯ ಕಾರಣವಾಗಿಬಹುದು. ಕುಟುಂಬದಲ್ಲಿ ಸಂತೋಷವನ್ನು ಪುನಃಸ್ಥಾಪಿಸಲು ನೀವು ಸಾಧ್ಯವಾದಷ್ಟೂ ಬೇಗ ಇದರಿಂದ ಹೊರಬರುವ ಅಗತ್ಯವಿದೆ. ನಿಮ್ಮ ಸಂಗಾತಿಯು ಇಂದು ಇಡೀ ದಿನ ನಿಮ್ಮ ಬಗ್ಗೆ ಚಿಂತಿಸುತ್ತೀರಿ.

**ವೃಶ್ಚಿಕ**
ಆರೋಗ್ಯದ ಬಗ್ಗೆ ಸ್ವಲ್ಪ ಕಾಳಜಿ ವಹಿಸಬೇಕು. ಹಣವನ್ನು ಯೋಚಿಸದೆ ಮತ್ತು ಪರಿಗಣಿಸದೆ ಖರ್ಚುಮಾಡುವುದು, ನಿಮಗೆ ಎಷ್ಟು ನಷ್ಟ ಮಾಡಬಹದು ಎಂಬುದು ಇಂದು ನಿಮಗೆ ಅರ್ಥವಾಗಬಹುದು. ಪಾರ್ಟಿ ಆಯೋಜಿಸಿದ್ದರೆ ಒಳ್ಳೆಯ ಸ್ನೇಹಿತರನ್ನು ಆಮಂತ್ರಿಸಿ

**ಧನಸ್ಸು**
ನಿಮ್ಮ ವೈಯಕ್ತಿಕ ಸಮಸ್ಯೆಗಳು ಮಾನಸಿಕ ಸಂತೋಷ ಹಾಳು ಮಾಡಬಹುದು. ಆದರೆ ಒತ್ತಡವನ್ನು ನಿಭಾಯಿಸಲು ಆಸಕ್ತಿದಾಯಕವಾದದ್ದನ್ನೇನಾದರೂ ಓದುವ ಮೂಲಕ ಸ್ವಲ್ಪ ಮಾನಸಿಕ ವ್ಯಾಯಾಮ ಮಾಡಿಕೊಳ್ಳಿ. ನಿಮಗೆ ಆರ್ಥಿಕ ನಷ್ಟವಾಗುವ ಯಾವುದೇ ಕೆಲಸ ಮಾಡಬೇಡಿ.

**ಮಕರ**
ಅನಿರೀಕ್ಷಿತ ಪ್ರಯಾಣದಿಂದ ಸುಸ್ತಾಗಬಹುದು ಹಾಗೂ ಇದು ನಿಮ್ಮನ್ನು ಕರಿಕಿರಿಗೊಳ್ಳುವಂತೆ ಮಾಡಬಹುದು. ಸ್ನಾಯುಗಳಿಗೆ ಆರಾಮ ನೀಡಲು ನಿಮ್ಮ ದೇಹವನ್ನು ತೈಲದಿಂದ ಮಸಾಜ್ ಮಾಡಿ. ಭವಿಷ್ಯಕ್ಕೊಸ್ಕರ ಇಂದಿನಿಂದಲೇ ಹಣವನ್ನು ಉಳಿಸಿ.

**ಕುಂಭ**
ಇಂದು, ನಿಮ್ಮ ಆರೋಗ್ಯವು ಆರೋಗ್ಯಕರವಾಗಿರುತ್ತದೆ ಎಂದು ನಿರೀಕ್ಷಿಸಲಾಗಿದೆ. ನೀವು ವಿವಾಹಿತರಾಗಿದ್ದರೆ ನಿಮ್ಮ ಮಕ್ಕಳ ಬಗ್ಗೆ ವಿಶೇಷ ಕಾಳಜಿ ವಹಿಸಿ ಏಕೆಂದರೆ ನೀವು ಅದನ್ನು ಮಾಡದಿದ್ದರೆ ಅವರ ಆರೋಗ್ಯವು ಹದಗೆಡಬಹುದು

**ಮೀನ**
ಒಬ್ಬ ಆಧ್ಯಾತ್ಮಿಕ ವ್ಯಕ್ತಿ ಆಶೀರ್ವಾದ ಮಾಡುತ್ತಾರೆ ಮತ್ತು ಮನಸ್ಸಿನ ಶಾಂತಿ ತರುತ್ತಾರೆ. ಇಂದು ನೀವು ನಿಮ್ಮ ಮನೆಯ ಸದಸ್ಯರನ್ನು ಎಲ್ಲಿಗಾದರೂ ಸುತ್ತಾಡಲು ಕರೆದುಕೊಂಡು ಹೋಗಬಹುದು ಮತ್ತು ನಿಮ್ಮ ಸಾಕಷ್ಟು ಹಣವು ಖರ್ಚಾಗಬಹುದು

### ಅನಂತಾಡಿಯ ಬಸ್ಸಿನ ಬೇಡಿಕೆಯ ಕುರಿತು ಅಧ್ಯಕ್ಷರು ಕೆಎಸ್‌ಆರ್‌ಟಿಸಿ ಪುತ್ತೂರು ಡಿಪೋ ಮ್ಯಾನೇಜರ್ ಸುಬ್ರಹ್ಮಣ್ಯ ಪ್ರಕಾಶ್ ಅವರಲ್ಲಿ ಪ್ರಶ್ನಿಸಿದರು

# ಜಿಲ್ಲೆಯಲ್ಲಿ ಗೃಹಲಕ್ಷ್ಮಿ ಪರಿಶೀಲನೆ ಆರಂಭವಾಗಿಲ್ಲ

**ಉದಯವಾಹಿನಿ, ಪುತ್ತೂರು**
ರಾಜ್ಯ ಸರಕಾರದ ಪಂಚ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಗೃಹಲಕ್ಷ್ಮೀ ಯೋಜನೆಯ ಪರಿಶೀಲನಾ ಕಾರ್ಯ ಮುಂದಿನ ದಿನಗಳಲ್ಲಿ ಫಲಾನುಭವಿಗಳ ಮನೆಗೆ ತೆರಳಿ ಜಿಪಿಎಸ್ ಮೂಲಕ ಪರಿಶೀಲನೆ ನಡೆಯಲಿದೆ. ಹೀಗಾಗಿ ಪ್ರಸ್ತುತ ಸಾಮಾಜಿಕ ಜಾಲತಾಣದಲ್ಲಿ ಬರುವ ಸುಳ್ಳು ಮಾಹಿತಿಗಳನ್ನು ಯಾರೂ ನಂಬಬಾರದು ಎಂದು ಪುತ್ತೂರು ತಾಲ್ಲೂಕು ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷ ಉಮಾನಾಥ ಶೆಟ್ಟಿ ಪೆರ್ನೆ ಹೇಳಿದರು.

1. ಜಿಪಿಎಸ್ ಮೂಲಕ ಪರಿಶೀಲನೆ ನಡೆಯಲಿದೆ
2. ಅನುಷ್ಠಾನ ಸಮಿತಿ ಪ್ರಗತಿ ಪರಿಶೀಲನಾ ಸಭೆ
3. ಅರ್ಹರಾಗಿದ್ದರೆ ಹಣ ಪಾವತಿಯಾಗುತ್ತದೆ

ಅವರು ಪುತ್ತೂರು ತಾಪಂ ಸಭಾಂಗಣದಲ್ಲಿ ತಾಲ್ಲೂಕು ಗ್ಯಾರಂಟಿ ಅನುಷ್ಠಾನ ಸಮಿತಿಯ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಆದರೆ ಈ ಬಗ್ಗೆ ಜನರಿಗೆ ತಪ್ಪು ಮಾಹಿತಿ ನೀಡುವ ಕಾರ್ಯ ನಡೆಯುತ್ತಿದ್ದು, ಫಲಾನುಭವಿಗಳು ಗೊಂದಲದಿಂದ ಗ್ಯಾರಂಟಿ ಅನುಷ್ಠಾನ ಸಮಿತಿಯವರು, ಅಧಿಕಾರಿಗಳಿಗೆ ಕರೆ ಮಾಡುತ್ತಿದ್ದಾರೆ. ಪರಿಶೀಲನೆ ನಡೆಯುವವರೆಗೆ ಈಗ ಹಣ ಪಾವತಿಯಾಗುತ್ತಿರುವ ಎಲ್ಲರಿಗೂ ಹಣ ಪಾವತಿಯಾಗುತ್ತದೆ. ಅದರ ಬಳಿಕ ಅರ್ಹರಾಗಿದ್ದರೆ ಹಣ ಪಾವತಿಯಾಗುತ್ತದೆ. ಈ ಬಗ್ಗೆ ಯಾವುದೇ ಗೊಂದಲ ಬೇಡ ಎಂದು ಸ್ಪಷ್ಟಪಡಿಸಿದರು.


ಉದಯವಾಹಿನಿ ಚಿತ್ರ

ಗೃಹಲಕ್ಷ್ಮೀ ಯೋಜನೆಗೆ ಸಂಬಂಧಿಸಿ ಫಲಾನುಭವಿಗಳು ಮೃತಪಟ್ಟ ಬಳಿಕ ಯೋಜನೆಯಲ್ಲಿ ಪಾವತಿಯಾದ ಹಣದ ಕುರಿತು ಸಹಾಯಕ ಸಿಡಿಪಿಒ ಮಂಗಳಾ ಕಾಳೆ ಅವರು ಮಾಹಿತಿ ನೀಡಿ, ಪುತ್ತೂರು ತಾಲ್ಲೂಕಿನಲ್ಲಿ 321 ಮಂದಿಗೆ 29,46,000 ರೂ. ನಿಧನ ಹೊಂದಿದ ಬಳಿಕ ಪಾವತಿಯಾಗಿದ್ದು, ಅದರಲ್ಲಿ 10.83 ಲಕ್ಷ ರೂ. ಬ್ಯಾಂಕ್ ಗಳಿಂದ ಸರಕಾರಕ್ಕೆ ಪಾವತಿಸಿ 36.78 ಶೇ.ಪ್ರಗತಿ ಸಾಧಿಸಲಾಗಿದೆ. 13.24 ಲಕ್ಷ ರೂ. ಮೊತ್ತವನ್ನು ಮೃತ ಫಲಾನುಭವಿಯ ಕುಟುಂಬದ ಸದಸ್ಯರು ಬ್ಯಾಂಕಿನಿಂದ ಡ್ರಾ ಮಾಡಿಕೊಂಡಿದ್ದಾರೆ ಎಂದು ವಿವರ ನೀಡಿದರು. ಪುತ್ತೂರಿನ ಯಾವುದೋ ಒಂದು ಭಾಗದ ನ್ಯಾಯ ಬೆಲೆ ಅಂಗಡಿಯಲ್ಲಿ ಕೆಳ ಬಿದ್ದ ಅಕ್ಕಿಯನ್ನು ಗುಡಿಸಿ ಬಳಿಕ ಗೋಣಿ ತುಂಬಿಸಿ ಫಲಾನುಭವಿಗಳಿಗೆ ನೀಡಿದ್ದಾರೆ ಎಂಬ ಆರೋಪ ಕೇಳಿಬಂದಿದ್ದು,

> ಪುತ್ತೂರು–ಮಂಗಳೂರು ಎಕ್ಸ್ ಪ್ರೆಸ್ ಬಸ್ಸಿನಲ್ಲಿ ಚಾಲಕ–ನಿರ್ವಾಹಕನ ಜವಾಬ್ದಾರಿಯನ್ನು ಒಬ್ಬರೇ ನಿರ್ವಹಿಸುತ್ತಿದ್ದು, ಅಲ್ಲಿ ಮಹಿಳೆಯರಿಗೆ ಉಚಿತ ಎಂದು ಟಿಕೆಟ್ ನೀಡದೇ ಇರುವ ದೂರುಗಳು ಕೇಳಿ ಬರುತ್ತಿದೆ. ಉಚಿತವಾದರೂ ಟಿಕೆಟ್ ನೀಡುವುದು ಕಡ್ಡಾಯವಾಗಿದ್ದು, ಈ ಕುರಿತು ಬಸ್ಸಿನ ಸಿಬಂದಿ ಹೆಚ್ಚಿನ ಮುತುವರ್ಜಿ ವಹಿಸುವಂತೆ ಅಧಿಕಾರಿಗಳು ಸೂಚನೆ ನೀಡಬೇಕು.
>
> – ಉಮಾನಾಥ ಶೆಟ್ಟಿ ಪೆರ್ನೆ, ಅಧ್ಯಕ್ಷ

ಯಾವುದೇ ಕಾರಣಕ್ಕೂ ಅಕ್ಕಿ ಕೆಳಗೆ ಬೀಳದಂತೆ ನೋಡಿಕೊಳ್ಳಬೇಕು. ಒಂದು ವೇಳೆ ಕೆಳಗೆ ಬಿದ್ದರೂ ಅದನ್ನು ಫಲಾನುಭವಿಗಳಿಗೆ ನೀಡಬಾರದು. ಜತೆಗೆ ನ್ಯಾಯಬೆಲೆ ಅಂಗಡಿಗಳಿಗೆ ಬಂದ ಗೋಣಿ ಚೀಲದಲ್ಲಿ ಅಕ್ಕಿಯನ್ನು ಫಲಾನುಭವಿಗಳಿಗೆ ನೀಡಬಾರದು.

ಗೃಹಜ್ಯೋತಿ ಯೋಜನೆಯ ಪರಿಶೀಲನಾ ಕಾರ್ಯದ ಕುರಿತು ಮೆಸ್ಕಾಂ ಎಇಇ ರಾಜೇಶ್ ಅವರು ಸಭೆಗೆ ಮಾಹಿತಿ ನೀಡಿದರು. ಈಗಾಗಲೇ ಪರಿಶೀಲನೆ ಮಾಡಿರುವ ಮನೆಗಳು, ಬಾಕಿ ಇರುವ ಮನೆಗಳ ಮಾಹಿತಿಯನ್ನು ಪಂಚಾಯತ್ ವಾರು ಸಮಿತಿಗೆ ನೀಡುವಂತೆ ಅಧ್ಯಕ್ಷರು ತಿಳಿಸಿದರು. ಪುತ್ತೂರಿನ ನೈತಾಡಿಯ ಮನೆಯೊಂದರ ವಿದ್ಯುತ್ ಸಂಪರ್ಕ ಗೊಂದಲದ ಕುರಿತು ಸಮಿತಿ ಸದಸ್ಯ ಸಂತೋಷ್ ರೈ ಚಿಲ್ಮೆತ್ತಾರ್ ಅವರು ಸಭೆಯ ಗಮನಕ್ಕೆ ತಂದಿದ್ದು, ಅದು ಲೇಔಟ್ ಮಾದರಿಯ ನಿವೇಶನವಾಗಿದ್ದು, ಅದಕ್ಕೆ 1 ಕಿಲೋವ್ಯಾಟ್ ಗೆ 6 ಸಾವಿರ ರೂ.ಗಳಂತೆ ಮೊತ್ತವನ್ನು ಮೆಸ್ಕಾಂಗೆ ಪಾವತಿಸಬೇಕಾಗುತ್ತದೆ ಎಂದು ಎಇಇ ತಿಳಿಸಿದರು.

## ಅಂಜನಾದ್ರಿ ಬೆಟ್ಟ ಇನ್ನು ಮುಂದೆ ಹಿಂದೂ ಧಾರ್ಮಿಕ ದತ್ತಿ ಇಲಾಖೆಗೆ ಸೇರುವುದಿಲ್ಲ

**ಉದಯವಾಹಿನಿ, ಕಾರಟಗಿ**
ಹನುಮನ ಜನ್ಮಸ್ಥಳ ಎಂದೇ ಖ್ಯಾತವಾದ ಕೊಪ್ಪಳ ಜಿಲ್ಲೆಯ ಐತಿಹಾಸಿಕ ಅಂಜನಾದ್ರಿ ಬೆಟ್ಟದ ಆಡಳಿತ ವಿಚಾರದಲ್ಲಿ ಮಹತ್ವದ ಬೆಳವಣಿಗೆ ನಡೆದಿದೆ. ಅಂಜನಾದ್ರಿ ಬೆಟ್ಟ ಇನ್ನು ಮುಂದೆ ಹಿಂದೂ ಧಾರ್ಮಿಕ ದತ್ತಿ ಇಲಾಖೆಗೆ ಸೇರುವುದಿಲ್ಲ ಎಂದು ಧಾರವಾಡ ಹೈಕೋರ್ಟ್ ಪೀಠ ಮಹತ್ವದ ಆದೇಶ ಹೊರಡಿಸಿದೆ.

ಧಾರವಾಡ ಹೈಕೋರ್ಟ್‌ನ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠ ಈ ಆದೇಶ ಹೊರಡಿಸಿದೆ.

**ಏನಾಗಿತ್ತು ವಿವಾದ?** 2018ರ ಜನವರಿ 23ರಂದು ಕೊಪ್ಪಳ ಜಿಲ್ಲಾಡಳಿತ ಆದೇಶ ಹೊರಡಿಸಿ, ಅಂಜನಾದ್ರಿ ಬೆಟ್ಟದ ದೇವಸ್ಥಾನದ ಆಡಳಿತವನ್ನು ಧಾರ್ಮಿಕ ದತ್ತಿ ಇಲಾಖೆ ಅಧೀನಕ್ಕೆ ನೀಡಿತ್ತು. ಅಂದಿನಿಂದ ಮುಜರಾಯಿ ಇಲಾಖೆಯೇ ದೇವಸ್ಥಾನದ ನಿರ್ವಹಣೆ ಮಾಡುತ್ತಿತ್ತು.


ಉದಯವಾಹಿನಿ ಚಿತ್ರ

ಇದನ್ನು ಪ್ರಶ್ನಿಸಿ ದೇವಸ್ಥಾನದ ಮುಖ್ಯ ಅರ್ಚಕ ವಿದ್ಯಾದಾಸ ಬಾಬಾ ಅವರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. "ನಮ್ಮ ಕುಟುಂಬ 120 ವರ್ಷಗಳಿಂದ ರಾಮಾನಂದಿ ಸಂಪ್ರದಾಯದಂತೆ ಪೂಜೆ ಸಲ್ಲಿಸುತ್ತಿದೆ. ಸರ್ಕಾರ ಕಾನೂನುಬಾಹಿರವಾಗಿ ದೇವಸ್ಥಾನವನ್ನು ವಶಕ್ಕೆ ಪಡೆದಿದೆ, ನಮಗೆ ಪೂಜೆಗೆ ಅವಕಾಶ ನೀಡಬೇಕು" ಎಂದು ಅರ್ಜಿಯಲ್ಲಿ ಮನವಿ ಮಾಡಿದ್ದರು.

### ಕೋರ್ಟ್ ಏನು ಹೇಳಿದೆ?

ವಿದ್ಯಾದಾಸ ಬಾಬಾ ಸಲ್ಲಿಸಿದ್ದ ಅರ್ಜಿಯನ್ನು ಪುರಸ್ಕರಿಸಿದ ಹೈಕೋರ್ಟ್,
1. 2018ರಲ್ಲಿ ಧಾರ್ಮಿಕ ದತ್ತಿ ಇಲಾಖೆಗೆ ನೀಡಿದ್ದ ಆದೇಶವನ್ನು ರದ್ದುಗೊಳಿಸಿದೆ.
2. ಕೊಪ್ಪಳ ಜಿಲ್ಲಾಡಳಿತದ ಆದೇಶವನ್ನೂ ರದ್ದುಗೊಳಿಸಿದೆ.
3. ಇನ್ನು ಮುಂದೆ ಅಂಜನಾದ್ರಿ ಬೆಟ್ಟ ಧಾರ್ಮಿಕ ದತ್ತಿ ಇಲಾಖೆಗೆ ಒಳಪಡುವುದಿಲ್ಲ.
4. ಅಂಜನಾದ್ರಿ ಬೆಟ್ಟದಲ್ಲಿ ವಿದ್ಯಾದಾಸ ಬಾಬಾ ಅವರ ಅಧೀನದಲ್ಲೇ ಪೂಜೆಗೆ ಅವಕಾಶ ನೀಡಬೇಕು ಎಂದು ಆದೇಶಿಸಿದೆ.

**ಮೇಲ್ಮನವಿಗೆ ಸಿದ್ಧತೆ:** ಈ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಲು ಕೊಪ್ಪಳ ಜಿಲ್ಲಾಡಳಿತ ಹಾಗೂ ಧಾರ್ಮಿಕ ದತ್ತಿ ಇಲಾಖೆ ಸಿದ್ಧತೆ ನಡೆಸುತ್ತಿದೆ ಎಂದು ಮೂಲಗಳು ತಿಳಿಸಿವೆ. ಈ ತೀರ್ಪಿನಿಂದಾಗಿ ಅಂಜನಾದ್ರಿ ಬೆಟ್ಟದ ಆಡಳಿತದಲ್ಲಿ ಮತ್ತೆ ಬದಲಾವಣೆ ಆಗಲಿದ್ದು, ಭಕ್ತರಲ್ಲಿ ಕುತೂಹಲ ಮೂಡಿಸಿದೆ.

## ಅ. 11ರಂದು ಕೆ–ಸೆಟ್ ಪರೀಕ್ಷೆ: ಪಾರದರ್ಶಕವಾಗಿ ನಡೆಸಲು ಸೂಚನೆ

**ಉದಯವಾಹಿನಿ, ವಿಜಯಪುರ**
ಅ. 11ರಂದು ಜಿಲ್ಲೆಯಲ್ಲಿ ನಡೆಯಲಿರುವ ಕೆ–ಸೆಟ್ ಪರೀಕ್ಷೆಯನ್ನು ಪಾರದರ್ಶಕ ಹಾಗೂ ಅಚ್ಚುಕಟ್ಟಾಗಿ ನಡೆಸಲು ಅಗತ್ಯ ಸಿದ್ಧತೆ ಕೈಗೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿ ಡಾ. ಔದ್ರಾಮ ಅಧಿಕಾರಿಗಳಿಗೆ ಸೂಚಿಸಿದರು. ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಗುರುವಾರ ಕೆ–ಸೆಟ್ ಪರೀಕ್ಷೆಯ ಸಿದ್ಧತೆ ಕುರಿತು ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಜಿಲ್ಲೆಯಲ್ಲಿ 24 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದ್ದು, 8,817 ಅಭ್ಯರ್ಥಿಗಳು ನೋಂದಣಿ ಮಾಡಿಕೊಂಡಿದ್ದಾರೆ. ಪರೀಕ್ಷಾ ಕೇಂದ್ರಗಳಲ್ಲಿ ಭದ್ರತೆ, ಮೂಲಸೌಲಭ್ಯ ಸೇರಿದಂತೆ ಅಗತ್ಯ ವ್ಯವಸ್ಥೆಗಳನ್ನು ಸಮರ್ಪಕವಾಗಿ ಕಲ್ಪಿಸಬೇಕು ಎಂದು ಸೂಚಿಸಿದರು. ಪ್ರಶ್ನೆಪತ್ರಿಕೆಗಳನ್ನು ಸುರಕ್ಷಿತವಾಗಿ ಪರೀಕ್ಷಾ ಕೇಂದ್ರಗಳಿಗೆ ತಲುಪಿಸಲು 9 ಮಾರ್ಗಗಳನ್ನು ಗುರುತಿಸಲಾಗಿದೆ.


ಉದಯವಾಹಿನಿ ಚಿತ್ರ

ತ್ರಿಸದಸ್ಯ ಮಾರ್ಗಾಧಿಕಾರಿಗಳ ತಂಡಗಳನ್ನು ನಿಯೋಜಿಸಲಾಗಿದ್ದು, ಅವರು ಬೆಳಿಗ್ಗೆ 7 ಗಂಟೆಗೆ ಜಿಲ್ಲಾ ಖಜಾನೆಯಿಂದ ಪರೀಕ್ಷಾ ಸಾಮಗ್ರಿಗಳನ್ನು ಪಡೆದು ನಿಗದಿತ ಸಮಯಕ್ಕೆ ಕೇಂದ್ರಗಳಿಗೆ ತಲುಪಿಸಬೇಕು ಎಂದರು. ಪರೀಕ್ಷೆಯ ಗೌಪ್ಯ ಸಾಮಗ್ರಿಗಳ ಸುರಕ್ಷಿತ ನಿರ್ವಹಣೆಗೆ ಅಪರ ಜಿಲ್ಲಾಧಿಕಾರಿ, ಜಿಲ್ಲಾ ಖಜಾನೆ ಉಪನಿರ್ದೇಶಕ ಹಾಗೂ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರನ್ನೊಳಗೊಂಡ ಸಮಿತಿ ರಚಿಸಲಾಗಿದೆ ಎಂದು ತಿಳಿಸಿದರು. ಪ್ರತಿ ಪರೀಕ್ಷಾ ಕೇಂದ್ರಕ್ಕೂ ಓರ್ವ ವೀಕ್ಷಕರನ್ನು ನೇಮಿಸಲಾಗಿದೆ. ಅವರು ಪರೀಕ್ಷೆ ಆರಂಭಕ್ಕೆ ಎರಡು ಗಂಟೆ ಮುಂಚಿತವಾಗಿ ಕೇಂದ್ರದಲ್ಲಿ ಹಾಜರಿದ್ದು, ಪರೀಕ್ಷೆ ಸುಸೂತ್ರವಾಗಿ ನಡೆಯುವಂತೆ ಮೇಲ್ವಿಚಾರಣೆ ಮಾಡಬೇಕು ಎಂದರು.


ಉದಯವಾಹಿನಿ ಚಿತ್ರ

## ಬಾಂದಾರ ಕಾಮಗಾರಿ ಪರಿಶೀಲಿಸಿದ ಸಚಿವ ಡಾ.ಅಜಯ್ ಧರ್ಮಸಿಂಗ್

**ಉದಯವಾಹಿನಿ, ಕಲಬುರಗಿ**
ಜೇವರ್ಗಿ ಮತಕ್ಷೇತ್ರದ ಹರವಾಳ ಗ್ರಾಮದ ಸಮೀಪ ಭೀಮಾ ನದಿಗೆ ಅಡ್ಡಲಾಗಿ ಸುಮಾರು 130 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗುತ್ತಿರುವ ಸೇತುವೆ–ಬಾಂದಾರ ಯೋಜನೆಯ ಕಾಮಗಾರಿಯನ್ನು ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ. ಅಜಯ್ ಧರ್ಮಸಿಂಗ್ ಪರಿಶೀಲಿಸಿದರು.

ಕಾಮಗಾರಿಯ ಪ್ರಗತಿ, ತಾಂತ್ರಿಕ ಅಂಶಗಳು ಹಾಗೂ ಬಾಕಿ ಇರುವ ಕೆಲಸಗಳ ಕುರಿತು ಮಾಹಿತಿ ಪಡೆದ ಸಚಿವರು, ಯೋಜನೆಯ ಗುಣಮಟ್ಟದಲ್ಲಿ ಯಾವುದೇ ರಾಜಿ ಮಾಡಿಕೊಳ್ಳದೆ ನಿಗದಿತ ಅವಧಿಯಲ್ಲಿ ಕಾಮಗಾರಿ ಪೂರ್ಣಗೊಳಿಸುವ ಭರವಸೆ ನೀಡಿದರು.

368.60 ಮೀಟರ್ ಉದ್ದ ಹಾಗೂ 4 ಮೀಟರ್ ಎತ್ತರದ ಈ ಸೇತುವೆ–ಬಾಂದಾರವು ನೀರಿನ ಸಂಗ್ರಹಣಾ ಸಾಮರ್ಥ್ಯ ಹೆಚ್ಚಿಸುವುದರ ಜೊತೆಗೆ ಕೃಷಿ ಚಟುವಟಿಕೆಗಳಿಗೆ ನೀರಿನ ಲಭ್ಯತೆ ಸುಧಾರಿಸಲು ಹಾಗೂ ಹರವಾಳ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಸಂಪರ್ಕ ವ್ಯವಸ್ಥೆಯನ್ನು ಬಲಪಡಿಸಲು ನೆರವಾಗಲಿದೆ.

ಜೇವರ್ಗಿ ಹಾಗೂ ಅಫಜಲಪುರ ಭಾಗಗಳಲ್ಲಿ ನೀರಾವರಿ, ಸಂಪರ್ಕ ವ್ಯವಸ್ಥೆ ಮತ್ತು ಮೂಲಸೌಕರ್ಯ ಅಭಿವೃದ್ಧಿಗೆ ಸಮಾನ ಆದ್ಯತೆ ನೀಡಲಾಗುತ್ತಿದೆ. ಜನರ ಅಗತ್ಯಗಳನ್ನು ಸ್ಥಳದಲ್ಲೇ ಅರಿತು, ಶಾಶ್ವತ ಪರಿಹಾರ ಒದಗಿಸುವ ಯೋಜನೆಗಳನ್ನು ತ್ವರಿತವಾಗಿ ಅನುಷ್ಠಾನಗೊಳಿಸುವುದು ಸರ್ಕಾರದ ಆದ್ಯತೆಯಾಗಿದೆ ಎಂದು ಸಚಿವರು ತಿಳಿಸಿದರು.

## ನ್ಯಾಯಯುತ ಪರಿಹಾರಕ್ಕೆ ಒತ್ತಾಯ

**ಉದಯವಾಹಿನಿ, ಕಮಲನಗರ**
ತಾಲ್ಲೂಕಿನ ಮುರ್ಕಿ ಗ್ರಾಮದ ವ್ಯಾಪ್ತಿಯಲ್ಲಿ ನಿರ್ಮಾಣವಾಗುತ್ತಿರುವ ಸೋಲಾರ್ ಘಟಕಕ್ಕೆ ಔರಾದ ಶಾಸಕರು ಹಾಗೂ ಮಾಜಿ ಸಚಿವರಾದ ಪ್ರಭು ಬಿ.ಚವ್ಹಾಣ ಅವರು ಇತ್ತೀಚೆಗೆ ಭೇಟಿ ನೀಡಿ ಕಾಮಗಾರಿಯ ಪ್ರಗತಿ ಹಾಗೂ ಘಟಕದ ಕಾರ್ಯಚಟುವಟಿಕೆಗಳನ್ನು ಪರಿಶೀಲಿಸಿದರು.

ಈ ಸಂದರ್ಭದಲ್ಲಿ ಘಟಕದ ಆವರಣದಲ್ಲಿ ಸಂಚರಿಸಿದ ಅವರು, ಯಂತ್ರೋಪಕರಣಗಳು ಹಾಗೂ ನಡೆಯುತ್ತಿರುವ ಕಾಮಗಾರಿಗಳನ್ನು ವೀಕ್ಷಿಸಿದರು. ಬಳಿಕ ಸಂಬಂಧಿಸಿದ ಅಧಿಕಾರಿಗಳು ಹಾಗೂ ಘಟಕದ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿ, ಪ್ಲಾಂಟ್‌ನ ಸಾಮರ್ಥ್ಯ, ಕಾಮಗಾರಿಯ ಪ್ರಗತಿ ಹಾಗೂ ಸ್ಥಳೀಯವಾಗಿ ಲಭ್ಯವಾಗುವ ಉದ್ಯೋಗಾವಕಾಶಗಳ ಕುರಿತು ಮಾಹಿತಿ ಪಡೆದರು.

ನಂತರ ಮಾತನಾಡಿದ ಶಾಸಕರು, ಔರಾದ(ಬಿ) ಹಾಗೂ ಕಮಲನಗರ ತಾಲ್ಲೂಕಿನ ಯುವಜನತೆಗೆ ಸ್ಥಳೀಯವಾಗಿಯೇ ಉದ್ಯೋಗಾವಕಾಶ ಕಲ್ಪಿಸಬೇಕು ಮತ್ತು ಇಲ್ಲಿನ ರೈತರು ಆರ್ಥಿಕವಾಗಿ ಸದೃಢರಾಗಬೇಕು ಎಂಬ ಉದ್ದೇಶದಿಂದ ನಿರಂತರವಾಗಿ ಶ್ರಮಿಸುತ್ತಿದ್ದೇನೆ. ಈ ಭಾಗದಲ್ಲಿ ಕೈಗಾರಿಕೆಗಳು ಹಾಗೂ ಸೋಲಾರ್ ಕಂಪನಿಗಳನ್ನು ತರಲು ಪೂರಕವಾಗಿ ಸಾಕಷ್ಟು ಪ್ರಯತ್ನಿಸಿ ಪವರ್ ಗ್ರಿಡ್ ಉಪಕೇಂದ್ರವನ್ನು ತಂದಿದ್ದೇನೆ. ಇದರ ಫಲವಾಗಿ ಕ್ಷೇತ್ರಕ್ಕೆ ಹಲವು ಸೋಲಾರ್ ಕಂಪನಿಗಳು ಬರುತ್ತಿದ್ದು, ಬಂಜರು ಭೂಮಿಗೂ ಬೇಡಿಕೆ ಹೆಚ್ಚಾಗಿ ರೈತರಿಗೆ ಉತ್ತಮ ಬೆಲೆ ದೊರೆಯುತ್ತಿರುವುದು ಆಶಾದಾಯಕ ಬೆಳವಣಿಗೆಯಾಗಿದೆ ಎಂದು ತಿಳಿಸಿದರು. ಸೋಲಾರ್ ಯೋಜನೆಗಳಿಗೆ ಜಮೀನು ನೀಡಿರುವ ರೈತರಿಗೆ ನ್ಯಾಯಯುತ ಪರಿಹಾರ ದೊರೆಯಬೇಕು. ಪಕ್ಕದ ಮಹಾರಾಷ್ಟ್ರದ ಮಾದರಿಯಲ್ಲಿ ಪ್ರತಿ ಎಕರೆಗೆ ಕನಿಷ್ಠ 50 ಸಾವಿರ ನೀಡಲು ಕ್ರಮ ವಹಿಸಬೇಕು. ಅದೇ ರೀತಿ, ಜಮೀನು ನೀಡಿದ ರೈತರ ಕುಟುಂಬಗಳ ಯುವಜನತೆಗೆ ಸೋಲಾರ್ ಘಟಕಗಳಲ್ಲಿ ಉದ್ಯೋಗಾವಕಾಶ ಕಲ್ಪಿಸಬೇಕು.


ಉದಯವಾಹಿನಿ ಚಿತ್ರ

## ಗ್ರಾಪಂ ನೌಕರರಿಗೆ ಕನಿಷ್ಠ ವೇತನ ಜಾರಿಗೊಳಿಸಿ

**ಉದಯವಾಹಿನಿ, ಚಿಕ್ಕಮಗಳೂರು**
ರಾಜ್ಯದ ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರಿಗೆ 2026ರ ಮೇ 22ರಂದು ಹೊರಡಿಸಲಾದ ಕನಿಷ್ಠ ವೇತನ ಅಧಿಸೂಚನೆಯನ್ನು ಜಾರಿಗೊಳಿಸಿ, ಅದರ ಪ್ರಯೋಜನವನ್ನು ಅರ್ಹ ನೌಕರರಿಗೆ ಕಲ್ಪಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಡಾ. ರವಿ ಸಿ.ಟಿ. ಅವರು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಪತ್ರ ಬರೆದು ಆಗ್ರಹಿಸಿದ್ದಾರೆ. 2026ರ ಅಕ್ಟೋಬರ್ 8ರಂದು ಬರೆದಿರುವ ಪತ್ರದಲ್ಲಿ, ಗ್ರಾಮ ಪಂಚಾಯಿತಿ ನೌಕರರಿಗೆ ಕನಿಷ್ಠ ವೇತನ ಪರಿಷ್ಕರಣೆಯ ಪ್ರಯೋಜನ ದೊರೆಯುವಂತೆ ಕ್ರಮ ಕೈಗೊಳ್ಳುವಂತೆ ಅವರು ಮನವಿ ಮಾಡಿದ್ದಾರೆ. ರಾಜ್ಯದ ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರಿಗೆ ಕನಿಷ್ಠ ವೇತನ ಅಧಿಸೂಚನೆ ಹೊರಡಿಸಲಾಗಿದ್ದರೂ, ಅದರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ವಿಳಂಬವಾಗುತ್ತಿರುವುದರಿಂದ ನೌಕರರಿಗೆ ತೊಂದರೆಯಾಗುತ್ತಿದೆ ಎಂಬ ವಿಚಾರವನ್ನು ಪತ್ರದಲ್ಲಿ ಪ್ರಸ್ತಾಪಿಸಲಾಗಿದೆ. ಗ್ರಾಮ ಪಂಚಾಯಿತಿಗಳಲ್ಲಿ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸುವ ನೌಕರರ ಸೇವೆಯನ್ನು ಪರಿಗಣಿಸಿ, ಅವರಿಗೆ ಕಾನೂನುಬದ್ಧವಾಗಿ ದೊರೆಯಬೇಕಾದ ವೇತನದ ಪ್ರಯೋಜನವನ್ನು ಒದಗಿಸುವುದು ಅಗತ್ಯವಾಗಿದೆ ಎಂದು ರವಿ ಅವರು ಅಭಿಪ್ರಾಯಪಟ್ಟಿದ್ದಾರೆ. ಕನಿಷ್ಠ ವೇತನ ಅಧಿಸೂಚನೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಮೂಲಕ ಗ್ರಾಮ ಪಂಚಾಯಿತಿ ನೌಕರರ ವೇತನ ಪರಿಷ್ಕರಣೆಯ ಸಮಸ್ಯೆಯನ್ನು ಪರಿಹರಿಸಬೇಕು. ಈ ವಿಷಯದಲ್ಲಿ ಸರ್ಕಾರ ತ್ವರಿತವಾಗಿ ಕ್ರಮ ಕೈಗೊಂಡು ನೌಕರರಿಗೆ ನ್ಯಾಯ ಒದಗಿಸಬೇಕು ಎಂದು ಅವರು ಮುಖ್ಯಮಂತ್ರಿಗಳನ್ನು ಒತ್ತಾಯಿಸಿದ್ದಾರೆ.


ಉದಯವಾಹಿನಿ ಚಿತ್ರ

## ಕಳಂಕರಹಿತ ಪ್ರಧಾನಿ ಮೋದಿ ಮುಂದಿನ ಪೀಳಿಗೆಗೆ ಆದರ್ಶ

**ಉದಯವಾಹಿನಿ, ಯಾದಗಿರಿ**
ಕಳಂಕರಹಿತ ಆಡಳಿತ ಹಾಗೂ ಅಭಿವೃದ್ಧಿಯ ಮೂಲಕ ದೇಶದ ಗಮನ ಸೆಳೆದಿರುವ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಮುಂದಿನ ಪೀಳಿಗೆಗೆ ಆದರ್ಶ ಹಾಗೂ ಶ್ರೇಷ್ಠ ವ್ಯಕ್ತಿಯಾಗಿ ರೂಪುಗೊಳ್ಳಲಿದ್ದಾರೆ ಎಂದು ಮಾಜಿ ಸಚಿವ ನರಸಿಂಹ ನಾಯಕ (ರಾಜುಗೌಡ) ಹೇಳಿದರು. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಗುಜರಾತ್ ಮುಖ್ಯಮಂತ್ರಿಯಾಗಿ ಹಾಗೂ ದೇಶದ ಪ್ರಧಾನಮಂತ್ರಿಯಾಗಿ ಸತತ 25 ವರ್ಷಗಳ ಕಾಲ ಜನಸೇವೆಯಲ್ಲಿ ತೊಡಗಿರುವ ಹಿನ್ನೆಲೆಯಲ್ಲಿ ಜಿಲ್ಲಾ ಬಿಜೆಪಿ ವತಿಯಿಂದ ನಗರದ ಸುಭಾಷ್ ವೃತ್ತದಲ್ಲಿ ಆಯೋಜಿಸಿದ್ದ 'ಸೇವಾ ಸಂಕಲ್ಪ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಜಿಲ್ಲಾ ಬಿಜೆಪಿ ಅಧ್ಯಕ್ಷ ಬಸವರಾಜಪ್ಪ ವಿಭೂತಿಹಳ್ಳಿ ಮಾತನಾಡಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಂತಹ ನಾಯಕರು ದೇಶಕ್ಕೆ ದೊರೆತಿರುವುದು ನಮ್ಮೆಲ್ಲರ ಸೌಭಾಗ್ಯ. ಗುಜರಾತ್ ಮುಖ್ಯಮಂತ್ರಿಯಾಗಿ ಹಾಗೂ ದೇಶದ ಪ್ರಧಾನಮಂತ್ರಿಯಾಗಿ ಅವರು ಹಲವು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದಾರೆ. ಅವರ ಕೈ ಬಲಪಡಿಸಲು ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಶ್ರಮಿಸಬೇಕು ಎಂದು ಕರೆ ನೀಡಿದರು.

### ತಾಳಿಕೋಟೆ ತಾಲ್ಲೂಕಿನ ಎಲ್ಲಾ ಗ್ರಾಮ ಪಂಚಾಯಿತಿ ಪಂಚ ನೌಕರರು ಸಂಪೂರ್ಣ ಬೆಂಬಲ ನೀಡಲು ತೀರ್ಮಾನಿಸಿದ್ದೇವೆ

# ಗ್ರಾಪಂ ನೌಕರರ ಮುಷ್ಕರಕ್ಕೆ ತಾಳಿಕೋಟೆ ತಾಲ್ಲೂಕು ನೌಕರರ ಬೆಂಬಲ

**ಉದಯವಾಹಿನಿ, ತಾಳಿಕೋಟೆ**
ಗ್ರಾಮ ಪಂಚಾಯಿತಿ ನೌಕರರ ವಿವಿಧ ಮೂಲಭೂತ ಹಾಗೂ ನ್ಯಾಯಯುತ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ಪಂಚ ನೌಕರರ ಸಮಿತಿ ವತಿಯಿಂದ ಹಮ್ಮಿಕೊಂಡಿರುವ ಪಾದಯಾತ್ರೆ ಹಾಗೂ ಮುಷ್ಕರಕ್ಕೆ ತಾಳಿಕೋಟೆ ತಾಲ್ಲೂಕಿನ ಎಲ್ಲಾ ಗ್ರಾಮ ಪಂಚಾಯಿತಿ ಪಂಚ ನೌಕರರು ಬೆಂಬಲ ನೀಡಿದ್ದು ಮುಷ್ಕರದಲ್ಲಿ ಪಾಲ್ಗೊಳ್ಳಲು ಕರ್ತವ್ಯದಿಂದ ತೆರಳಲು ಅನುಮತಿ ನಿಡಬೇಕೆಂದು ತಾಳಿಕೋಟೆ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ನೌಕರರು ಮನವಿ ಸಲ್ಲಿಸಿದ್ದಾರೆ. ದರು.

1. ಬೇಡಿಕೆಗಳು ಈಡೇರುವವರೆಗೆ ಹೋರಾಟ
2. ವೇತನ ಹೆಚ್ಚಳ, ಸೇವಾ ಹಿರಿತನದ ವೇತನ
3. ಈಡೇರಿಕೆಗಾಗಿ ಪಾದಯಾತ್ರೆ ಹಾಗೂ ಮುಷ್ಕರ

ಗ್ರಾಮ ಪಂಚಾಯಿತಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪಂಚ ನೌಕರರು ಗ್ರಾಮೀಣ ಭಾಗದ ಜನರಿಗೆ ಸರ್ಕಾರದ ವಿವಿಧ ಯೋಜನೆಗಳು ಹಾಗೂ ಮೂಲಭೂತ ಸೌಲಭ್ಯಗಳನ್ನು ತಲುಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಗ್ರಾಮ ಪಂಚಾಯಿತಿ ಸದಸ್ಯರು ಹಾಗೂ ಆಡಳಿತ ಮಂಡಳಿಗೆ ಸಹಕರಿಸುವುದರ ಜೊತೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವಿವಿಧ ಕೆಲಸಗಳನ್ನೂ ನಿರ್ವಹಿಸುತ್ತಿದ್ದಾರೆ. ಪಂಚ ನೌಕರರ ಶ್ರಮದಿಂದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ರಾಜ್ಯ ಹಾಗೂ ರಾಷ್ಟ್ರಮಟ್ಟದ ಪ್ರಶಸ್ತಿಗಳು ಲಭಿಸಿವೆ. ಆದರೆ ಗ್ರಾಮ ಪಂಚಾಯಿತಿ ಸಿಬ್ಬಂದಿಗೆ ಇದುವರೆಗೆ ಸಮರ್ಪಕ ವೇತನ ಹೆಚ್ಚಳ ಜಾರಿಯಾಗಿಲ್ಲ ಎಂದು ನೌಕರರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.


ಉದಯವಾಹಿನಿ ಚಿತ್ರ

ವೇತನ ಹೆಚ್ಚಳ, ಸೇವಾ ಹಿರಿತನದ ವೇತನ, ಸರ್ಕಾರದಿಂದ ನೇರವಾಗಿ ವೇತನ ಪಾವತಿ ಹಾಗೂ ಪ್ರತಿ ಗ್ರಾಮ ಪಂಚಾಯಿತಿಗೆ ದ್ವಿತೀಯ ದರ್ಜೆ ಲೆಕ್ಕ ಸಹಾಯಕ ಹುದ್ದೆಗಳನ್ನು ಮಂಜೂರು ಮಾಡುವುದು ಸೇರಿದಂತೆ ತಮ್ಮ ಮೂಲಭೂತ ಹಕ್ಕುಗಳು ಹಾಗೂ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಬೇಕು ರಾಜ್ಯ ಮಟ್ಟದಲ್ಲಿ ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಪಾದಯಾತ್ರೆ ಹಾಗೂ ಮುಷ್ಕರ ಹಮ್ಮಿಕೊಳ್ಳಲಾಗಿದ್ದು, ಇದಕ್ಕೆ ತಾಳಿಕೋಟೆ ತಾಲ್ಲೂಕಿನ ಎಲ್ಲಾ ಗ್ರಾಮ ಪಂಚಾಯಿತಿ ಪಂಚ ನೌಕರರು ಸಂಪೂರ್ಣ ಬೆಂಬಲ ನೀಡಲು ತೀರ್ಮಾನಿಸಿದ್ದೇವೆ ಮುಷ್ಕರದಲ್ಲಿ ಪಾಲ್ಗೊಳ್ಳುವ ಹಿನ್ನೆಲೆಯಲ್ಲಿ ಕರ್ತವ್ಯದಿಂದ ತೆರಳಲು ಅನುಮತಿ ನೀಡುವಂತೆ ತಾಳಿಕೋಟೆ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ನೌಕರರು ಮನವಿ ಸಲ್ಲಿಸಿದ್ದಾರೆ.

> ವರ್ಷಗಳಿಂದ ಗ್ರಾಮೀಣ ಮಟ್ಟದಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರಿಗೆ ನ್ಯಾಯಯುತ ವೇತನ, ಸೇವಾ ಭದ್ರತೆ ಹಾಗೂ ಅಗತ್ಯ ಹುದ್ದೆಗಳ ಮಂಜೂರು ಸೇರಿದಂತೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಬೇಕು.
>
> –ಗ್ರಾಮ ಪಂಚಾಯಿತಿ ನೌಕರರು

### ಹೋರಾಟಕ್ಕೆ ಬಾಹ್ಯ ಬೆಂಬಲ

ದಿನಾಂಕ 12/10/2026 ರಂದು ಗ್ರಾಮ ಪಂಚಾಯತ್ ನೌಕರರ ವಿವಿಧ ಬೇಡಿಕೆಗಳು ಮತ್ತು ಹೋರಾಟಕ್ಕೆ ಬೆಂಬಲ ಸೂಚಿಸಲು ಬಿ–ಗ್ರೇಡ್ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಸಂಘದ ತಾಲ್ಲೂಕು ಅಧ್ಯಕ್ಷರಾದ ಪಿ. ಬಿ. ಚನ್ನೂರ ಅವರು ಬಾಹ್ಯ ಬೆಂಬಲವನ್ನು ಪ್ರಕಟಿಸಿದ್ದಾರೆ.

### ಜ್ಞಾನೇಶ್ ಕುಮಾರ್ ರಾಜೀನಾಮೆಗೆ ಆಗ್ರಹಿಸಿ ಸಿಜೆಪಿಯಿಂದ ಶನಿವಾರ ಜಂತರ್ ಮಂತರ್‌ನಲ್ಲಿ ಬೃಹತ್ ಪ್ರತಿಭಟನೆ

# ಜಂತರ್ ಮಂತರ್ ಪ್ರತಿಭಟನೆಗೆ ಅನುಮತಿ ನಿರಾಕರಿಸಿದ ದೆಹಲಿ ಪೊಲೀಸರು

**ನವದೆಹಲಿ:** ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ರಾಜೀನಾಮೆಗೆ ಆಗ್ರಹಿಸಿ ಕಾಕ್ರೋಚ್ ಜನತಾ ಪಕ್ಷ(ಸಿಜೆಪಿ) ಶನಿವಾರ (ಅ.10) ಜಂತರ್ ಮಂತರ್‌ನಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಂಡಿದೆ. ಈ ಬೃಹತ್ ಪ್ರತಿಭಟನೆ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ರಾಷ್ಟ್ರ ರಾಜಧಾನಿಯಲ್ಲಿ ಪೊಲೀಸ್ ಬಿಗಿ ಭದ್ರತೆಯನ್ನು ಹೆಚ್ಚಿಸಲಾಗಿದೆ. ಭಾರೀ ಭದ್ರತೆಯನ್ನು ಏರ್ಪಡಿಸುವ ಮೂಲಕ ತಮ್ಮನ್ನು ದೆಹಲಿಗೆ ಬರದಂತೆ ತಡೆಯುವ ಪ್ರಯತ್ನ ಮಾಡಲಾಗುತ್ತಿದೆ ಎಂದು ಸಿಜೆಪಿ ಮತ್ತು ಕಾಂಗ್ರೆಸ್ ಆರೋಪಿಸಿದೆ.

1. ಮುಂಜಾಗ್ರತಾ ಕ್ರಮವಾಗಿ ರಾಷ್ಟ್ರ ರಾಜಧಾನಿಯಲ್ಲಿ ಪೊಲೀಸ್ ಬಿಗಿ ಭದ್ರತೆ
2. ದಕ್ಷಿಣ ರಾಜ್ಯಗಳಿಂದ ಬರುವ ತಮ್ಮ ಕಾರ್ಯಕರ್ತರು ರೈಲು ನಿಲ್ದಾಣಗಳಲ್ಲೇ ವಶಕ್ಕೆ
3. ಏನೇ ಮಾಡಿದರೂ ಈ ಪ್ರತಿಭಟನೆ ನಿಲ್ಲುವುದಿಲ್ಲ ಎಂದ ಕಾಂಗ್ರೆಸ್ ನಾಯರು

ದಕ್ಷಿಣ ರಾಜ್ಯಗಳಿಂದ ಬರುವ ತಮ್ಮ ಕಾರ್ಯಕರ್ತರನ್ನು ನಾಗ್ಪುರ ಮತ್ತು ಭೋಪಾಲ್ ರೈಲು ನಿಲ್ದಾಣಗಳಲ್ಲಿಯೇ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಯಾರು ಏನೇ ಮಾಡಿದರೂ ಈ ಪ್ರತಿಭಟನೆ ನಿಲ್ಲುವುದಿಲ್ಲ ಎಂದು ಕಾಂಗ್ರೆಸ್ ನಾಯಕರು ತೀವ್ರ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

**ಇಂಡಿ ಮೈತ್ರಿಕೂಟದಿಂದ ಪ್ರತಿಭಟನೆ:** ಕಾಂಗ್ರೆಸ್ ನೇತೃತ್ವದ ಇಂಡಿ ಮೈತ್ರಿಕೂಟ ಸೇರಿದಂತೆ ಹಲವು ಪಕ್ಷಗಳು ಸಿಜೆಐ ಜ್ಞಾನೇಶ್ ಕುಮಾರ್ ವಿರುದ್ಧ ತಮ್ಮ ಪ್ರತಿಭಟನೆಗಳನ್ನು ಮುಂದುವರೆಸಿವೆ. ಹಾಗಾಗಿ ಕೇಂದ್ರ ಸರ್ಕಾರವು ರಾಜಧಾನಿಯಲ್ಲಿ ಹೈ ಅಲರ್ಟ್‌ನಲ್ಲಿ ಘೋಷಿಸಿದೆ. ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಲು 20 ಸಾವಿರಕ್ಕೂ ಹೆಚ್ಚು ದೆಹಲಿ ಪೊಲೀಸರು ಮತ್ತು ಅರೆಸೈನಿಕ ಪಡೆಗಳನ್ನು ನಿಯೋಜಿಸಲಾಗಿದ್ದು, ಛತ್ತೀಸ್‌ಗಢ ಮತ್ತು ಬಂಗಾಳದಿಂದ 7 ಸಾವಿರ ಸಿಬ್ಬಂದಿಯನ್ನು ವಿಶೇಷವಾಗಿ ದೆಹಲಿಗೆ ಕರೆತರಲಾಗಿದೆ ಎಂಬ ಮಾಹಿತಿ ಲಭ್ಯವಾಗಿದೆ.

**ರೈಲುಗಳು ರದ್ದು:** ಮತ್ತೊಂದೆಡೆ, ಪ್ರತಿಭಟನೆಗಳಿಂದಾಗಿ ರಸ್ತೆ ಸಂಚಾರ ದಟ್ಟಣೆ ಉಂಟಾಗುವ ಸಾಧ್ಯತೆಯಿರುವುದರಿಂದ, ಶನಿವಾರ (ಅ.10) ಬೆಳಿಗ್ಗೆ 4 ರಿಂದ ಮಧ್ಯಾಹ್ನ 2 ರವರೆಗೆ ನವದೆಹಲಿ ಮತ್ತು ಹಜರತ್ ನಿಜಾಮುದ್ದೀನ್ ರೈಲು ನಿಲ್ದಾಣಗಳಿಗೆ ಬರುವ ಹಾಗೂ ಅಲ್ಲಿಂದ ಹೊರಡುವ ಎಲ್ಲಾ ರೈಲುಗಳನ್ನು ರದ್ದುಗೊಳಿಸಲು ಭಾರತೀಯ ರೈಲ್ವೆ ನಿರ್ಧರಿಸಿದೆ.



#### ಅಮಿತ್ ಶಾ ಮೇಲ್ವಿಚಾರಣೆ

**ಮತ್ತೊಂದೆಡೆ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ತಮ್ಮ ಎಲ್ಲಾ ಅಧಿಕೃತ ಭೇಟಿಗಳನ್ನು ರದ್ದುಗೊಳಿಸಿ, ರಾಷ್ಟ್ರ ರಾಜಧಾನಿಯಲ್ಲಿನ ಭದ್ರತಾ ಪರಿಸ್ಥಿತಿಯಯನ್ನು ಪರಿಶೀಲಿಸುತ್ತಿದ್ದಾರೆ. ಇಂಡಿಯಾ ಮೈತ್ರಿಕೂಟದ ನಿಯೋಗವು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿ ಮಾಡಲಿದ್ದು, ಮಧ್ಯಾಹ್ನ, ಸಂವಿದಾನ್ ಸದನ ಸಭಾಂಗಣದಲ್ಲಿ ಸಭೆ ಸೇರಿ ಮುಂದಿನ ಚಳುವಳಿಯ ಬಗ್ಗೆ ಚರ್ಚಿಸಲಿದ್ದಾರೆ.**

#### ಸಿಜೆಪಿ ಪ್ರತಿಭಟನೆಗೆ ಅನುಮತಿ ನಿರಾಕರಣೆ

**ಜಂತರ್ ಮಂತರ್‌ನಲ್ಲಿ ಸಿಜೆಪಿ ಮತ್ತು ಕೆಲವು ವಿದ್ಯಾರ್ಥಿ ಸಂಘಟನೆಗಳು ನಡೆಸಲು ಉದ್ದೇಶಿಸಿದ್ದ ಪ್ರತಿಭಟನೆಗೆ ದೆಹಲಿ ಪೊಲೀಸರು ಅನುಮತಿ ನಿರಾಕರಿಸಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಶುಕ್ರವಾರ ತಿಳಿಸಿದ್ದಾರೆ.**

**57 ಮೆಟ್ರೋ ನಿಲ್ದಾಣಗಳಲ್ಲಿ ಸಂಚಾರ ನಿರ್ಬಂಧ:** ನಗರದ 57 ಮೆಟ್ರೋ ನಿಲ್ದಾಣಗಳ ಪ್ರವೇಶ ಮತ್ತು ನಿರ್ಗಮನ ದ್ವಾರಗಳನ್ನು ಮುಚ್ಚುವಂತೆ ದೆಹಲಿ ಪೊಲೀಸರು ಮನವಿ ಮಾಡಿದ್ದಾರೆ. ಈ ಕುರಿತಾಗಿ ಅವರು ದೆಹಲಿ ಮೆಟ್ರೋ ರೈಲು ನಿಗಮಕ್ಕೆ ಪತ್ರದ ಮೂಲಕ ವಿನಂತಿಸಿದ್ದಾರೆ. "ಸೂಕ್ಷ್ಮ ಪ್ರದೇಶಗಳತ್ತ ಗುಂಪುಗಳು ಏಕಾಏಕಿ ಬರುವ ಸಾಧ್ಯತೆ" ಇದ್ದು ಇದನ್ನು ಗಮನದಲ್ಲಿಟ್ಟುಕೊಂಡು, ಶುಕ್ರವಾರ ರಾತ್ರಿ 9 ಗಂಟೆಯಿಂದ ಶನಿವಾರದವರೆಗೆ 57 ಮೆಟ್ರೋ ನಿಲ್ದಾಣಗಳನ್ನು ಮುಚ್ಚುವಂತೆ ದೆಹಲಿ ಮೆಟ್ರೋ ರೈಲು ನಿಗಮಕ್ಕೆ ಪೊಲೀಸರು ಮನವಿ ಮಾಡಿದ್ದಾರೆ.

ಗುರುವಾರ ಬರೆದ ಪತ್ರವೊಂದರಲ್ಲಿ, ಜಂಟಿ ಪೊಲೀಸ್ ಆಯುಕ್ತ (ಸಾರಿಗೆ) ರಜನೀಶ್ ಗುಪ್ತಾ ಅವರು, ಅಕ್ಟೋಬರ್ 10 ರಂದು ಜನಪಥ್, ಪಟೇಲ್ ಚೌಕ್, ಸೆಂಟ್ರಲ್ ಸೆಕ್ರೆಟರಿಯೇಟ್, ರಾಜೀವ್ ಚೌಕ್, ಮಂಡಿ ಹೌಸ್, ಬರಾಖಂಬಾ ರಸ್ತೆ, ಸುಪ್ರೀಂ ಕೋರ್ಟ್, ಇಂದ್ರಪ್ರಸ್ಥ, ಕಾಶ್ಮೀರಿ ಗೇಟ್, ಚಾಂದನಿ ಚೌಕ್, ಐಎನ್‌ಎ, ಹೌಜ್ ಖಾಸ್, ಆಜಾದ್‌ಪುರ, ಜಾಮಿಯಾ ಮಿಲಿಯಾ ಇಸ್ಲಾಮಿಯಾ, ಶಾಹೀನ್ ಬಾಗ್, ವೆಲ್ಕಮ್ ಮತ್ತು ರೋಹಿಣಿ ವೆಸ್ಟ್ ಸೇರಿದಂತೆ ನಗರದ 57 ಮೆಟ್ರೋ ನಿಲ್ದಾಣಗಳ ಪ್ರವೇಶ ಮತ್ತು ನಿರ್ಗಮನ ದ್ವಾರಗಳನ್ನು ಮುಚ್ಚುವಂತೆ ತಿಳಿಸಿದ್ದಾರೆ. ಪ್ರತಿಭಟನೆ ಕುರಿತ ಮನವಿಯನ್ನು ತಡವಾಗಿ ಸಲ್ಲಿಸಿದ್ದರಿಂದ ಹಾಗೂ ಈ ಹಿಂದಿನ ಪ್ರತಿಭಟನೆಯ ಸಂದರ್ಭದಲ್ಲಿ ಕೆಲವು ನಿಯಮಗಳನ್ನು ಉಲ್ಲಂಘಿಸಿರುವುದರಿಂದ ಸಿಜೆಪಿ ಅನುಮತಿಯನ್ನು ನಿರಾಕರಣೆ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರತಿಭಟನೆಗೆ ಮೂರು ದಿನಗಳ ಮುಂಚಿತವಾಗಿ (ಅ.7) ಪೊಲೀಸರಿಗೆ ಅನುಮತಿ ಕೋರಿ ಮನವಿ ಬಂದಿತ್ತು. ಆದರೆ, ನಿಯಮಗಳ ಪ್ರಕಾರ, ಇಂತಹ ಮನವಿ ಅರ್ಜಿಗಳನ್ನು ಕನಿಷ್ಠ 10 ದಿನಗಳ ಮುಂಚಿತವಾಗಿಯೇ ಸಲ್ಲಿಸಬೇಕಾಗುತ್ತದೆ. ದೆಹಲಿಯಲ್ಲಿ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯ ಸೆಕ್ಷನ್ 163 ಜಾರಿಯಲ್ಲಿದ್ದು, ಸಾರ್ವಜನಿಕ ಶಾಂತಿ ಮತ್ತು ಸುರಕ್ಷತೆಯನ್ನು ಕಾಪಾಡುವ ಉದ್ದೇಶದಿಂದ ಈ ಸೆಕ್ಷನ್ ಅಡಿ ತಡೆ ನಿರ್ಬಂಧಗಳನ್ನು ವಿಧಿಸಲಾಗಿದೆ ಎಂದು ನವದೆಹಲಿ ವಲಯದ ಜಂಟಿ ಪೊಲೀಸ್ ಆಯುಕ್ತರಾದ ನೂಪುರ್ ಪ್ರಸಾದ್ ಹೇಳಿದ್ದಾರೆ.

## ತೋಟದ ಮನೆಯಲ್ಲಿ ನಾನಾ ಪಾಟೇಕರ್ ಅಂತ್ಯಕ್ರಿಯೆ

**ಪುಣೆ:** ಪುಣೆ ಜಿಲ್ಲೆಯ ಡೊಂಜೆ ಗ್ರಾಮದಲ್ಲಿರುವ ತೋಟದ ಮನೆಯಲ್ಲಿ ಗುರುವಾರ ತಡರಾತ್ರಿ ಹಿರಿಯ ನಟ ನಾನಾ ಪಾಟೇಕರ್ ಅವರ ಅಂತ್ಯಕ್ರಿಯೆಯನ್ನು ಸಕಲ ಸರ್ಕಾರಿ ಗೌರವಗಳೊಂದಿಗೆ ನೆರವೇರಿಸಲಾಯಿತು. ಈ ವೇಳೆ ಬಂಧುಗಳು, ಆತ್ಮೀಯರು, ಸಾವಿರಾರು ಅಭಿಮಾನಿಗಳು ಅವರಿಗೆ ಅಂತಿಮ ನಮನ ಸಲ್ಲಿಸಿದರು. ಬೆಳ್ಳಿ ಪರದೆಯಲ್ಲಿ ಅನೇಕ ಸ್ಮರಣೀಯ ಪಾತ್ರಗಳನ್ನು ನಿರ್ವಹಿಸಿದ 75 ವರ್ಷದ ನಟನ ಅಂತ್ಯಕ್ರಿಯೆಯನ್ನು "ನಾನಾ ಅಮರ್ ರಹೇ" (ಚಿರಕಾಲ ಬದುಕಲಿ ನಾನಾ) ಎಂಬ ಘೋಷಣೆಗಳ ನಡುವೆ ಪೂರ್ಣ ಸರ್ಕಾರಿ ಗೌರವಗಳೊಂದಿಗೆ ನಡೆಸಲಾಯಿತು. ಅವರ ಆಪ್ತರ ಪ್ರಕಾರ, ತಮ್ಮ ಅಂತ್ಯಸಂಸ್ಕಾರವನ್ನು ತಮ್ಮ ಫಾರ್ಮ್‌ಹೌಸ್‌ನಲ್ಲೇ ನಡೆಸಬೇಕೆಂದು ಪಾಟೇಕರ್ ಬಯಸಿದ್ದರು. ಇದಕ್ಕೂ ಮುನ್ನ, ಗೋವಾದಿಂದ ಪಾರ್ಥಿವ ಶರೀರವು ಪುಣೆ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸಿದಾಗ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್, ನಟನಿಗೆ ಗೌರವ ನಮನ ಸಲ್ಲಿಸಿದರು.



## ತಿರುಮಲ ಭಕ್ತರಿಗಾಗಿ ಹೊಸ 'ಗರುಡ' ಆಪ್

**ತಿರುಪತಿ:** ತಿರುಮಲದಲ್ಲಿರುವ ವೆಂಕಟೇಶ್ವರ ಸ್ವಾಮಿಯ ದರ್ಶನ ಪಡೆಯಲು ಬರುವ ಭಕ್ತರ ಅನುಕೂಲಕ್ಕಾಗಿ ತಿರುಮಲ ತಿರುಪತಿ ದೇವಸ್ಥಾನಂ ಹೊಸ ತಂತ್ರಜ್ಞಾನವೊಂದನ್ನು ಪರಿಚಯಿಸಿದೆ. ಪವಿತ್ರ ಬೆಟ್ಟಕ್ಕೆ ಭೇಟಿ ನೀಡುವ ಸಾಮಾನ್ಯ ಯಾತ್ರಾರ್ಥಿಗಳಿಗೆ ಯಾವುದೇ ತೊಂದರೆಯಿಲ್ಲದ ಅನುಭವವನ್ನು ಒದಗಿಸುವ ನಿಟ್ಟಿನಲ್ಲಿ, ಟಿಟಿಡಿ ಎಲ್ಲಾ ಸೇವೆಗಳನ್ನು ಭಕ್ತರ ಬೆರಳ ತುದಿಗೆ ತರುತ್ತಿದೆ.

ಇದಕ್ಕಾಗಿ 'ಗರುಡ' ಎಂಬ ಹೊಸ ಮೊಬೈಲ್ ಆಪ್ ಅಭಿವೃದ್ಧಿಪಡಿಸಲಾಗಿದೆ. ಈ ಆಪ್ ಮೂಲಕ ಭಕ್ತರು ದರ್ಶನದ ಸರತಿ ಸಾಲುಗಳು ಮತ್ತು ಲಡ್ಡು ಕೌಂಟರ್‌ಗಳಿಂದ ಹಿಡಿದು ವಿವಿಧ ಸೇವೆಗಳ ಕುರಿತಾದ ಮಾಹಿತಿಯನ್ನು ಪಡೆಯಬಹುದು. ಈ ಆಪ್ ಶನಿವಾರದಂದು ಬಿಡುಗಡೆಯಾಗಲಿದೆ. ವೆಂಕಟೇಶ್ವರ ಸ್ವಾಮಿಯ ಆಶೀರ್ವಾದ ಪಡೆಯಲು ನಿತ್ಯ ಸಾವಿರಾರು ಭಕ್ತರು ತಿರುಮಲಕ್ಕೆ ಭೇಟಿ ನೀಡುತ್ತಾರೆ. ಇಲ್ಲಿಗೆ ಬಂದಾಗ ಯಾತ್ರಾರ್ಥಿಗಳ ಮನಸ್ಸಿನಲ್ಲಿ ಅನೇಕ ಪ್ರಶ್ನೆಗಳಿರುತ್ತವೆ. ಉದಾಹರಣೆಗೆ ದರ್ಶನದ ಸರತಿ ಸಾಲುಗಳು, ಕಲ್ಯಾಣ ಕಟ್ಟಾ ( ಕೇಶ ಮುಂಡನ ಸೇವಾ ಕೇಂದ್ರ), ವಸತಿ ಸೌಕರ್ಯ, ಹಾಗೂ ಉಚಿತ ಬಸ್ ಸೇವೆಗಳು ಮತ್ತು ವೈದ್ಯಕೀಯ ಕೇಂದ್ರಗಳ ಬಗ್ಗೆ ಮಾಹಿತಿ ಪಡೆಯುವುದು ಹೇಗೆ ಎಂಬ ಚಿಂತಿತರಾಗಿರುತ್ತಾರೆ. ಅಂತಹವರಿಗೆ ಸಹಾಯ ಮಾಡಲು, ಟಿಟಿಡಿ ತಂತ್ರಜ್ಞಾನ ಆಧಾರಿತ ಡಿಜಿಟಲ್ ಮಾರ್ಗದರ್ಶಿಯನ್ನು ಪರಿಚಯಿಸುತ್ತಿದೆ. ಭಕ್ತರು ಇತರರ ಮೇಲೆ ಅವಲಂಬಿತರಾಗದೇ ಸ್ವತಂತ್ರವಾಗಿ ಮಾಹಿತಿಯನ್ನು ಕಂಡುಕೊಳ್ಳಲು ಅನುಕೂಲವಾಗುವಂತೆ ಈ ಅತ್ಯಾಧುನಿಕ ಆಪ್ ಅಭಿವೃದ್ಧಿಪಡಿಸಲಾಗಿದೆ. ಇದನ್ನು ಆಂಡ್ರಾಯ್ಡ್ ಮತ್ತು ಐಒಎಸ್ ಬಳಕೆದಾರರಿಗಾಗಿ ವಿನ್ಯಾಸಗೊಳಿಸಲಾಗಿದೆ. 'ಗರುಡ' ಆಪ್ ಶನಿವಾರದಿಂದ ಭಕ್ತರಿಗೆ ಸಂಪೂರ್ಣವಾಗಿ ಲಭ್ಯವಿರುತ್ತದೆ.

**ಎಲ್ಲಾ ಸೇವೆಗಳ ಮಾಹಿತಿ ನೀಡುವ ಆಪ್:** ಈ ಆಪ್ ತಿರುಮಲದಲ್ಲಿ ಲಭ್ಯವಿರುವ ಎಲ್ಲಾ ಸೇವೆಗಳ ಕುರಿತಾದ ಸಮಗ್ರ ವಿವರಗಳನ್ನು ಒಳಗೊಂಡಿದೆ. ದರ್ಶನದ ಸರತಿ ಸಾಲುಗಳು, ಲಡ್ಡು ಮತ್ತು ಜಲ ಪ್ರಸಾದಂ ಕೌಂಟರ್‌ಗಳು, ಆಹಾರ ಮಳಿಗೆಗಳು, ಪೊಲೀಸ್ ಠಾಣೆಗಳು, ಬಸ್ ನಿಲ್ದಾಣಗಳು, ಉಚಿತ ಬಸ್ ಪಾಯಿಂಟ್‌ಗಳು, ವಿವಿಧ ಸ್ಥಳಗಳಿಗೆ ಹೋಗಲು ಈ ಆಪ್ ದಾರಿ ತೋರಿಸುತ್ತದೆ.

## ಮದುವೆ ನಿರಾಕರಣೆ ಆತ್ಮಹತ್ಯೆಗೆ ಪ್ರಚೋದನೆಯಲ್ಲ: ಸುಪ್ರೀಂ ಮಹತ್ವದ ತೀರ್ಪು

**ನವದೆಹಲಿ:** ಮದುವೆಯಾಗಲು ನಿರಾಕರಿಸುವುದು, ಆ ಕಾರಣದಿಂದ ಸಂಗಾತಿ ಆತ್ಮಹತ್ಯೆ ಮಾಡಿಕೊಂಡರೆ ಅದು ಆತ್ಮಹತ್ಯೆಗೆ ಪ್ರಚೋದನೆ ನೀಡಿದಂತೆ ಎಂದು ಪರಿಗಣಿಸಲು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡಿದೆ.



ವೈಯಕ್ತಿಕ ಕಾರಣಗಳಿಗಾಗಿ ವ್ಯಕ್ತಿಗಳು ವಿಭಿನ್ನವಾಗಿ ಪ್ರತಿಕ್ರಿಯಿಸುತ್ತಾರೆ. ಪ್ರೇಮ ವೈಫಲ್ಯ ಅಥವಾ ಬ್ರೇಕಪ್ ಆತ್ಮಹತ್ಯೆಯಲ್ಲಿ ಕೊನೆಗೊಂಡರೆ, ಅದು ಆರೋಪಿಯ ಅಪರಾಧದ ಉದ್ದೇಶವಲ್ಲ ಎಂದು ನ್ಯಾಯಮೂರ್ತಿಗಳಾದ ಜೆ.ಬಿ. ಪರ್ದಿವಾಲಾ ಮತ್ತು ಕೆ. ವಿನೋದ್ ಚಂದ್ರನ್ ಅವರಿದ್ದ ಪೀಠವು ಅಕ್ಟೋಬರ್ 5 ರಂದು ನೀಡಿದ ತೀರ್ಪಿನಲ್ಲಿ ಹೇಳಿದೆ. ದೂರುದಾರರ ಆರೋಪದಲ್ಲಿ ಮದುವೆ ನಿರಾಕರಿಸಿದ್ದಕ್ಕಾಗಿ ಯುವತಿ ಆತ್ಮಹತ್ಯೆ ಮಾಡಿಕೊಂಡಿರುವುದು ಮಾತ್ರ ನಿಜವಾಗಿದೆ. ಆದರೆ, ವ್ಯಕ್ತಿಯು ವಿವಾಹ ನಿರಾಕರಿಸಿದ್ದರ ಹಿಂದೆ ಆಕೆಯನ್ನು ಆತ್ಮಹತ್ಯೆಗೆ ತಳ್ಳುವ ಉದ್ದೇಶ ಹೊಂದಿರಲಿಲ್ಲ. ಮೇಲಾಗಿ ತನ್ನ ಈ ನಿರ್ಧಾರದಿಂದ ಆಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ ಎಂಬ ಅರಿವೂ ಆರೋಪಿಗೆ ಇರಲಿಲ್ಲ ಎಂದು ಪೀಠವು ಅಭಿಪ್ರಾಯ ಪಟ್ಟಿದೆ. ಈ ಆರೋಪಗಳ ಕಾರಣಕ್ಕಾಗಿ ಆರೋಪಿಗಳ ವಿರುದ್ಧ ಇರುವ ಕಾನೂನು ಪ್ರಕ್ರಿಯೆಗಳನ್ನು ಎತ್ತಿಹಿಡಿಯಲು ಸಾಧ್ಯವಿಲ್ಲ. ಹೀಗಾಗಿ, ಸೆಷನ್ಸ್ ನ್ಯಾಯಾಲಯದಲ್ಲಿರುವ ಪ್ರಕರಣವನ್ನು ರದ್ದು ಮಾಡುತ್ತಿದ್ದೇವೆ ಎಂದು ಹೇಳಿ ಯುವತಿಯ ಪ್ರೇಮಿ, ಆತನ ಪೋಷಕರು, ಸಹೋದರಿ ಮತ್ತು ಇತರ ಆರು ಮಂದಿ ಆರೋಪಿಗಳ ವಿರುದ್ಧದ ಕ್ರಿಮಿನಲ್ ಮೊಕದ್ದಮೆಯನ್ನು ಪೀಠವು ರದ್ದುಗೊಳಿಸಿತು. ಆರೋಪಿಗಳು ಕಸ್ಟಡಿಯಲ್ಲಿದ್ದರೆ ಮತ್ತು ಬೇರೆ ಯಾವುದೇ ಪ್ರಕರಣದಲ್ಲಿ ಅಗತ್ಯವಿಲ್ಲದಿದ್ದರೆ ಅವರನ್ನು ತಕ್ಷಣವೇ ಬಿಡುಗಡೆ ಮಾಡಬೇಕು. ಅವರು ಈಗಾಗಲೇ ಜಾಮೀನಿನ ಮೇಲಿದ್ದರೆ, ಅವರ ಜಾಮೀನು ಬಾಂಡ್‌ಗಳನ್ನು ರದ್ದುಗೊಳಿಸಬೇಕು ಎಂದು ಪೀಠವು ಆದೇಶಿಸಿದೆ. ಸಾವಿಗೆ ಕಾರಣ ಆತ್ಮಹತ್ಯೆ ಎಂಬುದು ನಿಸ್ಸಂದೇಹವಾಗಿ ಸಾಬೀತಾಗಿದೆ. ಅದು ಮೊದಲ ಮೇಲ್ಮನವಿದಾರರ ಮನೆಯಲ್ಲಿಯೇ ಸಂಭವಿಸಿದೆ ಎಂದು ಪೀಠವು ಗಮನಿಸಿದೆ. ಮೃತ ಯುವತಿಯೊಂದಿಗೆ ಮೊದಲ ಮೇಲ್ಮನವಿದಾರ ಕಳೆದ ಕೆಲವು ತಿಂಗಳಿಂದ ಪರಸ್ಪರ ಒಪ್ಪಿತ ಸಂಬಂಧದಲ್ಲಿದ್ದನು ಎಂಬುದನ್ನ ದೂರುದಾರರೇ ಒಪ್ಪಿಕೊಂಡಿದ್ದಾರೆ. ಹೀಗಿದ್ದಾಗ, ಆಕೆಯನ್ನು ಮೇಲ್ಮನವಿದಾರರ ಮನೆಯಿಂದ ಏಕೆ ಕರೆದೊಯ್ದರು ಎಂಬುದು ಸ್ಪಷ್ಟವಾಗಿಲ್ಲ" ಎಂದು ಪೀಠವು ಹೇಳಿದೆ. ಮೃತ ಯುವತಿಯು ಹಿರಿಯ ಸಹೋದರಿಗೆ ಫೋನ್ ಮಾಡಿ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಬೆದರಿಕೆ ಹಾಕಿದಾಗ, ಆಕೆ ಅದನ್ನು ತಡೆಯಲು ಯಾವುದೇ ಪ್ರಯತ್ನ ಮಾಡಿಲ್ಲ ಎಂಬುದನ್ನು ಗಮನಿಸಿದ ಪೀಠವು, ಮೃತಳನ್ನು ಆತ್ಮಹತ್ಯೆಗೆ ತಳ್ಳಲು ಆರೋಪಿಗಳು ಯಾವುದೇ ಪ್ರಚೋದನೆ ನೀಡಿದ ಪುರಾವೆಗಳು ಸಿಕ್ಕಿಲ್ಲ. ಇದು ಉದ್ದೇಶಪೂರ್ವಕವಾಗಿ ಮಾಡಿದ್ದಲ್ಲ ಅಥವಾ ಇದನ್ನು ಪ್ರಚೋದನೆ ಎಂದು ಕರೆಯಲೂ ಸಾಧ್ಯವಿಲ್ಲ ಎಂದು ನ್ಯಾಯಾಲಯ ಹೇಳಿದೆ.

## ಕಡೆಗೂ ತಾಯ್ನಾಡಿಗೆ ಮರಳಿದ ಯುಎಸ್ ಲಿಂಕನ್ ನೌಕೆ ಭಾವನಾತ್ಮಕ ಕ್ಷಣಕ್ಕೆ ಸಾಕ್ಷಿಯಾದ ಸ್ಯಾನ್ ಡಿಯಾಗೋ

**ಕೊರೊನಾಡೊ:** ಮಧ್ಯಪ್ರಾಚ್ಯದ ಯುದ್ಧಕ್ಕೆ ನಿಯೋಜನೆಗೊಂಡಿದ್ದ ಯುಎಸ್ ಲಿಂಕನ್ ನೌಕೆ ಕೊನೆಗೂ ತನ್ನ ತಾಯ್ನಾಡಿಗೆ ಆಗಮಿಸಿದೆ. ಕಠಿಣ ಕಾರ್ಯಾಚರಣೆಗಾಗಿ 10 ತಿಂಗಳ ಕಾಲ ತಮ್ಮವರಿಂದ ದೂರ ಇದ್ದ ಯೋಧರು ಕಡೆಗೂ ತವರು ಸೇರಿದ್ದು, ಹರ್ಷೋದ್ಗಾರದ ಸ್ವಾಗತ ಪಡೆದುಕೊಂಡರು. ಗುರುವಾರ ಸ್ಯಾನ್ ಡಿಯಾಗೋ ಕೊಲ್ಲಿಯಲ್ಲಿ ನೌಕೆ ಬಂದಿಳಿದಾಕ್ಷಣ ಯೋಧರು ತಮ್ಮ ಕುಟುಂಬ ಸದಸ್ಯರನ್ನು ಅಪ್ಪುಗೆ, ಕಣ್ಣೀರಿನೊಂದಿಗೆ ಭೇಟಿಯಾದ ಭಾವನಾತ್ಮಕ ಕ್ಷಣಗಳಿಗೆ ಸಾಕ್ಷಿಯಾದರು.ಇರಾನ್ ಯುದ್ಧ ಕಾರ್ಯಾಚರಣೆಯಲ್ಲಿ ಅಮೆರಿಕ ಯುದ್ಧ ನೌಕೆ ಲಿಂಕನ್ ಪ್ರಮುಖವಾಗಿ ಕಾರ್ಯ ನಿರ್ವಹಿಸುತ್ತಿದ್ದು, ಸತತ 265 ದಿನಗಳ ಕಾಲ ಸಮುದ್ರದಲ್ಲಿ ನಿಯೋಜನೆಗೊಂಡಿರುವ ದಾಖಲೆ ಹೊಂದಿದೆ. ಈ ಸಂದರ್ಭದಲ್ಲಿ ನೌಕೆಯಲ್ಲಿದ್ದ ಸಿಬ್ಬಂದಿಯ ಮಾನಸಿಕ ಆರೋಗ್ಯ ಹದಗೆಟ್ಟಿರುವ ಮತ್ತು ಅಗತ್ಯ ಸಾಮಗ್ರಿಗಳ ಕೊರತೆಯಿರುವ ಬಗ್ಗೆ ತಿಳಿದು ಕುಟುಂಬಗಳು ಕಣ್ಣೀರು ಹಾಕಿದ್ದು ವರದಿಯಾಗಿದೆ. ನಿದ್ದೆ ಇಲ್ಲದ ರಾತ್ರಿಗಳನ್ನು ಕಳೆದಿರುವಂತಹ ಸಿಬ್ಬಂದಿ ಕುಟುಂಬಸ್ಥರ ಪುನರ್ಮಿಲನವಾಗಿದ್ದು, ಭಾವುಕ ಕ್ಷಣಗಳಿಗೆ ಸಾಕ್ಷಿಯಾಯಿತು. ನೌಕಾಯಾನದ ಅನುಭವ ಕುರಿತು ಮಾತನಾಡಿರುವ 20 ವರ್ಷದ ಏಬೆಲ್ ರಾಮಿರೆಜ್, ತಮ್ಮ ಎಲ್ಲಾ ಅನುಭವಗಳನ್ನು ಮೀರಿ ತಮ್ಮ ನೆಲೆ ಸೇರಿರುವುದು ಸಂತಸ ತಂದಿದೆ. ನೌಕೆಯಿಂದ ಹೊರಗೆ ಬರುತ್ತಿದ್ದಂತೆ ಟೆಕ್ಸಾಸ್‌ನಿಂದ ಬಂದಿದ್ದ ತಮ್ಮ ಪೋಷಕರನ್ನು ಹುಡುಕಿದರು. ಅವರನ್ನು ಕಂಡು ಮುಖದಲ್ಲಿ ಮಂದಹಾಸ ಮೂಡಿತು. ಇದೊಂದು ಅದ್ಭುತವಾದ ಅನುಭವ. ಒಂದು ಹಂತದಲ್ಲಿ ನೌಕೆಯಿಂದ ಕೆಳಗಿಳಿಯುತ್ತೇನೆ ಎಂದು ಅಂದುಕೊಂಡಿರಲಿಲ್ಲ ಎಂದೆನಿಸಿತ್ತು ಎಂದರು. 10 ತಿಂಗಳ ಕಾಲ ತಾಯಿಯಿಂದ ದೂರವಿದ್ದ ಕ್ಯಾಸಿಟಿ ಗಾರ್ದುಕ್, ಹಡಗಿನ ಮೇಲಿನ ಡೆಕ್‌ನಲ್ಲಿ ಸಮವಸ್ತ್ರ ಧರಿಸಿದ್ದ ತಾಯಿಯನ್ನು ನೋಡಿದ ತಕ್ಷಣ ಕೈ ಬೀಸಿದಳು.



ತಮ್ಮ ತಾಯಿಯನ್ನು ಮತ್ತೆ ನೋಡುತ್ತಿರುವುದು ಅತ್ಯಂತ ಭಾವುಕ ಕ್ಷಣವಾಗಿದೆ. ಏಳನೇ ತರಗತಿಯಲ್ಲಿರುವಾಗ ಅವರು ಬಹುತೇಕ ಸಮಯ ನನ್ನ ಜೊತೆ ಇರಲಿಲ್ಲ. ನನ್ನ ಹುಟ್ಟುಹಬ್ಬದಂದು ಆಕೆ ಇರಲಿಲ್ಲ. ಆದರೆ, ಇನ್ನು ಮುಂದೆ ಪ್ರತಿದಿನ ಸಂಭ್ರಮಿಸಬಹುದು ಎಂದು ಸಂತಸ ಪಟ್ಟರು. ಹಡಗಿನ ಕಮಾಂಡಿಂಗ್ ಆಫೀಸರ್ ಆದ ಕ್ಯಾಪ್ಟನ್ ಡೇನಿಯಲ್ ಕೀಲರ್ ಮಾತನಾಡಿ, ಸಿಬ್ಬಂದಿಯಲ್ಲಿ ಬಹುತೇಕರು ಇದೇ ಮೊದಲ ಬಾರಿಗೆ ಇಂತಹ ಕಾರ್ಯಾಚರಣೆಯಲ್ಲಿ ಭಾಗವಹಿಸುತ್ತಿದ್ದು, ಅವರು ಸಾಕಷ್ಟು ಸಮಸ್ಯೆಗಳನ್ನು ಎದುರಿಸಿದರು. ಆದರೆ, ಇಷ್ಟು ದೀರ್ಘಾವಧಿಯ ನಿಯೋಜನೆಯಲ್ಲಿ ಇವೆಲ್ಲ ಸಹಜವಾದವುಗಳು. ಇನ್ನು ನಮ್ಮ ಕಾರ್ಯಾಚರಣೆ ವೇಳೆ ಯಾವುದೇ ಸಮಸ್ಯೆ ಇರಲಿಲ್ಲ. ಎಲ್ಲರಿಗೂ ದಿನಕ್ಕೆ ನಾಲ್ಕು ಬಾರಿ ಊಟದ ವ್ಯವಸ್ಥೆ ಇತ್ತು. ನೀವು ನೋಡುತ್ತಿರುವಂತೆ ಇದೊಂದು ತೇಲುವ ನಗರವಿದ್ದಂತೆ ಎಂದರು.

### ಹಳಿ ತಪ್ಪಿದ್ದ ನಂಟು ಮತ್ತೆ ಸರಿದಾರಿಗೆ!– ಉಭಯ ದೇಶಗಳು ಭದ್ರತಾ ಸಹಕಾರದಲ್ಲಿ ಹೊಸ ಕ್ಷೇತ್ರಗಳನ್ನು ಅನ್ವೇಷಿಸಲು ಒಪ್ಪಿಕೊಂಡಿವೆ

# ಭಾರತ – ಕೆನಡಾ ದ್ವಿಪಕ್ಷೀಯ ಸಂಬಂಧಗಳಲ್ಲಿ ಹೊಸ ಆರಂಭ

**ನವದೆಹಲಿ:** ಅಮೆರಿಕದೊಂದಿಗಿನ ಸಂಬಂಧದಲ್ಲಿ ಉಂಟಾಗಿರುವ ಬಿಕ್ಕಟ್ಟು ಮತ್ತು ಬದಲಾಗುತ್ತಿರುವ ಜಾಗತಿಕ ರಾಜಕೀಯ ಸನ್ನಿವೇಶದ ಹಿನ್ನೆಲೆಯಲ್ಲಿ ಭಾರತ ಮತ್ತು ಕೆನಡಾ ದೇಶಗಳು ತಮ್ಮ ನಡುವಿನ ರಾಜಕೀಯ, ಭದ್ರತೆ ಹಾಗೂ ವ್ಯಾಪಾರ ಒಪ್ಪಂದಗಳನ್ನು ಮರುಸಂಘಟಿಸಲು ಮುಂದಾಗಿವೆ. ಇದರ ಭಾಗವಾಗಿ ಉಭಯ ದೇಶಗಳು ಭದ್ರತಾ ಸಹಕಾರದಲ್ಲಿ ಹೊಸ ಕ್ಷೇತ್ರಗಳನ್ನು ಅನ್ವೇಷಿಸಲು ಒಪ್ಪಿಕೊಂಡಿವೆ.

1. ಭಾರತದ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್
2. ಅಂತರರಾಷ್ಟ್ರೀಯ ವ್ಯವಹಾರಗಳ ಸಲಹೆಗಾರ ಡೇವಿಡ್ ಮಾರಿಸನ್
3. ಮಧ್ಯೆ ನಡೆದ ಸಭೆಯಲ್ಲಿ ದ್ವಿಪಕ್ಷೀಯ ಭದ್ರತಾ ಸಂವಾದದ ಭಾಗವಾಗಿ ಚರ್ಚೆ

ಭಾರತದ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಮತ್ತು ಕೆನಡಾ ಪ್ರಧಾನಿಯ ಹಿರಿಯ ರಾಜತಾಂತ್ರಿಕ ಮತ್ತು ಅಂತರರಾಷ್ಟ್ರೀಯ ವ್ಯವಹಾರಗಳ ಸಲಹೆಗಾರ ಡೇವಿಡ್ ಮಾರಿಸನ್ ನಡುವೆ ನಡೆದ ಸಭೆಯು, ಇತ್ತೀಚೆಗೆ ಗುಪ್ತಚರ ಮತ್ತು ಭದ್ರತಾ ವಿಷಯಗಳಲ್ಲಿ ಹದಗೆಟ್ಟಿದ್ದ ಭದ್ರತಾ ಸಂಬಂಧಗಳು ಈಗ ಮತ್ತೆ ಹಳಿ ಏರುವ ಮುನ್ಸೂಚನೆ ನೀಡಿವೆ.

ಈ ಸಭೆಯು ನಿಯಮಿತ ದ್ವಿಪಕ್ಷೀಯ ಭದ್ರತಾ ಸಂವಾದದ ಭಾಗವಾಗಿದ್ದರೂ, ಉಭಯ ದೇಶಗಳು ತಮ್ಮ ಭದ್ರತೆ ಮತ್ತು ಕಾನೂನು ಜಾರಿ ಸಹಕಾರದ ಪ್ರಗತಿಯನ್ನು ಪರಿಶೀಲಿಸಿದವು. ಇದರೊಂದಿಗೆ ಪ್ರಾಯೋಗಿಕ ಸಹಕಾರಕ್ಕಾಗಿ ಹೆಚ್ಚುವರಿ ಕ್ಷೇತ್ರಗಳನ್ನು ಗುರುತಿಸಲು ಎರಡೂ ಕಡೆಯವರು ಒಪ್ಪಿಕೊಂಡರು ಎಂದು ಸುದ್ದಿ ಸಂಸ್ಥೆ ಎಎನ್ಐ ವರದಿ ಮಾಡಿದೆ.



**ಡಿಸೆಂಬರ್‌ನಲ್ಲಿ ಕೆನಡಾಕ್ಕೆ ಪ್ರಧಾನಿ ಮೋದಿ ಭೇಟಿ:** ಡಿಸೆಂಬರ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಕೆನಡಾಕ್ಕೆ ಭೇಟಿ ನೀಡುವ ಸಾಧ್ಯತೆ ಹಿನ್ನೆಲೆಯಲ್ಲಿ ಅದಕ್ಕೆ ಪೂರ್ವಭಾವಿಯಾಗಿ ಈ ಸಭೆ ನಡೆದಿದೆ. ಜಾಗತಿಕ ಮಟ್ಟದಲ್ಲಿ ದೊಡ್ಡ ರಾಷ್ಟ್ರಗಳ ನಡುವೆ ಪೈಪೋಟಿ ನಡೆಯುತ್ತಿರುವ ಈ ಸಮಯದಲ್ಲಿ ಮಧ್ಯಮ ಮತ್ತು ಉದಯೋನ್ಮುಖ ದೇಶಗಳು ತಮ್ಮ ವ್ಯಾಪಾರ, ರಾಜಕೀಯ ಮತ್ತು ಭದ್ರತಾ ಪಾಲುದಾರಿಕೆಯನ್ನು ವೈವಿಧ್ಯಗೊಳಿಸಲು ಸಕ್ರಿಯವಾಗಿ ಪ್ರಯತ್ನಿಸುತ್ತಿವೆ. ಈ ಹಿನ್ನೆಲೆಯಲ್ಲಿ ಭಾರತ ಮತ್ತು ಕೆನಡಾ ಕೇವಲ ಸಂಬಂಧವನ್ನು ಸುಧಾರಿಸಿಕೊಳ್ಳುತ್ತಿಲ್ಲ. ಬದಲಿಗೆ ವಿಸ್ತೃತ ಬಾಂಧವ್ಯವನ್ನು ಬೆಳೆಸಿಕೊಳ್ಳುತ್ತಿವೆ.

ಎರಡೂ ದೇಶಗಳು ಪ್ರಸ್ತುತ ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದದ ಕುರಿತು ಮಾತುಕತೆ ನಡೆಸುತ್ತಿದ್ದು, ಇದುವರೆಗೆ ಐದು ಸುತ್ತಿನ ಮಾತುಕತೆ ನಡೆಸಿವೆ. 2025 ರಲ್ಲಿ 13.6 ಬಿಲಿಯನ್ ಡಾಲರ್ ಆಗಿದ್ದ ದ್ವಿಪಕ್ಷೀಯ ವ್ಯವಹಾರವನ್ನು ಮತ್ತಷ್ಟು ಹೆಚ್ಚಿಸಿ 2026 ರ ವೇಳೆಗೆ ಮುಕ್ತ ವ್ಯಾಪಾರ ಒಪ್ಪಂದವನ್ನು ಮಾಡಿಕೊಳ್ಳುವ ಗುರಿಯನ್ನು ಎರಡೂ ದೇಶಗಳು ಹೊಂದಿವೆ.

**ಕೆನಡಾ–ಭಾರತ ಸಂಬಂಧಗಳಲ್ಲಿ ಗಮನಾರ್ಹ ಬದಲಾವಣೆ:** ಕಳೆದ 8 ತಿಂಗಳಲ್ಲಿ, ಎರಡೂ ಕಡೆಯವರು ವಿವಿಧ ಹಂತಗಳಲ್ಲಿ ಹಲವಾರು ಭೇಟಿಗಳನ್ನು ವಿನಿಮಯ ಮಾಡಿಕೊಂಡಿದ್ದಾರೆ. "ಕಳೆದ ವರ್ಷದಿಂದ ಕೆನಡಾ–ಭಾರತ ಸಂಬಂಧಗಳಲ್ಲಿ ಗಮನಾರ್ಹವಾದ ಸಕಾರಾತ್ಮಕ ಆವೇಗವನ್ನು ನಾವು ಕಂಡಿದ್ದೇವೆ ಎಂದು ನಾನು ಭಾವಿಸುತ್ತೇನೆ. ವಿಶೇಷವಾಗಿ ಗಮನಾರ್ಹವಾದ ವಿಷಯವೆಂದರೆ ಪ್ರಗತಿಯು ಈಗ ಒಂದೇ ಸಮಯದಲ್ಲಿ ಹಲವಾರು ಹಳಿಗಳಲ್ಲಿ ನಡೆಯುತ್ತಿದೆ" ಎಂದು ಕೆನಡಾದ ಸಾರ್ವಜನಿಕ ನೀತಿ ಚಿಂತಕರ ಚಾವಡಿಯಾದ ಸೆಂಟರ್ ಫಾರ್ ಸ್ಟ್ರಾಟೆಜಿಕ್ ಸ್ಟಾಟ್‌ಕ್ರಾಫ್ಟ್‌ನ ಸಹ ಸಂಸ್ಥಾಪಕಿ ಮತ್ತು ಸಿಇಒ ವಿನಾ ನಡ್ಜಿಬುಲ್ಲಾ ಪತ್ರಿಕೆಗೆ ತಿಳಿಸಿದರು.

#### ಜಸ್ಟಿನ್ ಟ್ರುಡೊ ನಿರ್ಗಮನ ಬಳಿಕ ಬದಲಾದ ಚಿತ್ರಣ

ಈ ಎಲ್ಲಾ ಬೆಳವಣಿಗೆಗಳು ಹಿಂದಿನ ಕಹಿ ಘಟನೆಗಳನ್ನು ಮರೆತು ಮುಂದೆ ಸಾಗುವ ಸೂಚನೆ. 2023 ಮತ್ತು 2024 ರ ನಡುವೆ ಕೆನಡಾದ ಮಾಜಿ ಪ್ರಧಾನಿ ಜಸ್ಟಿನ್ ಟ್ರುಡೊ ಅವರ ಅವಧಿಯಲ್ಲಿ ಉಭಯ ದೇಶಗಳ ನಡುವಿನ ಸಂಬಂಧ ತೀವ್ರ ಕುಸಿದಿತ್ತು. ಕೆನಡಾದಲ್ಲಿ ಗುರುದ್ವಾರದ ಹೊರಗೆ ಗುಂಡು ಹಾರಿಸಿ ಕೊಲ್ಲಲ್ಪಟ್ಟ ಸಿಖ್ ಪ್ರತ್ಯೇಕತಾವಾದಿ ಹರ್ದೀಪ್ ಸಿಂಗ್ ನಿಜ್ಜರ್ ಅವರ ಹತ್ಯೆಯಲ್ಲಿ ಭಾರತೀಯ ಅಧಿಕಾರಿಗಳ ಪಾತ್ರವಿದೆ ಎಂದು ಕೆನಡಾ ಸರ್ಕಾರ ಆರೋಪಿಸಿತ್ತು. ಆದರೆ, ಭಾರತ ಇದನ್ನು ನಿರಾಕರಿಸಿತ್ತು. 2024 ರಲ್ಲಿ ಆಗಿನ ಭಾರತೀಯ ಹೈಕಮಿಷನರ್ ಅವರನ್ನು ಪ್ರಕರಣದಲ್ಲಿ ಶಂಕಾಸ್ಪದ ವ್ಯಕ್ತಿ ಎಂದು ಹೆಸರಿಸಿದಾಗ ವಿವಾದ ಉಲ್ಬಣಗೊಂಡಿತ್ತು. ಇದರ ಪರಿಣಾಮವಾಗಿ ಎರಡೂ ಕಡೆಯ ಉನ್ನತ ರಾಜತಾಂತ್ರಿಕರನ್ನು ಹೊರಹಾಕಲಾಯಿತು. ವ್ಯಾಪಾರ ಮಾತುಕತೆಗಳು ಮತ್ತು ವೀಸಾ ವಿತರಣೆಯಲ್ಲಿ ಸ್ವಲ್ಪ ಸಮಯದವರೆಗೆ ಸ್ಥಗಿತಗೊಂಡಿತು.

## ಮಿನಿ ನ್ಯೂಸ್

### ಅಮೆರಿಕದಲ್ಲಿ 5 ವರ್ಷದಲ್ಲಿ 15 ಸಾವಿರ ಉದ್ಯೋಗಿಗಳ ನೇಮಕ

**ನವದೆಹಲಿ:** ಸ್ಥಳೀಯ ಉದ್ಯೋಗಿಗಳ ಸಂಖ್ಯೆಯನ್ನು ಹೆಚ್ಚಿಸುವ ಉದ್ದೇಶದಿಂದ ಮುಂದಿನ 5 ವರ್ಷಗಳಲ್ಲಿ ಅಮೆರಿಕದಲ್ಲಿ ಇನ್ನೂ 15,000 ಉದ್ಯೋಗಿಗಳನ್ನು ನೇಮಿಸಿಕೊಳ್ಳುವುದಾಗಿ ಭಾರತದ ಪ್ರಮುಖ ಐಟಿ ಕಂಪನಿ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ ಶುಕ್ರವಾರ ಪ್ರಕಟಿಸಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೇತೃತ್ವದ ಆಡಳಿತವು 'ಗ್ರೀನ್ ಕಾರ್ಡ್' ಒದಗಿಸಿ ಕೊಡುವ (ಶಾಶ್ವತ ಕಾರ್ಮಿಕ ಪ್ರಮಾಣೀಕರಣ ಕಾರ್ಯಕ್ರಮ–PERM) ಯೋಜನೆಯಿಂದ ಐಟಿ ಕಂಪನಿಗಳನ್ನು ಅಮಾನತುಗೊಳಿಸಿದ ಬೆನ್ನಲ್ಲೇ ಟಿಸಿಎಸ್ ಈ ಹೇಳಿಕೆ ನೀಡಿದೆ.

#### ಗ್ರೀನ್ ಕಾರ್ಡ್ ಅಮಾನತು ಬೆನ್ನಲ್ಲೇ ಟಿಸಿಎಸ್ ಪ್ರಕಟಣೆ

ವಾರ್ಷಿಕವಾಗಿ ಅನುಮೋದನೆಗೊಳ್ಳುವ ಎಲ್ಲ H-1B ಅರ್ಜಿಗಳಲ್ಲಿ ಭಾರತೀಯ ವೃತ್ತಿಪರರೇ ಶೇಕಡಾ 70 ಕ್ಕಿಂತ ಹೆಚ್ಚಿದ್ದಾರೆ ಎಂಬುದು ಗಮನಾರ್ಹ. ಅಮೆರಿಕದಲ್ಲಿನ ಗ್ರೀನ್ ಕಾರ್ಡ್ ಕಾರ್ಯಕ್ರಮದಿಂದ ಅಮಾನತು ಕುರಿತು ಪ್ರತಿಕ್ರಿಯಿಸಿದ ಟಿಸಿಎಸ್, "ಸ್ಥಳೀಯ ಪ್ರತಿಭೆಗಳನ್ನು ನೇಮಿಸಿಕೊಳ್ಳುವುದಕ್ಕೆ ನಾವು ಆದ್ಯತೆ ನೀಡಿದ್ದು, ಇದಕ್ಕಾಗಿ ಕ್ಯಾಂಪಸ್ ಸೆಲೆಕ್ಷನ್ ಮಾಡುತ್ತಿದ್ದೇವೆ" ಎಂದು ತಿಳಿಸಿದೆ. "ಕಳೆದ ಎರಡು ವರ್ಷಗಳಲ್ಲಿ ನಮ್ಮ US PERM ಅರ್ಜಿಗಳ ಸಂಖ್ಯೆ ಒಂದಂಕಿಯಲ್ಲೇ ಇದ್ದು, ನಮ್ಮ ಉದ್ಯೋಗಿ ನೇಮಕಾತಿ ತಂತ್ರ ಮತ್ತು ಗ್ರಾಹಕರೊಂದಿಗಿನ ವ್ಯವಹಾರಗಳ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. ಅಮೆರಿಕ ಕಾರ್ಮಿಕ ಇಲಾಖೆಯ ಎಲ್ಲಾ ನಿರ್ದೇಶನವನ್ನು ಪಾಲಿಸುತ್ತೇವೆ" ಶಾಶ್ವತ ಕಾರ್ಮಿಕ ಪ್ರಮಾಣೀಕರಣ ಕಾರ್ಯಕ್ರಮ ಅಮಾನತು ಕುರಿತು ಐಟಿ ದಿಗ್ಗಜ ಕಂಪನಿ ಪ್ರತಿಕ್ರಿಯೆ ನೀಡಿದೆ.

### ಪೈಲಟ್ ಸ್ಮಿತ್ ಮಚ್ಚರ್‌ಗೆ ಇಸ್ರೇಲ್‌ನ ಅಧ್ಯಕ್ಷೀಯ ಪ್ರಶಸ್ತಿ

**ನವದೆಹಲಿ:** ಫ್ಲೈದುಬೈ ವಿಮಾನದಲ್ಲಿ ನಡೆದ ಅಪಹರಣದ ಯತ್ನವನ್ನು ತಡೆಗಟ್ಟಿ ವಿಮಾನದಲ್ಲಿದ್ದ 170ಕ್ಕೂ ಹೆಚ್ಚು ಜನರ ಪ್ರಾಣ ಉಳಿಸಿದ ಭಾರತೀಯ ಪೈಲಟ್ ಕ್ಯಾಪ್ಟನ್ ಸ್ಮಿತ್ ಮಚ್ಚರ್ ಅವರ ಅಸಾಧಾರಣ ಧೈರ್ಯಕ್ಕಾಗಿ ಅವರಿಗೆ ಇಸ್ರೇಲ್‌ನ ಅಧ್ಯಕ್ಷೀಯ ಪ್ರಶಸ್ತಿಯನ್ನು ನೀಡಲಾಗುವುದು ಎಂದು ಇಸ್ರೇಲ್ ಅಧ್ಯಕ್ಷ ಐಸಾಕ್ ಹರ್ಜೋಗ್ ಘೋಷಿಸಿದ್ದಾರೆ. ಇಸ್ರೇಲ್‌ನ ಸರ್ಕಾರಿ ಪತ್ರಿಕಾ ಕಚೇರಿಯ ಪ್ರಕಾರ, ಕಳೆದ ವಾರ ಫ್ಲೈದುಬೈ ವಿಮಾನ FZ1073 ಅನ್ನು ಪತನಗೊಳಿಸುವ ಸಂಭಾವ್ಯ ಪ್ರಯತ್ನವನ್ನು ವಿಫಲಗೊಳಿಸಲು ಸಹಾಯ ಮಾಡಿದ ಆರು ಇಸ್ರೇಲಿ ಪ್ರಯಾಣಿಕರಿಗೆ 'ನಾಗರಿಕ ಸಾಹಸಕ್ಕಾಗಿ ಅಧ್ಯಕ್ಷೀಯ ಪದಕ' ಪ್ರದಾನ ಮಾಡುವ ಸಂದರ್ಭದಲ್ಲಿ ಹರ್ಜೋಗ್ ಈ ಘೋಷಣೆ ಮಾಡಿದ್ದಾರೆ. ಪ್ರಶಸ್ತಿ ಸ್ವೀಕರಿಸಿದವರನ್ನು ಉದ್ದೇಶಿಸಿ ಮಾತನಾಡಿದ ಹರ್ಜೋಗ್, ಇಂದು ನಾವು ಗೌರವಿಸುತ್ತಿರುವ ಇಸ್ರೇಲಿ ವೀರರೊಂದಿಗೆ ಭಾರತದ ಕ್ಯಾಪ್ಟನ್ ಸ್ಮಿತ್ ಮಚ್ಚರ್, ಸಂಪೂರ್ಣವಾಗಿ ಮತ್ತು ಶೀಘ್ರವಾಗಿ ಚೇತರಿಸಿಕೊಳ್ಳಲಿ ಎಂದು ನಾವು ಹೃತ್ಪೂರ್ವಕವಾಗಿ ಹಾರೈಸುತ್ತೇವೆ. ಕ್ಯಾಪ್ಟನ್ ಮಚ್ಚರ್ ಅವರ ಅಪಾರ ಧೈರ್ಯ ಮತ್ತು ವೃತ್ತಿಪರತೆಯು ಈ ದುರಂತವನ್ನು ತಪ್ಪಿಸಲು ಸಹಾಯ ಮಾಡಿತು. ಅವರು ಚೇತರಿಸಿಕೊಂಡ ನಂತರ, ಇಸ್ರೇಲ್ ಜನರ ಪರವಾಗಿ ಅವರಿಗೆ 'ನಾಗರಿಕ ಸಾಹಸಕ್ಕಾಗಿ ಇಸ್ರೇಲ್‌ನ ಅಧ್ಯಕ್ಷೀಯ ಪ್ರಶಸ್ತಿ' ನೀಡಿ ಗೌರವಿಸಲಾಗುವುದು. ಇದು ನನಗೆ ಗೌರವ ಮತ್ತು ಸೌಭಾಗ್ಯದ ವಿಷಯವಾಗಿರುತ್ತದೆ ಎಂದೂ ಹೇಳಿದ್ದಾರೆ.

### ಉಕ್ರೇನ್‌ನ ಸಾರ್ವಜನಿಕ ಬಸ್‌ಗಳ ಮೇಲೆ ರಷ್ಯಾದ ದಾಳಿ: 30 ಮಂದಿ ಸಾವು, ಕೀವ್ ನಲ್ಲಿ ವಿದ್ಯುತ್ ಕಡಿತ, ಕಗ್ಗತ್ತಲು

**ಕೀವ್:** ಪೂರ್ವ ಉಕ್ರೇನ್‌ನಲ್ಲಿ ಪ್ರಯಾಣಿಕರಿಂದ ತುಂಬಿದ್ದ ಸಾರ್ವಜನಿಕ ಬಸ್‌ಗಳ ಬಳಿ ರಷ್ಯಾದ ನಿರ್ದೇಶಿತ ಬಾಂಬ್ ಸ್ಫೋಟಗೊಂಡಿದ್ದು, 30 ಮಂದಿ ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ. ಈ ದಾಳಿಯು ರಾಜಧಾನಿಯಲ್ಲಿ ವಿದ್ಯುತ್ ಕಡಿತದ ಸಮಸ್ಯೆಯೂ ಉಲ್ಬಣಗೊಂಡಿದೆ. ಉಕ್ರೇನ್‌ನ ಡೊನೆಟ್ಸ್ಕ್ ಪ್ರದೇಶದ ಯುದ್ಧಪೀಡಿತ ನಗರವಾದ ಕ್ರಮಾಟೋರ್ಸ್ಕ್‌ನಲ್ಲಿರುವ ಬಸ್ ನಿಲ್ದಾಣವೊಂದರ ಬಳಿ ಈ ಬೆಳಗಿನ ವೇಳೆ ದಾಳಿ ನಡೆದಿದ್ದು, ಆ ಪ್ರದೇಶದಲ್ಲಿ ಸಾರ್ವಜನಿಕ ಸಾರಿಗೆಯನ್ನು ಸ್ಥಗಿತಗೊಳಿಸಲಾಗಿದೆ.




ರಷ್ಯಾವು ನಾಗರಿಕರನ್ನೇ ಗುರಿಯಾಗಿಸುತ್ತಿದೆ ಎಂಬುದರಲ್ಲಿ ಸಂಶಯವಿಲ್ಲ ಎಂದು ನಗರದ ಮಿಲಿಟರಿ ಆಡಳಿತದ ಮುಖ್ಯಸ್ಥ ಒಲೆಕ್ಸಾಂಡರ್ ಹೊಂಚರೆಂಕೊ ಹೇಳಿದ್ದಾರೆ. ಸಣ್ಣ ಡ್ರೋನ್‌ಗಳನ್ನು ಬಳಸಿಕೊಂಡು ರಷ್ಯಾ ನಡೆಸಿದ ದಾಳಿಗಳಿಂದಾಗಿ ರಕ್ಷಣಾ ಕಾರ್ಯಗಳಿಗೆ ಅಡಚಣೆಯಾಗಿದೆ ಎಂದೂ ಅವರು ತಿಳಿಸಿದ್ದಾರೆ. ಉಕ್ರೇನ್ ವಿರುದ್ಧ ರಷ್ಯಾ ಕಳೆದ ನಾಲ್ಕೂವರೆ ವರ್ಷಗಳಿಂದ ದಾಳಿ ಮಾಡುತ್ತಲೇ ಇದೆ. ಇದಕ್ಕೆ ಉಕ್ರೇನ್ ಪ್ರತಿ ದಾಳಿ ಮುಂದುವರಿಸಿದೆ. ಉಭಯ ದೇಶಗಳ ನಡುವಣ ಈ ಸಮರಕ್ಕೆ ಕೊನೆ ಇಲ್ಲ ಎಂಬಂತಾಗಿದೆ. ಚಳಿಗಾಲಕ್ಕೆ ಸಿದ್ಧವಾಗುತ್ತಿರುವ ಉಕ್ರೇನ್ ಮೇಲೆ ರಷ್ಯಾ ದಾಳಿಯನ್ನು ತೀವ್ರಗೊಳಿಸಿದ್ದ ತೀವ್ರ ಒತ್ತಡ ಹೇರುತ್ತಿದೆ. ಉಕ್ರೇನ್‌ನ ಮೂಲಸೌಕರ್ಯಗಳನ್ನು ಗುರಿಯಾಗಿಸಿಕೊಂಡು ರಷ್ಯಾ ಇತ್ತೀಚಿನ ವಾರಗಳಲ್ಲಿ ತನ್ನ ವೈಮಾನಿಕ ದಾಳಿಯನ್ನು ತೀವ್ರಗೊಳಿಸಿದೆ. ಇತ್ತೀಚಿನ ದಾಳಿಗಳಲ್ಲಿ ಇಂಧನ ವ್ಯವಸ್ಥೆಗಳು, ಪ್ರಮುಖ ಕೈಗಾರಿಕೆಗಳು, ರೈಲುಮಾರ್ಗಗಳು, ಅಂಚೆ ಕಚೇರಿಗಳು, ಶಾಪಿಂಗ್ ಕೇಂದ್ರಗಳು, ದೂರಸಂಪರ್ಕ ಜಾಲಗಳು, ಇಂಧನ ಕೇಂದ್ರಗಳು ಮತ್ತು ಧಾನ್ಯ ರಫ್ತು ಕೇಂದ್ರಗಳನ್ನು ಗುರಿಯಾಗಿಸಿಕೊಂಡು ದಾಳಿ ಮಾಡಲಾಗುತ್ತಿದೆ.

### ಭಾರತೀಯ ಮೂಲದ ನ್ಯಾಯತಜ್ಞೆ ನವನೀಥಂ 'ನವಿ' ಪಿಳ್ಳೈ ಅವರಿಗೆ 2026ರ ನೊಬೆಲ್ ಶಾಂತಿ ಪ್ರಶಸ್ತಿ

**ತಮಿಳುನಾಡು:** ಭಾರತೀಯ ತಮಿಳು ಮೂಲದ ಖ್ಯಾತ ದಕ್ಷಿಣ ಆಫ್ರಿಕಾದ ನ್ಯಾಯತಜ್ಞೆ ನವನೀಥಂ 'ನವಿ' ಪಿಳ್ಳೈ ಅವರಿಗೆ 2026ನೇ ಸಾಲಿನ ನೊಬೆಲ್ ಶಾಂತಿ ಪ್ರಶಸ್ತಿಯನ್ನು ನೀಡಲಾಗಿದೆ. ಶಾಂತಿ ಮತ್ತು ಅಂತಾರಾಷ್ಟ್ರೀಯ ಕಾನೂನನ್ನು ಉತ್ತೇಜಿಸುವ ನಿಟ್ಟಿನಲ್ಲಿನ ಅವರ ಸೇವೆಯನ್ನು ಪರಿಗಣಿಸಿ ಈ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ. ಪಿಳ್ಳೈ ಅವರು ದಶಕಗಳಿಂದ ಸಾರ್ವತ್ರಿಕ ಕಾನೂನು ತತ್ವಗಳು, ಮಾನವ ಹಕ್ಕುಗಳು ಮತ್ತು ನ್ಯಾಯಕ್ಕಾಗಿ ತೋರಿರುವ ಬದ್ಧತೆಯನ್ನು ಪರಿಗಣಿಸಿ, ನಾರ್ವೆಯ ಓಸ್ಲೋದಲ್ಲಿ ಶುಕ್ರವಾರ ನಾರ್ವೇಜಿಯನ್ ನೊಬೆಲ್ ಸಮಿತಿಯು ಈ ಪ್ರಶಸ್ತಿಯನ್ನು ಘೋಷಿಸಿದೆ. "ಶಾಂತಿ ಮತ್ತು ಅಂತಾರಾಷ್ಟ್ರೀಯ ಕಾನೂನನ್ನು ಉತ್ತೇಜಿಸುವ ನಿಟ್ಟಿನಲ್ಲಿ ನವನೀಥಂ 'ನವಿ' ಪಿಳ್ಳೈ ಅವರು ಮಾಡಿದ ಪ್ರಯತ್ನಗಳಿಗಾಗಿ, 2026ರ ನೊಬೆಲ್ ಶಾಂತಿ ಪ್ರಶಸ್ತಿಯನ್ನು ಅವರಿಗೆ ನೀಡಲು ನಾರ್ವೇಜಿಯನ್ ನೊಬೆಲ್ ಸಮಿತಿಯು ನಿರ್ಧರಿಸಿದೆ" ಎಂದು ಅಧಿಕೃತ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಅಧಿಕೃತ ಹೇಳಿಕೆಯ ಪ್ರಕಾರ, ಈ ವರ್ಷದ ಪ್ರಶಸ್ತಿ ವಿಜೇತೆ ನವಿ ಪಿಳ್ಳೈ ಅವರು ತಮ್ಮ ಸುದೀರ್ಘ ವೃತ್ತಿಜೀವನದಲ್ಲಿ ಸಾರ್ವತ್ರಿಕ ಕಾನೂನು ತತ್ವಗಳಿಗೆ ಬದ್ಧತೆ ಮತ್ತು ದೃಢವಾದ ನೈತಿಕ ದಿಕ್ಸೂಚಿಯನ್ನು ಅಳವಡಿಸಿಕೊಂಡಿದ್ದರು ಎಂದು ವಿವರಿಸಲಾಗಿದೆ. ದಕ್ಷಿಣ ಆಫ್ರಿಕಾದ ಡರ್ಬನ್‌ನಲ್ಲಿ ವರ್ಣಭೇದ ನೀತಿಯ ಸಂದರ್ಭದಲ್ಲಿ ಭಾರತೀಯ ತಮಿಳು ಮೂಲದ ಕುಟುಂಬದಲ್ಲಿ ಜನಿಸಿದ ಪಿಳ್ಳೆ ಅವರು ವಕೀಲೆ ಮತ್ತು ಕಾನೂನು ಪ್ರವರ್ತಕರಾಗಿ ಹೊರಹೊಮ್ಮಿದರು. ಅಲ್ಲಿ ಆಳವಾಗಿ ಬೇರೂರಿದ್ದ ತಾರತಮ್ಯ, ಪ್ರತ್ಯೇಕತೆ ಮತ್ತು ಬಹಿಷ್ಕಾರದ ಪರಿಸ್ಥಿತಿಯನ್ನು ಅವರು ಎದುರಿಸಿದರು. ವರ್ಣಭೇದ ನೀತಿಯ ವಿರುದ್ಧ ಎದ್ದುನಿಂತ ನೆಲ್ಸನ್ ಮಂಡೇಲಾ ಮತ್ತು ಇತರರನ್ನು ಸಮರ್ಥಿಸುವ ಅವರ ಆರಂಭಿಕ ಕಾರ್ಯದಿಂದ ಹಿಡಿದು, ಈಗಿನ ಕಾಲದ ಕೆಲವು ಪ್ರಮುಖ ಅಂತಾರಾಷ್ಟ್ರೀಯ ನ್ಯಾಯಾಲಯದ ಪ್ರಕರಣಗಳಲ್ಲಿ ನ್ಯಾಯಾಧೀಶರಾಗಿ ಅವರು ಸೇವೆ ಸಲ್ಲಿಸಿರುವುದು ಗಮನಾರ್ಹವಾಗಿದೆ.






## ಬ್ರಿಟಿಷರ ವಿರುದ್ಧ 'ರಣಬಾಲಿ'ಯಾಗಿ ವಿಜಯ್ ಅಬ್ಬರ

ದಕ್ಷಿಣ ಚಿತ್ರರಂಗದ ಖ್ಯಾತ ಸೆಲೆಬ್ರಿಟಿ ದಂಪತಿ ವಿಜಯ್ ದೇವರಕೊಂಡ ಮತ್ತು ರಶ್ಮಿಕಾ ಮಂದಣ್ಣ ಮುಖ್ಯಭೂಮಿಕೆಯ ಮುಂಬರುವ ಬಹುನಿರೀಕ್ಷಿತ 'ರಣಬಾಲಿ' ಚಿತ್ರದ ಟ್ರೇಲರ್ ಗುರುವಾರ ಸಂಜೆ ಅನಾವರಣಗೊಂಡಿದೆ. ರಾಹುಲ್ ಸಂಕೃತ್ಯಾನ್ ನಿರ್ದೇಶನದ ನೈಜ ಘಟನೆಯಾಧಾರಿತ ಚಿತ್ರದ 4 ನಿಮಿಷಗಳ ಟ್ರೇಲರ್ , ತಮ್ಮ ಗ್ರಾಮವು ಭೀಕರ ಬರಗಾಲವನ್ನು ಎದುರಿಸುತ್ತಿರುವಾಗ ಬ್ರಿಟಿಷ್ ಆಳ್ವಿಕೆಯ ವಿರುದ್ಧ ದನಿ ಎತ್ತುವ ನಿರ್ಭೀತ ಯೋಧನಾಗಿ ವಿಜಯ್ ದೇವರಕೊಂಡ ಅವರನ್ನು ಪರಿಚಯಿಸಿದೆ.

### ದೇವರಕೊಂಡ ಜೊತೆ ರಶ್ಮಿಕಾ ರೊಮ್ಯಾನ್ಸ್

1870ರ ದಶಕದ ದಕ್ಷಿಣ ಭಾರತದ ಹಿನ್ನೆಲೆಯನ್ನು ಹೊಂದಿರುವ 'ರಣಬಾಲಿ', ದೇಶದ ಹಲವು ಭಾಗಗಳು ಬ್ರಿಟಿಷರ ನಿಯಂತ್ರಣದಲ್ಲಿದ್ದ ಕಾಲಕ್ಕೆ ವೀಕ್ಷಕರನ್ನು ಕರೆದೊಯ್ಯುತ್ತದೆ. ಜಾನಪದ ಕಥೆಗಳು, ಕೌಟುಂಬಿಕ ಕ್ಷಣಗಳು ಮತ್ತು ಬೃಹತ್ ಮಟ್ಟದ ಆಕ್ಷನ್ ದೃಶ್ಯಗಳ ಸಮ್ಮಿಲನವಾಗಿರುವ ಟ್ರೇಲರ್, ತನ್ನ ಜನರ ಪಾಲಿಗೆ ಭರವಸೆಯ ಬೆಳಕಾಗುವ ವ್ಯಕ್ತಿಯೊಬ್ಬನ ಕಥೆಯನ್ನು ಚಿತ್ರಿಸಿದೆ.

ರಣಬಾಲಿ ಕಥೆಯನ್ನು ನಿರೂಪಿಸುವ ಸಾಂಪ್ರದಾಯಿಕ ಜಾನಪದ ಪ್ರದರ್ಶನದೊಂದಿಗೆ ಟ್ರೇಲರ್ ಆರಂಭವಾಗುತ್ತದೆ. ವಿಶೇಷ ಭವಿಷ್ಯವನ್ನು ಹೊಂದಿರುವ ವ್ಯಕ್ತಿಯಾಗಿ ನಾಯಕನನ್ನು ಇಲ್ಲಿ ಚಿತ್ರಿಸಲಾಗಿದೆ ಮತ್ತು ಆತನ ಕಥೆಯು ತಲೆಮಾರುಗಳಿಂದಲೂ ಸದ್ದು ಮಾಡುತ್ತಾ ಬಂದಿದೆ. ಟ್ರೇಲರ್ ಮುಂದುವರೆದಂತೆ, ವೀಕ್ಷಕರಿಗೆ ಆತ ವಾಸಿಸುವ ಗ್ರಾಮ ಹಾಗೂ ಅಲ್ಲಿನ ಜನರು ಎದುರಿಸುತ್ತಿರುವ ಸಮಸ್ಯೆಗಳ ಪರಿಚಯವಾಗುತ್ತದೆ.

ಗ್ರಾಮಸ್ಥರನ್ನು ಬ್ರಿಟಿಷರಿಗಾಗಿ ದುಡಿಯುವಂತೆ ಒತ್ತಾಯಿಸಲಾಗುತ್ತದೆ. ಆದ್ರೆ ಬ್ರಿಟಿಷರು ಅವರೊಂದಿಗೆ ನ್ಯಾಯಯುತವಾಗಿ ನಡೆದುಕೊಳ್ಳುವುದಿಲ್ಲ. ಈ ಹಿನ್ನೆಲೆ, ರಣಬಾಲಿ ಬ್ರಿಟಿಷರ ಅಧಿಕಾರವನ್ನು ಪ್ರಶ್ನಿಸಲು ಪ್ರಾರಂಭಿಸುತ್ತಾನೆ. ತನ್ನ ಭೂಮಿ ಮತ್ತು ಅಲ್ಲಿನ ಜನರ ಮೇಲೆ ನಿಯಂತ್ರಣ ಸಾಧಿಸುವ ಹಕ್ಕು ಹೊರಗಿನವರಿಗೆ ಏಕೆ ಇದೆ ಎಂದು ಯೋಚಿಸುತ್ತಾನೆ. ಅವನ ಈ ಪ್ರಶ್ನೆಗಳು ಅಂತಿಮವಾಗಿ ಅವನನ್ನು ಒಂದು ದೊಡ್ಡ ಹೋರಾಟದತ್ತ ಕೊಂಡೊಯ್ಯುತ್ತವೆ.

ವಿಜಯ್ ಅವರ ಪಾತ್ರವನ್ನು ಯುದ್ಧಭೂಮಿಯ ಹೊರತಾಗಿಯೂ ತೋರಿಸಲಾಗಿದೆ. ರಶ್ಮಿಕಾ ನಿರ್ವಹಿಸಿರುವ ಜಯಮ್ಮ ಅವರೊಂದಿಗೆ ಅವರು ದಾಂಪತ್ಯ ಜೀವನವನ್ನು ನಡೆಸುತ್ತಿರುತ್ತಾರೆ. ಟ್ರೇಲರ್‌ನಲ್ಲಿ ಈ ದಂಪತಿ ನಡುವಿನ ಕೆಲ ಪ್ರೇಮಭರಿತ ಹಾಗೂ ಸಂತೋಷದ ಕ್ಷಣಗಳನ್ನು ಕಾಣಬಹುದು. ಆದರೆ, ಅವರ ಈ ನೆಮ್ಮದಿಯ ಜೀವನ ಹೆಚ್ಚು ಕಾಲ ಉಳಿಯುವುದಿಲ್ಲ. ಆ ಪ್ರದೇಶದಲ್ಲಿ ತೀವ್ರ ಬರಗಾಲ ಉಂಟಾಗಿ, ಗ್ರಾಮಸ್ಥರು ಆಹಾರ ಮತ್ತು ಬದುಕುಳಿಯುವಿಕೆಗಾಗಿ ಪರದಾಡುವಂತಾಗುತ್ತದೆ.

ಪರಿಸ್ಥಿತಿ ಹದಗೆಡುತ್ತಿದ್ದಂತೆ, ರಣಬಾಲಿ ಹೋರಾಡಲು ನಿರ್ಧರಿಸುತ್ತಾನೆ. ತನ್ನ ಜನರ ಜವಾಬ್ದಾರಿಯನ್ನು ಹೊತ್ತುಕೊಂಡು, ಗ್ರಾಮಕ್ಕೆ ಸಂಕಷ್ಟ ತಂದವರ ವಿರುದ್ಧ ಹೋರಾಡಲು ಅವನು ಸಜ್ಜಾಗುವುದನ್ನು ಟ್ರೇಲರ್ ತೋರಿಸುತ್ತದೆ. ಅವನಿಗೆ ಎದುರಾಳಿಯಾಗಿ ನಿಲ್ಲುವ ಬ್ರಿಟಿಷ್ ಖಳನಾಯಕ 'ಸರ್ ಥಿಯೋಡರ್ ಹೆಕ್ಟರ್' ಪಾತ್ರವನ್ನು ಅರ್ನಾಲ್ಡ್ ವೋಸ್ಲೂ ನಿರ್ವಹಿಸಿದ್ದಾರೆ.

ಟ್ರೇಲರ್‌ನ ಅಂತಿಮ ಭಾಗಗಳು ವಿಜಯ್ ಅವರ ಭವ್ಯ ಆಕ್ಷನ್ ದೃಶ್ಯಗಳ ಭರವಸೆ ನೀಡುತ್ತವೆ. ಅವರ ನೋಟ ಮತ್ತು ಜಾನಪದ ಶೈಲಿಯ ನಿರೂಪಣೆಯು ಈಗಾಗಲೇ ಕೆಲ ವೀಕ್ಷಕರಿಗೆ 'ಕಾಂತಾರ', 'ಪುಷ್ಪ' ಮತ್ತು 'ಕರುಪ್ಪು'ದಂತಹ ಚಿತ್ರಗಳನ್ನು ನೆನಪಿಸಿದೆ. ಸಾಮಾಜಿಕ ಜಾಲತಾಣಗಳಲ್ಲಿಯೂ ವ್ಯಾಪಕ ಪ್ರತಿಕ್ರಿಯೆಗಳು ವ್ಯಕ್ತವಾಗಿದ್ದು, ಅಭಿಮಾನಿಯೊಬ್ಬರು, "ಇಷ್ಟೊಂದು ಅದ್ಭುತವಾಗಿ ಇದನ್ನು ರೂಪಿಸಲು ನಿರ್ಮಾಪಕರಿಗೆ ಅನುಮತಿ ನೀಡಿದವರು ಯಾರು? 'ರಣಬಾಲಿ' ಯಾರೂ ಕೇಳದಿದ್ದರೂ, ಎಲ್ಲರೂ ಬಯಸುವಂತಹ ಒಂದು ಪ್ರಬಲ ಶಕ್ತಿಯಂತೆ ಕಾಣುತ್ತಿದೆ" ಎಂದು ತಮ್ಮ ಅಭಿಪ್ರಾಯ ಹಂಚಿಕೊಂಡಿದ್ದಾರೆ. 'ಟ್ಯಾಕ್ಸಿವಾಲಾ' ನಂತರ ವಿಜಯ್ ಮತ್ತು ರಾಹುಲ್ ಸಂಕೃತ್ಯಾನ್ 'ರಣಬಾಲಿ' ಚಿತ್ರಕ್ಕಾಗಿ ಮತ್ತೆ ಕೈಜೋಡಿಸಿದ್ದಾರೆ. ಸುಮಾರು 8 ವರ್ಷಗಳ ಬಳಿಕ ವಿಜಯ್ ರಶ್ಮಿಕಾ ತೆರೆಮೇಲೆ ಮತ್ತೆ ಜೊತೆಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಮೈತ್ರಿ ಮೂವಿ ಮೇಕರ್ಸ್ ಮತ್ತು ಟಿ-ಸೀರೀಸ್ ನಿರ್ಮಿಸುತ್ತಿರುವ ಈ ಚಿತ್ರಕ್ಕೆ ಅಜಯ್-ಅತುಲ್ ಸಂಗೀತ ನೀಡಿದ್ದಾರೆ. ಈ ಚಿತ್ರವು ಅಕ್ಟೋಬರ್ 16ರಂದು ತೆಲುಗು, ಹಿಂದಿ, ತಮಿಳು, ಕನ್ನಡ ಮತ್ತು ಮಲಯಾಳಂ ಭಾಷೆಗಳಲ್ಲಿ ಬಿಡುಗಡೆಯಾಗಲಿದೆ.



## ಶಿವಣ್ಣನ 'A for ಆನಂದ್'ನಲ್ಲಿ ಟೀಚರ್ ಆಗಿ ಬಾಲಿವುಡ್ ಬೆಡಗಿ ರವೀನಾ ಟಂಡನ್: ಶೂಟಿಂಗ್ ಶುರು

90ರ ದಶಕದ ಬಹುಬೇಡಿಕೆಯ ತಾರೆ ರವೀನಾ ಟಂಡನ್ ಇತ್ತೀಚಿನ ವರ್ಷಗಳಲ್ಲಿ ಸಿನಿಮಾ ಆಯ್ಕೆಯಲ್ಲಿ ಬಹಳ ಬ್ಯೂಸಿಯಾಗಿದ್ದಾರೆ. ಆದರೆ ಅವರು ಕಾಣಿಸಿಕೊಳ್ಳೋ ಸಿನಿಮಾ, ಪಾತ್ರಗಳು ಸದ್ದು ಮಾಡದೇ ಇರೋದಿಲ್ಲ. ಅದರಂತೆ ಇದೀಗ ಮತ್ತೊಂದು ಮಹತ್ವದ ಪಾತ್ರದಲ್ಲಿ ಕಾಣಿಸಿಕೊಳ್ಳಲು ಸಜ್ಜಾಗಿದ್ದಾರೆ ಬಾಲಿವುಡ್ ಬೆಡಗಿ. ಅದು ಕೂಡಾ ಕನ್ನಡ ಸಿನಿಮಾದಲ್ಲಿ.

ಹೌದು, ಕರುನಾಡ ಚಕ್ರವರ್ತಿ ಶಿವರಾಜ್‌ಕುಮಾರ್ ಮುಖ್ಯಭೂಮಿಕೆಯ ಮುಂದಿನ ಬಹುನಿರೀಕ್ಷಿತ ಚಿತ್ರಗಳಲ್ಲಿ ಒಂದಾದ 'ಎ ಫಾರ್ ಆನಂದ್'ನ ತಾರಾಬಳಗಕ್ಕೆ ಸ್ಟಾರ್ ನಟಿ ರವೀನಾ ಟಂಡನ್ ಅವರ ಎಂಟ್ರಿಯಾಗಿದೆ. ಚಿತ್ರೀಕರಣ ಕೂಡಾ ಆರಂಭವಾಗಿದೆ. ನಟಿಯ ವಿಡಿಯೋ ಹಂಚಿಕೊಂಡ ಚಿತ್ರತಂಡ, "ವೆಲ್ಕಮಿಂಗ್ ನಮ್ಮ ಟೀಚರ್! ರವೀನಾ ಟಂಡನ್ 'ಎ ಫಾರ್ ಆನಂದ್' ಸೆಟ್‌ನಲ್ಲಿ, ಶೂಟ್ ಬಿಗಿನ್, ಅದೇ A for ಆನಂದ್" ಎಂದು ಬರೆದುಕೊಂಡಿದೆ.

ಕನ್ನಡ ಸಿನಿಮಾಗಳಿಗೆ ಬಂದರೆ ಬಾಲಿವುಡ್ ನಟಿ ರವೀನಾ ಟಂಡನ್ ಸದಾ ಅತ್ಯುತ್ತಮ ಅವಕಾಶಗಳನ್ನೇ ಪಡೆದಿದ್ದಾರೆ. 1999ರಲ್ಲಿ ಆರಂಭವಾದ ಅವರ ಕನ್ನಡ ಸಿನಿಮಾ ಪಯಣ ನಂತರ ರಾಕಿಂಗ್ ಸ್ಟಾರ್ ಯಶ್ ಮುಖ್ಯಭೂಮಿಕೆಯ ಕೆಜಿಎಫ್ ಚಾಪ್ಟರ್ 2 ಮೂಲಕ ಪ್ಯಾನ್ ಇಂಡಿಯಾ ಮಟ್ಟದಲ್ಲಿ ಮತ್ತೆ ಸದ್ದು ಮಾಡಿತು. ಈ ಎರಡೂ ಸಿನಿಮಾಗಳು ದೊಡ್ಡ ಮಟ್ಟದಲ್ಲಿ ಯಶಸ್ಸು ಕಂಡಿದ್ದು, ನಟಿಯ ಪಾತ್ರಗಳೂ ಗಮನ ಸೆಳೆಯುವಲ್ಲಿ ಸಕ್ಸಸ್ ಕಂಡಿವೆ. ಹಿಂದಿ ಚಿತ್ರರಂಗದಲ್ಲಿ ತಮ್ಮದೇ ಆದ ಬೇಡಿಕೆ ಹೊಂದಿರುವ ಈ ತಾರೆಯೀಗ ಕನ್ನಡದ ಖ್ಯಾತ ನಟ ಶಿವರಾಜ್‌ಕುಮಾರ್ ಮುಖ್ಯಭೂಮಿಕೆಯ 'ಎ ಫಾರ್ ಆನಂದ್' ಸಿನಿಮಾದಲ್ಲಿ ಶಿಕ್ಷಕಿಯ ಪಾತ್ರ ವಹಿಸಿದ್ದಾರೆ. ಶಿವಣ್ಣ ಕೂಡಾ ಶಿಕ್ಷಕ ಅನ್ನೋದು ನಿಮಗೆ ತಿಳಿದಿರುವ ವಿಚಾರವೇ.

ಉತ್ತರ ಮತ್ತು ದಕ್ಷಿಣದ ಇಬ್ಬರು ಖ್ಯಾತ ನಟ ನಟಿ ಇದೇ ಮೊದಲ ಬಾರಿಗೆ ತೆರೆಹಂಚಿಕೊಳ್ಳುತ್ತಿದ್ದು, ಸಹಜವಾಗಿ ನಿರೀಕ್ಷೆಗಳು ಮುಗಿಲೆತ್ತರದಲ್ಲಿವೆ. ಚಿತ್ರೀಕರಣ ಆರಂಭವಾಗಿದ್ದು, ನಟಿಯ ಒಂದು ಸಣ್ಣ ನೋಟವೂ ಪ್ರೇಕ್ಷಕರಿಗೆ ಲಭ್ಯವಾಗಿದೆ.

ಇತ್ತೀಚೆಗಷ್ಟೇ ಬೇಲ್ ಸಿನಿಮಾದಲ್ಲಿ ಕಾಣಿಸಿಕೊಂಡಿರುವ ಹ್ಯಾಟ್ರಿಕ್ ಹೀರೋನ ಕೈಯಲ್ಲಿ ಹಲವು ಯೋಜನೆಗಳಿವೆ. ರಜನಿಕಾಂತ್ ಮುಖ್ಯಭೂಮಿಕೆಯ ಜೈಲರ್ 2ನಲ್ಲಿ ಪ್ರಮುಖ ಪಾತ್ರ ವಹಿಸಿದ್ದು, ಶೀಘ್ರವೇ ಈ ಚಿತ್ರವೂ ಬಿಡುಗಡೆಯಾಗಲಿದೆ. ಈ ಹೊತ್ತಲ್ಲಿ 'ಎ ಫಾರ್ ಆನಂದ್' ಚಿತ್ರತಂಡ ಟಂಡನ್ ಎಂಟ್ರಿಯ ವಿಡಿಯೋ ಹಂಚಿಕೊಂಡು ಗಮನ ಸೆಳೆದಿದೆ.

ಇದೇ ವರ್ಷದ ಮೇ ತಿಂಗಳಲ್ಲಿ ಬೆಂಗಳೂರಿನ ಬಂಡೆ ಮಹಾಕಾಳಿ ದೇವಸ್ಥಾನದಲ್ಲಿ 'ಎ ಫಾರ್ ಆನಂದ್'ನ ಮುಹೂರ್ತ ಸಮಾರಂಭ ನೆರವೇರಿತು. ಗೀತಾ ಪಿಕ್ಚರ್ಸ್ ನಿರ್ಮಾಣದ ಸಿನಿಮಾಗೆ ನಿರ್ದೇಶಕ ಶ್ರೀನಿ ಆಕ್ಷನ್ ಕಟ್ ಹೇಳುತ್ತಿದ್ದಾರೆ. ಉಳಿದಂತೆ ಮಹೇನ್ ಸಿಂಹ ಛಾಯಾಗ್ರಹಣ, ದೀಪು ಎಸ್ ಕುಮಾರ್ ಸಂಕಲನ, ಪ್ರಸನ್ನ ವಿ.ಎಂ.ಡೈಲಾಗ್ಸ್, ವಾಸುಕಿ ವೈಭವ್ ಸಂಗೀತ ಈ ಸಿನಿಮಾಗಿರಲಿದೆ. ಎ ಫಾರ್ ಆನಂದ್ ಪಕ್ಕಾ ಫ್ಯಾಮಿಲಿ ಎಂಟರ್‌ಟೈನರ್ ಆಗಿ ಮೂಡಿಬರುತ್ತಿದ್ದು, ಅಭಿಮಾನಿಗಳು ಸಾಕಷ್ಟು ನಿರೀಕ್ಷೆಗಳನ್ನಿಟ್ಟುಕೊಂಡಿದ್ದಾರೆ.

ಇನ್ನು, ಶಿವರಾಜ್‌ಕುಮಾರ್ ಕೊನೆಯದಾಗಿ ಬೇಲ್ ಸಿನಿಮಾದಲ್ಲಿ ಕಾಣಿಸಿಕೊಂಡರು. ಪವನ್ ಒಡೆಯರ್ ನಿರ್ದೇಶನದ ಈ ಚಿತ್ರ ಅಕ್ಟೋಬರ್ 2ರಂದು ಅದ್ಧೂರಿಯಾಗಿ ಚಿತ್ರಮಂದಿರ ಪ್ರವೇಶಿಸಿತು. ಪ್ರೇಕ್ಷಕರಿಂದ ಸಕಾರಾತ್ಮಕ ಪ್ರತಿಕ್ರಿಯೆ ಪಡೆಯಿತಾದರೂ, ಬಾಕ್ಸ್ ಆಫೀಸ್‌ನಲ್ಲಿ ಸಾಧಾರಣ ಪ್ರದರ್ಶನ ಕಂಡಿದೆ. ಸಿನಿಮಾ ಇಂಡಸ್ಟ್ರಿ ಟ್ರ್ಯಾಕರ್ ಸ್ಯಾಕ್ನಿಲ್ಕ್ ವರದಿ ಪ್ರಕಾರ, ಬೇಲ್ ತನ್ನ 7 ದಿನಗಳ ಪ್ರದರ್ಶನಗಳಲ್ಲಿ ಒಟ್ಟು 5.02 ಕೋಟಿ ರೂಪಾಯಿ ಕಲೆಕ್ಷನ್ ಮಾಡಿದೆ.

# 2 ಕೋಟಿ ಬಜೆಟ್, 427 ಕೋಟಿ ಕಲೆಕ್ಷನ್

## 'ಹನುಮಾನ್ ಅಂಶ್'ನಂತೆ ದಾಖಲೆ ಬರೆಯುತ್ತಿದೆ ಕನ್ನಡದ 'ಪ್ರೇಮದ ಊರಲಿ'!

ಡಿವೋಶನಲ್ ಸಿನಿಮಾ 'ಹನುಮಾನ್ ಅಂಶ್' ಬಾಕ್ಸ್ ಆಫೀಸ್‌ನಲ್ಲಿ ದೊಡ್ಡ ಮೈಲಿಗಲ್ಲನ್ನು ಸಾಧಿಸಿರೋದು ನಿಮಗೆ ತಿಳಿದಿರುವ ವಿಚಾರವೇ. ಅದರಂತೆ ಇದೀಗ ಕನ್ನಡದ ಫ್ಯಾಮಿಲಿ ಡ್ರಾಮಾ 'ಪ್ರೇಮದ ಊರಲಿ' ಕಲೆಕ್ಷನ್ ವಿಚಾರದಲ್ಲಿ ರೆಕಾರ್ಡ್ ಕ್ರಿಯೇಟ್ ಮಾಡುತ್ತಿದೆ. 'ಹನುಮಾನ್ ಅಂಶ್'ನಂತೆಯೇ ಕೆಲ ದಿನಗಳಲ್ಲೇ ಸಾಗರೋತ್ತರ ಪ್ರದೇಶಗಳಲ್ಲಿಯೂ ಅದ್ದೂರಿಯಾಗಿ ಬಿಡುಗಡೆ ಆಗಿದೆ.

ಎರಡೂ ಸಿನಿಮಾಗಳು ತೆರೆಕಂಡ ದಿನ ಗಳಿಸಿದ್ದು ಕೇವಲ 10+ ಲಕ್ಷ ರೂಪಾಯಿ: ಸಿನಿಮಾ ಇಂಡಸ್ಟ್ರಿ ಟ್ರ್ಯಾಕರ್ ಸ್ಯಾಕ್ನಿಲ್ಕ್ ವರದಿ ಪ್ರಕಾರ, ಶೋಭಿನವ್ ಸತ್ಯ ಮುಖ್ಯಭೂಮಿಕೆಯ ಭಕ್ತಿಪ್ರಧಾನ ಸಿನಿಮಾ 'ಹನುಮಾನ್ ಅಂಶ್' ತೆರೆಕಂಡ ದಿನ ಗಳಿಸಿದ್ದು ಕೇವಲ 12 ಲಕ್ಷ (ಗ್ರಾಸ್) ರೂಪಾಯಿ. ಈ ಪೈಕಿ ನೆಟ್ ಕಲೆಕ್ಷನ್ 10 ಲಕ್ಷ ರೂಪಾಯಿ ಆಗಿತ್ತು. ಆದ್ರೆ, ಪ್ರೇಕ್ಷಕರ ಬಾಯ್ಮಾತಿನ ಪ್ರಚಾರದ ಮೂಲಕ ಕೆಲವೇ ದಿನಗಳಲ್ಲಿ ಚಿತ್ರದ ಗಳಿಕೆ ಕೋಟಿಗೆ ಜಿಗಿದು ನೂರಾರು ಕೋಟಿ ರೂಪಾಯಿಯ ವ್ಯವಹಾರ ನಡೆಸುವಲ್ಲಿ ಯಶಸ್ವಿಯಾಯಿತು.

ಅದರಂತೆ, ರಾಷ್ಟ್ರಪ್ರಶಸ್ತಿ ವಿಜೇತ ನಿರ್ದೇಶಕ ಮನೋಜ್ ಕುಮಾರ್ ಸಾರಥ್ಯದಲ್ಲಿ ಮೂಡಿ ಬಂದಿರುವ 'ಪ್ರೇಮದ ಊರಲಿ' ತೆರೆಕಂಡ ದಿನ ಗಳಿಸಿದ್ದು (ಗ್ರಾಸ್) ಕೇವಲ 10 ಲಕ್ಷ ರೂಪಾಯಿ. ಈ ಪೈಕಿ 9 ಲಕ್ಷ ರೂಪಾಯಿ ನೆಟ್ ಕಲೆಕ್ಷನ್ ಆಗಿದೆ. ಸಕಾರಾತ್ಮಕ ವಿಮರ್ಶೆ ಹೊರಬಿದ್ದ ಬೆನ್ನಲ್ಲೇ ಗಳಿಕೆಯಲ್ಲಿ ಭಾರಿ ಏರಿಕೆ ಕಂಡುಬಂದು ಐದನೇ ದಿನದ ಹೊತ್ತಿಗೆ ಸಿನಿಮಾ 1.09 ಕೋಟಿ ರೂ. ಗಳಿಸುವಲ್ಲಿ ಯಶಸ್ವಿಯಾಯಿತು.

**'ಪ್ರೇಮದ ಊರಲಿ' 14ನೇ ದಿನದ ಕಲೆಕ್ಷನ್:** ಶ್ರೀರಾಮ್, ತಪಸ್ವಿನಿ ಪೂಣಚ್ಚ, ರಮಿಕಾ ಶಿವು ಹಾಗೂ ಹಿರಿಯ ನಟ ರಂಗಾಯಣ ರಘು ಮುಖ್ಯಭೂಮಿಕೆಯಲ್ಲಿರುವ ಕನ್ನಡದ ಯಶಸ್ವಿ ಸಿನಿಮಾ ನಿನ್ನೆ ಬರೋಬ್ಬರಿ 4.56 ಕೋಟಿ ರೂಪಾಯಿ ಗಳಿಸಿದೆ. 13ನೇ ದಿನ 4.50 ಕೋಟಿ ರೂಪಾಯಿ ಗಳಿಸಿತ್ತು ಈ ಚಿತ್ರ. ಪ್ರತಿದಿನ ಗಳಿಕೆಯಲ್ಲಿ ಏರಿಕೆ ಕಂಡುಬರುತ್ತಲೇ ಇದ್ದು, ಈ ವಾರಾಂತ್ಯ ಸಿನಿಮಾ ಅದ್ಭುತ ಪ್ರದರ್ಶನ ಕಾಣುವ ನಿರೀಕ್ಷೆಯಿದೆ.




ವೆನಿಲ್ಲಾ ಎಂಟರ್‌ಟೈನ್ಮೆಂಟ್ಸ್ ಮತ್ತು ಜಾನಕಮ್ಮ ಪ್ರೊಡಕ್ಷನ್ಸ್ ಬ್ಯಾನರ್ ಅಡಿ ನಿರ್ಮಾಣಗೊಂಡಿರುವ 'ಪ್ರೇಮದ ಊರಲಿ' ಸೆಪ್ಟೆಂಬರ್ 25ಕ್ಕೆ ಕರ್ನಾಟಕದಲ್ಲಿ ತೆರೆಕಂಡಿತು. ಬಾಕ್ಸ್ ಆಫೀಸ್‌ನಲ್ಲೀಗ ಯಶಸ್ಸಿನೋಟ ಸಾಗುತ್ತಿರುವ ಹಿನ್ನೆಲೆ ಇಂದು ವಿದೇಶಗಳಲ್ಲಿಯೂ ತೆರೆಕಂಡಿದೆ. ಹಾಗಾಗಿ ಗಳಿಕೆಯಲ್ಲಿ ಮತ್ತಷ್ಟು ಏರಿಕೆಯಾಗೋದು ಬಹುತೇಕ ಪಕ್ಕಾ ಆಗಿದೆ. ಭಾರತದಲ್ಲಿ ಆಗಸ್ಟ್ 7ರಂದು ತೆರೆಕಂಡು ಯಶಸ್ವಿ ಪ್ರದರ್ಶನ ನೀಡಿದ ಹನುಮಾನ್ ಅಂಶ್ ಸೆಪ್ಟಂಬರ್ 11, 2026ರಂದು ವಿದೇಶಗಳಲ್ಲಿಯೂ ತೆರೆಕಂಡಿತು. ಸಾಗರೋತ್ತರ ಪ್ರದೇಶಗಳಲ್ಲಿ ಈ ಸಿನಿಮಾವನ್ನು ಕೆಜಿಎಫ್ ಮೇಕರ್ಸ್ ಹೊಂಬಾಳೆ ಫಿಲ್ಮ್ಸ್ ವಿತರಿಸಿತು. ವಿದೇಶಗಳಲ್ಲಿ ತೆರೆಕಂಡ ಬಳಿ ಗಳಿಕೆಯ ಅಂಕಿ-ಅಂಶಗಳು ಏರಿ 400 ಕೋಟಿ ರೂಪಾಯಿಗೂ ಅಧಿಕ ಸಂಗ್ರಹಿಸಲು ಸಾಧ್ಯವಾಯಿತು.

## ಏಷ್ಯನ್ ಚಾಂಪಿಯನ್ಸ್ ಟ್ರೋಫಿಯಿಂದ ಹಿಂದೆ ಸರಿದ ಪಾಕಿಸ್ತಾನ ಬಾಂಗ್ಲಾಗೆ ಚಾನ್ಸ್!

ಭಾರತದಲ್ಲಿ ನಡೆಯಲಿರುವ ಏಷ್ಯನ್ ಹಾಕಿ ಚಾಂಪಿಯನ್ಸ್ ಟ್ರೋಫಿ ಟೂರ್ನಮೆಂಟ್‌ನಿಂದ ಪಾಕಿಸ್ತಾನ ಹಿಂದೆ ಸರಿದಿದೆ. ಅಕ್ಟೋಬರ್ 27 ರಿಂದ ನವೆಂಬರ್ 5 ರವರೆಗೆ ಜಲಂಧರ್ ಮತ್ತು ಮೊಹಾಲಿಯಲ್ಲಿ ಪಂದ್ಯಾವಳಿ ನಡೆಯಲಿದೆ. ಆರು ತಂಡಗಳನ್ನೊಳಗೊಂಡ ಈ ಟೂರ್ನಮೆಂಟ್‌ನಿಂದ ಪಾಕಿಸ್ತಾನ ಹಿಂದೆ ಸರಿದಿದ್ದು ಅದರ ಸ್ಥಾನಕ್ಕೆ ಬಾಂಗ್ಲಾದೇಶವನ್ನು ಸೇರಿಸಲಾಗಿದೆ.

ಹಾಕಿ ಇಂಡಿಯಾ ಬಿಡುಗಡೆ ಮಾಡಿದ ಪತ್ರಿಕಾ ಪ್ರಕಟಣೆಯ ಪ್ರಕಾರ, ಭಾರತವನ್ನು ಹೊರತುಪಡಿಸಿ, ಜಪಾನ್, ಚೀನಾ, ಮಲೇಷ್ಯಾ, ದಕ್ಷಿಣ ಕೊರಿಯಾ ಮತ್ತು ಬಾಂಗ್ಲಾದೇಶ ಆರು ತಂಡಗಳ ಟೂರ್ನಮೆಂಟ್‌ನಲ್ಲಿ ಭಾಗವಹಿಸಲಿವೆ. ಈ ಟೂರ್ನಮೆಂಟ್ ಮೂಲಕ ಸುಮಾರು ಎರಡು ದಶಕಗಳ ಅಂತರದ ನಂತರ ಅಂತರರಾಷ್ಟ್ರೀಯ ಹಾಕಿ ಪಂಜಾಬ್‌ಗೆ ಮರಳುತ್ತಿದೆ ಎಂದು ತಿಳಿಸಿದೆ.

**ಭಯದಿಂದ ಹಿಂದೆ ಸರಿದ ಪಾಕಿಸ್ತಾನ!:** ಫೆಬ್ರವರಿ 2016 ರಿಂದ, ಭಾರತೀಯ ಪುರುಷರ ಹಾಕಿ ತಂಡವು ಹಿರಿಯ ಮತ್ತು ಕಿರಿಯ ಮಟ್ಟದಲ್ಲಿ ಪಾಕಿಸ್ತಾನದ ವಿರುದ್ಧ ಒಂದೇ ಒಂದು ಪಂದ್ಯವನ್ನು ಸೋತಿಲ್ಲ. ಚಾಂಪಿಯನ್ಸ್ ಟ್ರೋಫಿಯಲ್ಲಿ ಆಡಲು ಭಾರತಕ್ಕೆ ಬಂದರೆ ಸೋಲುವ ಭೀತಿಯಿಂದಾಗಿ ಹಿಂದೆ ಸರಿದಿದೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಟ್ರೋಲ್ ಮಾಡಲಾಗುತ್ತಿದೆ. ಭಾರತ ಆಯೋಜಿಸಿದ್ದ 2023ರ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಪಂದ್ಯಾವಳಿಯಲ್ಲಿ, ಪಾಕಿಸ್ತಾನ ತಂಡವು ಸೆಮಿಫೈನಲ್ ತಲುಪಲು ಸಹ ಸಾಧ್ಯವಾಗಿರಲಿಲ್ಲ. ಅಲ್ಲದೆ ಈ ಟೂರ್ನಿಯಲ್ಲಿ ಭಾರತ ಚಾಂಪಿಯನ್ ಆಗಿ ಹೊರಹೊಮ್ಮಿತ್ತು. ಈ ಟೂರ್ನಿಯ ಪೂಲ್ ಪಂದ್ಯದಲ್ಲಿ ಭಾರತ ಪಾಕಿಸ್ತಾನವನ್ನು 4-0 ಅಂತರದಿಂದ ಸೋಲಿಸಿತು ಎಂಬುದು ಗಮನಾರ್ಹ. ಕಳೆದ ತಿಂಗಳು, ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಮೊಹಾಲಿಯಲ್ಲಿ ಪಂದ್ಯಾವಳಿಯ ವೇಳಾಪಟ್ಟಿಯನ್ನು ಘೋಷಿಸಿದ್ದರು. ಈ ಕಾರ್ಯಕ್ರಮದಲ್ಲಿ ಹಾಕಿ ಇಂಡಿಯಾ ಪ್ರಧಾನ ಕಾರ್ಯದರ್ಶಿ ಭೋಲಾ ನಾಥ್ ಸಿಂಗ್ ಸೇರಿದಂತೆ ಅನೇಕ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು. ಆ ಸಮಯದಲ್ಲಿ ಬಾಂಗ್ಲಾದೇಶ ಮತ್ತು ಓಮನ್ ತಂಡಗಳನ್ನು ಮೀಸಲು ತಂಡಗಳಾಗಿ ಇರಿಸಲಾಗಿತ್ತು.



ಇದೀಗ ಪಾಕಿಸ್ತಾನ ಹಾಕಿ ಫೆಡರೇಶನ್ ಭಾರತದಲ್ಲಿ ಆಡಲು ನಿರಾಕರಿಸಿದ್ದು ಮತ್ತು ಏಷ್ಯನ್ ಹಾಕಿ ಫೆಡರೇಷನ್‌ಗೆ ತಟಸ್ಥ ಸ್ಥಳದಲ್ಲಿ ಪಂದ್ಯಾವಳಿಯನ್ನು ಆಯೋಜಿಸಬೇಕೆಂದು ಒತ್ತಾಯಿಸಿತು. ಆದರೆ ಇದಕ್ಕೆ ಎಹೆಚ್‌ಎಫ್ ನಿರಾಕರಿಸಿದೆ. ಏತನ್ಮಧ್ಯೆ, 2008ರ ಮುಂಬೈ ಭಯೋತ್ಪಾದಕ ದಾಳಿಯ ನಂತರ ಭಾರತ ಮತ್ತು ಪಾಕಿಸ್ತಾನ ನಡುವೆ ಯಾವುದೇ ದ್ವಿಪಕ್ಷೀಯ ಹಾಕಿ ಸರಣಿಗಳು ನಡೆದಿಲ್ಲ. ಪಾಕಿಸ್ತಾನವು ಕೊನೆಯ ಬಾರಿಗೆ 2023ರಲ್ಲಿ ಭಾರತದಲ್ಲಿ ಏಷ್ಯನ್ ಚಾಂಪಿಯನ್ಸ್ ಟ್ರೋಫಿಯನ್ನು ಆಡಿತು, ಅಲ್ಲಿ ಐದನೇ ಸ್ಥಾನ ಪಡೆದುಕೊಂಡಿತ್ತು. ಕಳೆದ ವರ್ಷ ಭಾರತದಲ್ಲಿ ನಡೆದ ಏಷ್ಯಾ ಕಪ್ ಮತ್ತು ಜೂನಿಯರ್ ಏಷ್ಯಾ ಕಪ್ ಅನ್ನು ಸಹ ಪಾಕಿಸ್ತಾನ ತಪ್ಪಿಸಿಕೊಂಡಿತು.



ಜಪಾನ್‌ನಲ್ಲಿ ನಡೆದ ಏಷ್ಯನ್ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಗೆದ್ದ ಭಾರತೀಯ ಹಾಕಿ ತಂಡ, ಇದುವರೆಗೆ ನಾಲ್ಕು ಬಾರಿ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಮೆಂಟ್ ಪ್ರಶಸ್ತಿಯನ್ನು ಗೆದ್ದಿದೆ. 2026ರ ಚಾಂಪಿಯನ್ಸ್ ಟ್ರೋಫಿಗೆ ಸಂಬಂಧಿಸಿದಂತೆ, ಭಾರತದ ಮುಖ್ಯ ತರಬೇತುದಾರ ಕ್ರೇಗ್ ಫುಲ್ಟನ್ ಅವರು ಹಾಕಿ ಇಂಡಿಯಾ ತಂಡದ ಸಿದ್ಧತೆಗಳ ಕುರಿತು ಬಿಡುಗಡೆ ಮಾಡಿದ ಹೇಳಿಕೆಯಲ್ಲಿ, "ಏಷ್ಯನ್ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಗೆಲ್ಲುವುದು ವಿಶೇಷ ಸಾಧನೆಯಾಗಿತ್ತು, ಆದರೆ ಈಗ ಅದು ಹಳೆಯ ವಿಷಯವಾಗಿದೆ ಮತ್ತು ನಮ್ಮ ಸಂಪೂರ್ಣ ಗಮನ ಏಷ್ಯನ್ ಚಾಂಪಿಯನ್ಸ್ ಟ್ರೋಫಿಯ ಮೇಲೆ ಇರಲಿದೆ, ಇದರಲ್ಲಿ ಅದೇ ಫಾರ್ಮ್ ಅನ್ನು ಮುಂದುವರಿಸಲು ಪ್ರಯತ್ನಿಸುತ್ತೇವೆ" ಎಂದು ತಿಳಿಸಿದ್ದಾರೆ.

## BCCIಗೆ ಗಾಯದ ಸಮಸ್ಯೆಗಳ ತಲೆನೋವು

### ಒಂದು ವರ್ಷದಲ್ಲಿ 32 ಪ್ರಮುಖ ಆಟಗಾರರಿಗೆ ಚಿಕಿತ್ಸೆ, ಬಜೆಟ್ 127 ಕೋಟಿಗೆ ಏರಿಕೆ!

ವರದಿಯೊಂದರ ಪ್ರಕಾರ, ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ 'ಸೆಂಟರ್ ಆಫ್ ಎಕ್ಸಲೆನ್ಸ್' ಕಳೆದ ಒಂದು ವರ್ಷದ ಅವಧಿಯಲ್ಲಿ ಭಾರತದ 32 ಪ್ರಮುಖ ಪುರುಷ ಕ್ರಿಕೆಟಿಗರಿಗೆ ಚಿಕಿತ್ಸೆ ನೀಡಿದೆ. ಭಾರತೀಯ ಆಟಗಾರರು, ಅದರಲ್ಲೂ ವಿಶೇಷವಾಗಿ ಬಿಸಿಸಿಐನೊಂದಿಗೆ ಸೆಂಟ್ರಲ್ ಕಾಂಟ್ರಾಕ್ಟ್ ಹೊಂದಿರುವವರು ಪದೇ ಪದೇ ಗಾಯದ ಸಮಸ್ಯೆಗಳಿಗೆ ಒಳಗಾಗುತ್ತಿರುವ ಬಗ್ಗೆ ಕಳವಳ ವ್ಯಕ್ತವಾಗುತ್ತಿರುವ ನಡುವೆಯೇ ಈ ಬೆಳವಣಿಗೆ ನಡೆದಿದೆ. 'ಟೈಮ್ಸ್ ಆಫ್ ಇಂಡಿಯಾ' ವರದಿ ಪ್ರಕಾರ, ಇಂಡಿಯನ್ ಪ್ರೀಮಿಯರ್ ಲೀಗ್‌ನ ಕಳೆದ ಆವೃತ್ತಿಯ ನಂತರ CoEಗೆ ಭೇಟಿ ನೀಡುವ ಆಟಗಾರರ ಸಂಖ್ಯೆ ಹೆಚ್ಚಾಗಿದೆ. ಗಾಯದ ಸಮಸ್ಯೆಯ ಬಿಕ್ಕಟ್ಟನ್ನು ನಿಭಾಯಿಸಲು, ಬಿಸಿಸಿಐ ಸದ್ಯದ ಹಣಕಾಸು ವರ್ಷಕ್ಕೆ CoEಯ ಬಜೆಟ್ ಅನ್ನು ಸುಮಾರು 35 ಕೋಟಿಗಳಷ್ಟು ಹೆಚ್ಚಿಸಿ, ಅದನ್ನು 127 ಕೋಟಿಗೆ ಏರಿಸಿದೆ. ಹಿಂದಿನ ಹಣಕಾಸು ವರ್ಷದಲ್ಲಿ ಈ ಬಜೆಟ್ 92 ಕೋಟಿಗಳಷ್ಟಿತ್ತು. ಆಟಗಾರರು ಪದೇ ಪದೇ ಗಾಯದ ಸಮಸ್ಯೆಗೆ ಒಳಗಾಗುತ್ತಿರುವ ಬಗ್ಗೆ ಮುಖ್ಯ ಕೋಚ್ ಗೌತಮ್ ಗಂಭೀರ್ ಹಾಗೂ ಟೆಸ್ಟ್ ಮತ್ತು ಏಕದಿನ ತಂಡದ ನಾಯಕ ಶುಭಮನ್ ಗಿಲ್ ಕಳವಳ ವ್ಯಕ್ತಪಡಿಸಿರುವ ಹಿನ್ನೆಲೆಯಲ್ಲಿ, ಬಿಸಿಸಿಐ ತನ್ನ 'ಸೆಂಟರ್ ಆಫ್ ಎಕ್ಸಲೆನ್ಸ್' ನಲ್ಲಿನ ಗಾಯ ನಿರ್ವಹಣಾ ಕಾರ್ಯಕ್ರಮದತ್ತ ಗಮನಹರಿಸಿದೆ ಎಂದು ವರದಿ ತಿಳಿಸಿದೆ. ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮ ಅವರಂತಹ ಪ್ರಮುಖ ಆಟಗಾರರು ಕಳೆದ ಒಂದು ವರ್ಷದ ಅವಧಿಯಲ್ಲಿ ಚೇತರಿಕೆ ಪ್ರಕ್ರಿಯೆಗಾಗಿ (ಈ 'ಸೆಂಟರ್ ಆಫ್ ಎಕ್ಸಲೆನ್ಸ್'ಗೆ ಭೇಟಿ ನೀಡಿದ್ದಾರೆ. ರೋಹಿತ್ ಈ ವರ್ಷದ ಆರಂಭದಲ್ಲಿ ಹಾರ್ಮ್‌ಸ್ಟ್ರಿಂಗ್ ಗಾಯದಿಂದಾಗಿ ಚಿಕಿತ್ಸೆಗಾಗಿ ಅಲ್ಲಿಗೆ ಭೇಟಿ ನೀಡಿದ್ದರೆ, ಕೊಹ್ಲಿ ಇದೇ ಮೊದಲ ಬಾರಿಗೆ ಈ ಕೇಂದ್ರಕ್ಕೆ ಭೇಟಿ ನೀಡಿದರು. ಜಸ್ಪ್ರೀತ್ ಬುಮ್ರಾ, ಹಾರ್ದಿಕ್ ಪಾಂಡ್ಯ, ವಾಷಿಂಗ್ಟನ್ ಸುಂದರ್, ನಿತೀಶ್ ಕುಮಾರ್ ರೆಡ್ಡಿ, ಹರ್ಷಿತ್ ರಾಣಾ ಮತ್ತು ಪ್ರಸಿದ್ಧ್ ಕೃಷ್ಣ ಅವರು 'ಸೆಂಟರ್ ಆಫ್ ಎಕ್ಸಲೆನ್ಸ್'ಗೆ ನಿಯಮಿತವಾಗಿ ಭೇಟಿ ನೀಡುತ್ತಿರುತ್ತಾರೆ. ಆದರೆ, ಪುನಶ್ಚೇತನ ಚಿಕಿತ್ಸೆಗಾಗಿ ಅವರು ಎಷ್ಟು ಬಾರಿ ಅಲ್ಲಿಗೆ ತೆರಳಬೇಕಾಯಿತು ಎಂಬ ಬಗ್ಗೆ ವರದಿಯಲ್ಲಿ ಉಲ್ಲೇಖವಿಲ್ಲ. ಕುತೂಹಲಕಾರಿ ಸಂಗತಿಯೆಂದರೆ, ಕಳೆದ 20 ತಿಂಗಳುಗಳಲ್ಲಿ CoEನಲ್ಲಿ ಒಟ್ಟು 68 ಆಟಗಾರರಿಗೆ (ಪುರುಷ ಮತ್ತು ಮಹಿಳಾ ಆಟಗಾರರು) ಚಿಕಿತ್ಸೆ ನೀಡಲಾಗಿದೆ ಮತ್ತು ಇವರಲ್ಲಿ ಹೆಚ್ಚಿನವರಿಗೆ soft-tissue ಗಾಯಗಳಾಗಿವೆ.

ಗಾಯದ ಕಾರಣದಿಂದ ವೈದ್ಯಕೀಯ ಚಿಕಿತ್ಸೆಯ ಅಗತ್ಯವಿದ್ದ ಏಕೈಕ ವ್ಯಕ್ತಿ ರಿಷಬ್ ಪಂತ್ ಆಗಿದ್ದರು. ಕಳೆದ ವರ್ಷ ಮ್ಯಾಂಚೆಸ್ಟರ್ ಟೆಸ್ಟ್ ಪಂದ್ಯದ ವೇಳೆ ಉಂಟಾದ ಕಾಲಿನ ಮೂಳೆ ಮುರಿತಕ್ಕೆ ಅವರಿಗೆ ಚಿಕಿತ್ಸೆ ನೀಡಲಾಗಿತ್ತು.

## 'ಸಿದ್ಧರಾಗಿರಿ' ಎಂದು RCB ನನಗೆ ಹೇಳಿತ್ತು, ವಿರಾಟ್ ಕೊಹ್ಲಿಯನ್ನು ನಾಯಕತ್ವದಿಂದ ಕೆಳಗಿಳಿಸಲು ಚಿಂತನೆ ನಡೆಸಿತ್ತು: ಪಾರ್ಥೀವ್ ಪಟೇಲ್



ಐಪಿಎಲ್‌ನಲ್ಲಿ ವಿರಾಟ್ ಕೊಹ್ಲಿ ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು ಹೆಸರುಗಳು ಒಂದಕ್ಕೊಂದು ಪರ್ಯಾಯವಾಗಿವೆ. ಐಪಿಎಲ್‌ನಲ್ಲಿ ತಾವು ಆಡುವ ಏಕೈಕ ತಂಡ ಆರ್‌ಸಿಬಿ ಎಂದು ಕೊಹ್ಲಿ ಹಲವು ಬಾರಿ ಹೇಳಿದ್ದಾರೆ. 2008ರ ಉದ್ಘಾಟನಾ ಆವೃತ್ತಿಯಿಂದಲೂ ಈ ತಂಡದೊಂದಿಗೆ ಗುರುತಿಸಿಕೊಂಡಿರುವ ಕೊಹ್ಲಿ, ತಂಡಕ್ಕಾಗಿ ಹಲವು ಪಂದ್ಯ-ಗೆಲ್ಲುವ ಇನಿಂಗ್ಸ್‌ಗಳನ್ನು ಆಡಿದ್ದಾರೆ ಹಾಗೂ 2013ರಿಂದ 2021ರವರೆಗೆ ತಂಡದ ನಾಯಕತ್ವವನ್ನೂ ವಹಿಸಿದ್ದರು. ಆದಾಗ್ಯೂ, 2025ರಲ್ಲಿ ರಜತ್ ಪಾಟೀದಾರ್ ನಾಯಕತ್ವದಲ್ಲಿ ಆರ್‌ಸಿಬಿ ತಮ್ಮ ಮೊದಲ ಐಪಿಎಲ್ ಪ್ರಶಸ್ತಿ ಗೆದ್ದುಕೊಂಡಿತು. ನಂತರ, 2026ರಲ್ಲಿ ಆರ್‌ಸಿಬಿ ಯಶಸ್ವಿಯಾಗಿ ಪ್ರಶಸ್ತಿಯನ್ನು ಉಳಿಸಿಕೊಂಡಿತು. ಆರ್‌ಸಿಬಿ ತಂಡವು ಕೊಹ್ಲಿಗೆ ತನ್ನ ಬೆಂಬಲವನ್ನು ನೀಡುತ್ತಾ ಬಂದಿದ್ದರೂ, 2019ರ ಐಪಿಎಲ್‌ಗೂ ಮುನ್ನ ತಮಗೆ ನಾಯಕತ್ವದ ಅವಕಾಶವನ್ನು ನೀಡಲಾಗಿತ್ತು ಎಂದು ಮಾಜಿ ವಿಕೆಟ್ ಕೀಪರ್ ಪಾರ್ಥಿವ್ ಪಟೇಲ್ ಬಹಿರಂಗಪಡಿಸಿದ್ದಾರೆ. 'ನಿಮಗೆ ಆರ್‌ಸಿಬಿ ತಂಡದ ನಾಯಕತ್ವವನ್ನು ನೀಡುವ ಪ್ರಸ್ತಾಪವಿತ್ತೇ?' ಎಂದು ಆಕಾಶ್ ಚೋಪ್ರಾ ಅವರು ಪಟೇಲ್ ಅವರನ್ನು ಕೇಳಿದರು. 'ನಾನು ಈ ಬಗ್ಗೆ ಎಂದಿಗೂ ಬಹಿರಂಗವಾಗಿ ಮಾತನಾಡಿರಲಿಲ್ಲ, ಆದರೆ ಮೊಯೀನ್ ಅಲಿ ಅವರು ಒಂದು ಸಂದರ್ಶನದಲ್ಲಿ ಇದನ್ನು ಪ್ರಸ್ತಾಪಿಸಿದ್ದರು. ವಾಸ್ತವವೇನೆಂದರೆ, 'ಸಿದ್ಧರಾಗಿರಿ, ಮುಂದಿನ ವರ್ಷಕ್ಕಾಗಿ ನಾವು ಈ ಬಗ್ಗೆ ಯೋಚಿಸುತ್ತಿದ್ದೇವೆ' ಎಂದು ನನಗೆ ಹೇಳಲಾಗಿತ್ತು. ಆದರೆ, ಆ ಪ್ರಸ್ತಾಪವನ್ನು ಮುಂದಿಟ್ಟಿದ್ದ ಇಬ್ಬರು ವ್ಯಕ್ತಿಗಳನ್ನು (ಆಶಿಶ್ ನೆಹ್ರಾ ಮತ್ತು ಗ್ಯಾರಿ ಕರ್ಸ್ಟನ್) ನಂತರದ ವರ್ಷದಲ್ಲಿ ಬದಲಾಯಿಸಲಾಯಿತು. ಹೊಸ ಕೋಚ್‌ಗಳು ಬಂದರು ಮತ್ತು ಆ ಸಂಪೂರ್ಣ ಸೀಸನ್‌ನಲ್ಲಿ ನನಗೆ ಒಂದೇ ಒಂದು ಪಂದ್ಯವನ್ನೂ ಆಡುವ ಅವಕಾಶ ಸಿಗಲಿಲ್ಲ' ಎಂದು ಪಾರ್ಥಿವ್, ಆಕಾಶ್ ಚೋಪ್ರಾ ಅವರ ಯೂಟ್ಯೂಬ್ ಚಾನೆಲ್‌ನಲ್ಲಿ ಹೇಳಿದರು. ಒಂದು ಕಾಲದಲ್ಲಿ ಆರ್‌ಸಿಬಿ ತಂಡದ ಭಾಗವಾಗಿದ್ದ ಇಂಗ್ಲೆಂಡ್‌ನ ಮಾಜಿ ಆಲ್‌ರೌಂಡರ್ ಮೊಯೀನ್ ಅಲಿ, 2019ರ ಐಪಿಎಲ್ ವೇಳೆ ಫ್ರಾಂಚೈಸಿಯು ಕೊಹ್ಲಿಯನ್ನು ನಾಯಕತ್ವದಿಂದ ಕೆಳಗಿಳಿಸಿ, ವಿಕೆಟ್ ಕೀಪರ್-ಬ್ಯಾಟರ್ ಪಾರ್ಥಿವ್ ಪಟೇಲ್ ಅವರನ್ನು ಹೊಸ ನಾಯಕರನ್ನಾಗಿ ನೇಮಿಸಲು ಯೋಜಿಸುತ್ತಿತ್ತು ಎಂದು ಈ ಹಿಂದೆ ಬಹಿರಂಗಪಡಿಸಿದ್ದರು.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper. udayavahini.in www.udayavahini.in Udaya vahini news Udaya vahini news